
ಕದಂಬ

ಕದಂಬ

ಕದಂಬ ಪ್ರಕಾಶನ

ಶಿರಸಿ

# ಪುಸ್ತಕ: ಕದಂಬ

## ನಿವೇದನೆ: ಅನಂತಕುಮಾರ ಹೆಗಡೆ

## ನಿರೂಪಣೆ: ದಿವಾಕರ ಹೆಗಡೆ

ಪ್ರಕಾಶನ ಸಂಸ್ಥೆ : ಫ್ಯೂಚುರಾ ಡಿಜಿಟಲ್ ಕಲರ್ ಪ್ರೆಸ್
ಕೃಷ್ಣ ರಾಜೇಂದ್ರ ರಸ್ತೆ, ಯಡಿಯೂರು ಲೇಕ್ ಹತ್ತಿರ, ಟಾಟಾ ಸಿಲ್ಕ್ ಫಾರ್ಮ್,
ಜಯನಗರ, ಬೆಂಗಳೂರು, ಕರ್ನಾಟಕ 560070

ಪ್ರಕಾಶನದ ದಿನಾಂಕ : 13 /03 /2024
ಪ್ರಕಟಿಸಿದ ಪುಸ್ತಕಗಳ ಸಂಖ್ಯೆ : 100
ಪುಸ್ತಕದ ಪುಟಗಳು : 90

... ಪ್ರೀತಿಯ ಓದುಗರಿಗೆ ಪ್ರೀತಿಯ ಕೊಡುಗೆ ...

# ಅರಿಕೆ

ಜನ ಸೇವೆಯಲ್ಲಿ ತೃಪ್ತಿಯನ್ನು ಕಾಣುವ ಹುಡುಕಾಟದಲ್ಲಿ ಅಲೆಮಾರಿಯಾಗಿ ಗತಿಸಿದ ಎರಡೂವರೆ ದಶಕಗಳ ನನ್ನ ಅನುಭವಗಳನ್ನು ಅಕ್ಷರ ರೂಪದಲ್ಲಿ ಇಳಿಸುವ ಪ್ರಯತ್ನ ಮಾಡುತ್ತಿದ್ದೇನೆ. ಬಂದ ಆಲೋಚನೆಗಳಿಗೆ, ಮನದಾಳದ ಅನಿಸಿಕೆಗಳಿಗೆ ಸಾರ್ವಜನಿಕವಾಗಿ ರೂಪ ಕೊಡುವಾಗ ಅದರ ಹರವು ಮತ್ತು ಹರಿವೇ ಬೇರೆ. ಒಬ್ಬನೇ ಕುಳಿತಾಗ ಬರುವ ವಿಚಾರಗಳಿಗೆ ಶಬ್ದರೂಪ ಕೊಡುವ ಅನುಭಾವವೇ ಬೇರೆ. ಬದುಕು ನಿಂತ ನೀರಾಗದೆ ನಿರಂತರ ಚಲನಶೀಲವಾಗಿರಲು ಹೊಸ ಹೊಸ ಅಭ್ಯಾಸಗಳ ಜೊತೆ ಹೊಸ ಪ್ರಯೋಗಗಳೂ ಅತ್ಯಂತ ಅನಿವಾರ್ಯ. ಬದುಕಿನಲ್ಲಿ ಮೌಲ್ಯಗಳ ಆರಾಧನೆ ಮಾಡಬೇಕೆಂದಾದಲ್ಲಿ ಅಂತರಾಳದ ನಮ್ಮ ಕಲ್ಪನೆಯೊಂದಿಗೆ ನಿತ್ಯ ಜೀವನವನ್ನು ಹೆಣೆಯಲೇಬೇಕು. ಆ ಒಂದು ಪ್ರಯೋಗವೇ ಕದಂಬ. ನಮ್ಮೊಂದಿಗೆ ಜೊತೆಯಾಗಿರುವ ನೂರಾರು ಕನಸುಗಳಿಗೆ ಜೀವ ತುಂಬುವ ಪ್ರಯತ್ನ ನಮ್ಮದು. ಭಗವಂತ ನಮ್ಮ ಈ ದಾರಿಯಲ್ಲಿ ಎಷ್ಟರಮಟ್ಟಿಗೆ ಶ್ರೇಯಸ್ಸು ಕೊಟ್ಟಾನೋ ಗೊತ್ತಿಲ್ಲ. ಆದರೆ ಆ ಭಗವಂತನನ್ನು ಎಳೆದು ತಂದು ನಮ್ಮ ಕಾಯಕದೊಂದಿಗೆ ಜೋಡಿಸಿಕೊಳ್ಳುವ ಇಚ್ಛಾಶಕ್ತಿಯಂತೂ ನನ್ನೊಂದಿಗಿದೆ.

ಹಳ್ಳಿಗಾಡಿನ ಬದುಕನ್ನು ದೂರದಿಂದ ನೋಡಿದಾಗ ಅದು ಅತ್ಯಂತ ಸುಂದರ. ಆದರೆ ಅದರ ಅಂತರಾಳಕ್ಕಿಳಿದಾಗ ಅಲ್ಲಿರುವ ಸುಳಿಗಳ ಸೆಳೆತವೇ ಬೇರೆ. ಹೀಗೊಂದು ದಿನ, ಅಕ್ಷರಗಳೊಂದಿಗೆ ಹರಟೆಹೊಡೆಯುತ್ತಿದ್ದಾಗ ಹಳ್ಳಿಯ ಕನಸುಗಳ ಕುರಿತಂತೆ ಮೂಡಿಬಂದ ಶಬ್ದಗಳನ್ನೇ ನಿಮ್ಮೊಂದಿಗೆ ಹಂಚಿಕೊಳ್ಳಬಹುದಾದಲ್ಲಿ;

ನೂರೊಂದು ಹಗಲುಗಳೇ
ಇರುಳೊಳಗೆ ಉರುಳಾಗಿ
ಹಾರದಿಹ ಹಕ್ಕಿಗಳೇ ಬಲೆಯಲ್ಲಿ ಶವವಾಗಿ
ಕತ್ತಲೆಯ ಕಪ್ಪಿನೊಳು
ನೂರೆಂಟು ಕನಸುಗಳು
ಕಪ್ಪಿನಲೇ ಮಣ್ಣಾಗುವ ಕನಸುಗಳೇ ಕುರುಡುಗಳು
ಬೆಳಕೆಂದರೇನೆಂಬ ಭಾವನೆಯ ಭಾವುಕರೆ
ನೂರೊಂದು ಹಗಲುಗಳೇ!

ಅಂತೆಯೇ ಆ ಕತ್ತಲೆಯ ಕನಸುಗಳಿಗೆ ಬೆಳಕನುಣಿಸುವ ಸಂಕಲ್ಪದಲ್ಲಿ ಕದಂಬ ರೂಪುಗೊಂಡಿತ್ತು. ಈಗ ಅಂಬೆಗಾಲಿಕ್ಕಿ ಮುಂದಕ್ಕೆ ತೆವಳುತ್ತಿದೆ. ಕೈ ಹಿಡಿದು ನಡೆಸುವ ಪ್ರಯತ್ನದಲ್ಲಿ ಆ ಎಲ್ಲ ಹಳ್ಳಿಯ ಕನಸುಗಳೇ ಜೊತೆಯಾಗಿವೆ. ಬದುಕಿಗೆ ಮುಂದಿನ ಭರವಸೆಯ ಬೆಂಬಲ ನೀಡುವ ಸಹೃದಯಿಗಳ ಸಹಕಾರದ ಅಗತ್ಯವಿದೆ. ದಾರಿ ಮುಂದಕ್ಕೆ ಸಾಗುತ್ತಿದೆ.

"ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆಮುಂದೆ।
ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ॥"

# ಕೃತಜ್ಞತೆಗಳು

ಸರಿ ಸುಮಾರು ಎರಡು ದಶಕಗಳ ಈ ಪಯಣದಲ್ಲಿ ನೆರಳಿನ ನಿಲ್ದಾಣವಾಗಿ, ನೀರಿನಾಸರೆಯಾಗಿ ನೆರವಿಗೆ ಬಂದವರು, ಹುರಿದುಂಬಿಸಿ ದಾರಿಯ ದೀಪವಾದವರು ಅನೇಕರು. ಕಾನೂನು ತಜ್ಞ ಲೆಕ್ಕ ಪರಿಶೋಧಕ ಬೆಂಗಳೂರಿನ ಶ್ರೀ ಕೆ.ಆರ್. ಪ್ರದೀಪ, ಸಾಹಿತಿ ರಾಜನೀತಿಜ್ಞೆ, ಪ್ರಸ್ತುತ ಗೋವಾ ರಾಜ್ಯಪಾಲರಾಗಿದ್ದ ಶ್ರೀಮತಿ ಮೃದುಲಾ ಸಿನ್ಹ, ಸಹೃದಯೀ ಐಎಎಸ್ ಅಧಿಕಾರಿ ಶ್ರೀ ಎನ್. ಶಿವಶೈಲಂ ಅವರುಗಳನ್ನು ಅತ್ಯಂತ ಕೃತಜ್ಞನಾಗಿ ಸ್ಮರಿಸಿಕೊಳ್ಳುತ್ತೇನೆ. ಅಂತೆಯೇ, ನಿಟ್ಟೆ ಶಿಕ್ಷಣ ಸಂಸ್ಥೆಯ ಶ್ರೀ ವಿನಯ ಹೆಗ್ಡೆಯವರ ಸಹಕಾರ, ನಿಜಕ್ಕೂ ಅದೊಂದು ತೀರಿಸಲಾಗದ ಋಣ, ಅವರಿಗೆ ನನ್ನ ಹೃತ್ಪೂರ್ವಕ ನಮನಗಳು.

ನನ್ನ ಕೈ ಹಿಡಿದ ನಂತರ ಕೇವಲ ಬಾಳ ಸಂಗಾತಿಯಾಗಿರದೆ ಸಮಾಜಿಕ ಕಾರ್ಯದಲ್ಲೂ ಸಂಗಾತಿಯಾಗಿ ಹೆಜ್ಜೆಯೊಂದಿಗೆ ಹೆಜ್ಜೆಯಿಟ್ಟು, ಕದಂಬ ಸಂಸ್ಥೆಯ ನಮ್ಮೆಲ್ಲ ಸ್ವಯಂಸೇವಕರಿಗೆ ಹಿರಿಯಕ್ಕನಾಗಿ ಅವರೆಲ್ಲರ ಕಷ್ಟ ಸುಖಗಳಲ್ಲಿ ಏರಿಳಿತಗಳಲ್ಲಿ ಜೊತೆಯಲ್ಲಿ ನಿಂತು ಧೈರ್ಯ ನೀಡಿ ಮುನ್ನಡೆಸಿದವಳು ನನ್ನ ಮನೆಯೊಡತಿ ಶ್ರೀರೂಪ (ಕದಂಬದ ರೂಪಕ್ಕ). ಇಂದಿಗೂ ಕದಂಬದ ಸಾರಥಿ ಅವಳೇ. ನನ್ನದು ಕೇವಲ ಹೆಸರು ಮಾತ್ರ. ಕಷ್ಟದ ದಿನಗಳಲ್ಲಿ ಅವಳು ತೋರಿದ ಗಟ್ಟಿತನ ಮತ್ತು ತ್ಯಾಗ ಅದೇ ಇಂದಿನ ಕದಂಬದ ಅಡಿಪಾಯ. ಅಂತೆಯೇ, ನನ್ನ ಚಿಂತನೆ ಯೋಜನೆಗಳಿಗೆ ಕೈಕಾಲುಗಳಾಗಿ ದುಡಿದವರು ಇನ್ನೂ ಅನೇಕ ಜನ. ಶ್ರೀಯುತರಾದ ಸುಭಾಷ್ ಮಂಡೂರ, ಮಹಾಬಲೇಶ್ವರ ನಾಯ್ಕ, ರಮೇಶ ಹೆಗಡೆ ದೊಡ್ನಳ್ಳಿ, ಗೋಪಾಲ ದೇವಾಡಿಗ, ಮಹಾಬಲೇಶ್ವರ ಮಡಿವಾಳ, ಸುಭಾಷ್ ನಾಯ್ಕ, ಶ್ರೀಪಾದ ಎನ್.ಭಟ್, ರಮಾನಂದ ನಾಯ್ಕ, ಹೆಗ್ಗುಂಬ್ಳಿ ಸತೀಶ ಹೆಗಡೆ,
ನಾಗರಾಜ ಭಟ್, ಸುರೇಶ ಶೆಟ್ಟಿ, ಮಂಜುನಾಥ ಪೂಜಾರಿ, ಶ್ರೀಮತಿಯರಾದ ಯಶೋದಾ, ನಂದಿನಿ ಮೊಗೇರ, ಶಿರಾಲಿಯ ಸುಭದ್ರಕ್ಕ ..ಪಟ್ಟಿ ತುಂಬ ದೊಡ್ಡದಿದೆ. ಅವರೆಲ್ಲರಿಗೂ ನನ್ನ ಹೃದಯದಾಳದ ಕೃತಜ್ಞತೆಗಳು.

ಜೊತೆಯಲ್ಲಿ ನಮ್ಮದೇ ಸೇವಾ ಅಭಿಯಾನವೆಂದು ತಿಳಿದು ಕೈಜೋಡಿಸಿದ ಭಾರತೀಯ ಜನತಾ ಪಾರ್ಟಿಯ, ಹಿಂದು ಜಾಗರಣ ವೇದಿಕೆಯ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಸಂಖ್ಯ ಕಾರ್ಯಕರ್ತರ, ಹಿರಿಯರ ಅಮೂಲ್ಯ ಸಹಯೋಗವನ್ನು ನಾನು ತಲೆಬಾಗಿ ನೆನೆಪಿಸಿಕೊಳ್ಳುತ್ತೇನೆ. ನಾನೋರ್ವ ಒಂದು ಪಕ್ಷದ ರಾಜಕಾರಣಿಯೆನಿಸಿದರೂ ನಮ್ಮೀ ಕದಂಬದ ಕಾರ್ಯದಲ್ಲಿ ರಾಜಕೀಯವನ್ನು ಕಾಣದೆ ವಸ್ತುನಿಷ್ಠ ಸೇವೆಯನ್ನು ಬೆಂಬಲಿಸುತ್ತ ಬಂದ ಇತರೇ ಎಲ್ಲ ರಾಜಕೀಯ ಪಕ್ಷದ ಧುರೀಣರಿಗೆ ನಾನು ಕೃತಜ್ಞನಾಗಿದ್ದೇನೆ.

# ಪರಿವಿಡಿ


ಜನಪ್ರತಿನಿಧಿ – ಜನಸೇವೆ ---- 05

ಸೋಲು ನೀಡಿದ ಕಾಲಾವಕಾಶ ---- 08

ಮೂಡಿಬಂದ ಕದಂಬ ---- 10

ಕದಂಬ ಫೌಂಡೇಶನ್ ---- 11

ಮನೆಯಂಗಳದ ಅಂಗನವಾಡಿಗಳು ---- 12

ಕೂಲಿಯಾಳುಗಳ "ಸಿಂಡ್‌ಕುಟೀರ" ---- 17

ಆರೋಗ್ಯ ಸಂಜೀವನಿ ---- 20

ವಿಘ್ನ ಸಂತೋಷಿಗಳಿಂದ ಬಂದ ಅಗ್ನಿದಿವ್ಯ ---- 25

ರಾತ್ರಿಯನ್ನು ಬೆಳಗಿದ ಹಗಲಿನ ದೀಪ ---- 26

ಸ್ವಸಹಾಯದ ಸ್ವಾವಲಂಬನ ---- 27

ಕೈ ಹಿಡಿದ ಕೌಶಲ್ಯ ---- 30

ಸಂಕಷ್ಟದಲ್ಲಿ ಸಾಂತ್ವನ ---- 34

ಮೌಲ್ಯ ನೀಡಿದ ಮಾರುಕಟ್ಟೆ ---- 37

ಸೌಹಾರ್ದ–ಸಹಕಾರ ---- 40

ಹಸಿರು ಪರಿಸರ ---- 43

ನೋವಿಗೊಂದು ನೆರವು ---- 46

ಮರದ ನೆರಳಿನ ಅಮರ ವಿದ್ಯೆ ---- 50

ಕೃಷಿಗೆ ಕಾಮಧೇನುವಾದ ಸೂಕ್ಷ್ಮಾಣುಜೀವಿ ತಂತ್ರಜ್ಞಾನ ---- 54

ಉತ್ತರ ಕನ್ನಡ ತೋಟಗಾರಿಕೆ ಜಿಲ್ಲೆ ---- 55

ಪೂರ್ಣತೆಯತ್ತ ಪೂರಕ ಕೃಷಿ ---- 58

ಏರಿಯ ಮೇಲಿನ ಗೇರು ---- 62
ಸುಗಂಧ ಕೃಷಿಯ ಸಮೃದ್ಧ ಅವಕಾಶ ---- 62
ಬಹು ಬೇಡಿಕೆಯ ಪಾಮರೋಸಾ ---- 62
ಸ್ವಾಭಾವಿಕ ಕೀಟನಾಶಕ ಸಿಟ್ರನೆಲ್ಲ ---- 63
ಪುನರುಜ್ಜೀವನದತ್ತ ವೆನಿಲ್ಲಾ ---- 64
ಕರೆತಂದ ಕೋಕೊ ---- 65
ಧನಲಕ್ಷ್ಮಿಯಾಗಬಲ್ಲ ಧೂಪದ್ರವ್ಯ ಅಗರ್‌ವುಡ್ ---- 67
ಕೀಟದ ಅರಗು ಕೃಷಿಯ ಮೆರಗು ---- 70
ಆಹಾರಕ್ಕೆ ಅಲಂಕಾರಕ್ಕೆ ಮತ್ಸ್ಯೋದ್ಯಮ ---- 73
ಬಿಟ್ಟವೆಂಬ ಬಳಕೆಯ ಆಸ್ತಿ ---- 74
ಬೆಳಕಿಗೆ ಬಂದ ಕಪ್ಪು ಅರಿಷಿಣ ---- 77
ಅಂಗೈಯಲ್ಲಿ ಹಿಡಿದ ಆಕಾಶ ಮೊಬಿಟೆಕ್ ---- 78
ಕದಂಬ ವನ ---- 79
ಭವಿಷ್ಯದ ಅನ್ನ ಸೂಪರ್ ಫುಡ್ ---- 81
ನೀರನ್ನು-ಅಗೋದಿ ಧಾನ್ ---- 83
ಚೈತನ್ಯಾಹಾರ (Functional Food) ---- 84
ವಿಶ್ವದ ಭರವಸೆ "ಗ್ರೀನ್ ನ್ಯಾನೋ ತಂತ್ರಜ್ಞಾನ" ---- 85
ಡಾ. ಕಟ್ಟೇಶ ವಿ. ಕಟ್ಟಿ ---- 87
ತಾಯ್ನೆಲದ ಸೇವೆಯಲ್ಲಿ ಮುಗಿಯದ ಪೂಜೆ ---- 88

# ಜನಪ್ರತಿನಿಧಿ – ಜನಸೇವೆ

ಜನಪ್ರತಿನಿಧಿ, ಜನನಾಯಕ ಎನ್ನುವ ಪದಗಳು ಪ್ರಜಾಪ್ರಭುತ್ವಕ್ಕೆ ಬಹಳ ಮುಖ್ಯವಾದ ಸಂಗತಿಗಳಾಗಿವೆ. ಜನ ಪ್ರತಿನಿಧಿಗಳೇ ಶಾಸಕರೂ ಸಂಸದರೂ ಆಗಿರುವುದರಿಂದ ಶಾಸನ ಮತ್ತು ಆಡಳಿತದ ಹೊಣೆಗಾರಿಕೆ ಅವರನ್ನೇ ಅವಲಂಬಿಸುತ್ತದೆ. 'ಸಮಾಜ ತನ್ನ ಇಷ್ಟದ ನಾಯಕನನ್ನು ಪಡೆಯುವುದಿಲ್ಲ, ತನ್ನ ಅರ್ಹತೆಗೆ ತಕ್ಕ ನಾಯಕನನ್ನು ಪಡೆಯುತ್ತದೆ' ಎಂಬ ಮಾತು ಪ್ರಸಿದ್ಧವಿದೆ. ಆದರೂ ಸಮಾಜದ ಮುಖದಲ್ಲಿರುವವರ ಶೀಲ ಆ ಸಮಾಜದ ಮೌಲ್ಯಗಳನ್ನು ನಿರ್ಧರಿಸುತ್ತದೆ ಎನ್ನುವುದು ಸುಳ್ಳಲ್ಲ. ನಮ್ಮ ದೇಶದ ಪ್ರಧಾನ ಮಂತ್ರಿಗಳಾಗಿದ್ದ ದಿ.ಲಾಲಬಹಾದೂರ ಶಾಸ್ತ್ರಿಗಳು ವಾರದಲ್ಲಿ ಒಂದು ದಿನದ ಉಪವಾಸಕ್ಕೆ ಕರೆಯಿತ್ತಾಗ ಅದನ್ನು ಇಡೀ ದೇಶ ಪಾಲಿಸಿದ್ದು ಶಾಸ್ತ್ರೀಜಿಯವರ ಶೀಲದಲ್ಲಿ ಜನತೆಗಿದ್ದ ಗೌರವದ ಕಾರಣದಿಂದ, ಅದು ಪ್ರಧಾನಿಯ ಮಾತು ಎಂಬುದರಿಂದಲ್ಲ. ಹಾಗೆಂದು ಅವರು ಪ್ರಧಾನಿಯಾಗಿರದಿದ್ದರೆ ಆ ಮಾತಿಗೆ ಅವಕಾಶವೇ ಇರಲಿಲ್ಲ! ಹೀಗಾಗಿ ಅಧಿಕಾರವೂ ಶೀಲವೂ ಜತೆಗೂಡಿ ನಡೆದಾಗಲೇ ಸಮಾಜಕ್ಕೆ ಉತ್ತಮವಾದ ಮೇಲ್ಪಂಕ್ತಿ ದೊರಕುತ್ತದೆ. ರಾಜಕೀಯ ನೇತೃತ್ವಕ್ಕೆ ರಾಜಕೀಯವನ್ನೂ ಮೀರಿದ ಆಯಾಮವೊಂದು ದಕ್ಕಿದಾಗಲೇ ಜನಸೇವೆ ಎನ್ನುವ ಮಾತು ಸಾರ್ಥಕವಾಗುತ್ತದೆ.

ನಮ್ಮ ದೇಶದಲ್ಲಿ ಸಾಮಾಜಿಕ ಮಾರ್ಗದರ್ಶನಕ್ಕೆ, ಅಧ್ಯಾತ್ಮದ ಮಾರ್ಗದರ್ಶನಕ್ಕೆ ಬೇರೆ ಬೇರೆಯೇ ಜನಗಳಿದ್ದರು. ಆದರೆ, ರಾಜಕಾರಣ ನಾಡಿನ ಧರ್ಮ–ಸಂಸ್ಕೃತಿ ಎಲ್ಲವನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡು ನಡೆಯತೊಡಗಿದಾಗಿನಿಂದ ಎಲ್ಲವೂ ರಾಜಕಾರಣವೇ ಆಗಿದೆ. ಸಮಾಜಕಾರಣ ಎಂಬ ಶಬ್ದವೇ ನಮಗೆ ಮರವೆಯಾಗುತ್ತಿದೆ. ಸಮಾಜದ ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಿದರೂ ಆತನಿಗೆ ರಾಜಕೀಯ ಮಹತ್ವಾಕಾಂಕ್ಷೆ ಇರಬಹುದೇ! ಎಂಬ ಅನುಮಾನ ಆರಂಭವಾಗುತ್ತದೆ. ಅಂತೆಯೇ ರಾಜಕೀಯ ನೇತಾರನೊಬ್ಬ ಯಾವುದೇ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿದರೂ ಅದೆಲ್ಲ ರಾಜಕೀಯಕ್ಕಾಗಿ ಎಂದೇ ಭಾವಿಸಲಾಗುತ್ತದೆ. ಇಂತಹ ಪರಿಸ್ಥಿತಿಯಲ್ಲೂ ರಾಜಕಾರಣವನ್ನು ಉದ್ಯೋಗವಾಗಿಸಿಕೊಳ್ಳದೆ ಸಮಾಜದ ಅಭಿವೃದ್ಧಿ ಮತ್ತು ವ್ಯಕ್ತಿತ್ವ ವಿಕಸನದಲ್ಲಿ ನಿರಂತರ ತೊಡಗಿಕೊಂಡಿರುವ ಜನನಾಯಕರೂ ಅಲ್ಲಲ್ಲಿ ಕಾಣಸಿಗುತ್ತಾರೆ. ಅಂಥವರ ನಡೆಯನ್ನು ನೋಡಿ ಕಲಿತು ನಮ್ಮದೇ ಮತ್ತೊಂದು ಹಾದಿಯನ್ನು ನಿರ್ಮಿಸುವ ಸಾಹಸಕ್ಕೆ ಅವರೆಲ್ಲ ಪ್ರೇರಣೆಯಾಗುತ್ತಾರೆ.

ನಮ್ಮ ದೇಶದ ರಾಜಕಾರಣದ ಅತ್ಯಂತ ನಿರ್ಣಾಯಕ ಸಂದರ್ಭ ಎನ್ನಿಸಿದ ತುರ್ತು ಪರಿಸ್ಥಿತಿಯ ದಿನಗಳಲ್ಲಿ ಮತ್ತು ನಂತರದ ಬೆಳವಣಿಗೆಗಳಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ ದಿ. ನಾನಾಜಿ ದೇಶಮುಖರು ಗ್ರಾಮೀಣಾಭಿವೃದ್ಧಿಯಲ್ಲಿ ವಿನೂತನವಾದದ್ದನ್ನು ಸಾಧಿಸಿದವರು. ಅಭಿವೃದ್ಧಿಯ ಚಿಂತನೆಗೆ ಹೊಸ ಆಯಾಮ ನೀಡಿದವರು. ರಾಜರ್ಷಿ ಎಂಬ ಪರಂಪರೆಯ ಪರಿಕಲ್ಪನೆಗೆ ಆಧುನಿಕ ನಿದರ್ಶನವಾಗಿದ್ದವರು. ಸಮಾಜವಾದಿ ಚಿಂತಕ ಲೋಕನಾಯಕ ಜಯಪ್ರಕಾಶ ನಾರಾಯಣರ ಸಮೀಪವರ್ತಿಯಾಗಿ ಕಾರ್ಯ ನಿರ್ವಹಿಸಿದ ನಾನಾಜಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾಗಿದ್ದವರು. ದೆಹಲಿಯ ಅಧಿಕಾರ ರಾಜಕಾರಣದ ಒಡನಾಟದಲ್ಲಿದ್ದರೂ ಉತ್ತರ ಪ್ರದೇಶದ ಗೋಂಡಾ ಜಿಲ್ಲೆಯ ಗ್ರಾಮೀಣ ಪುನರುತ್ಥಾನದ ಕನಸನ್ನು ನನಸಾಗಿಸಿದವರು.

ಕನ್ನಡದ ಕವಿ, ಹೋರಾಟಗಾರ ನಮ್ಮ ಹೆಮ್ಮೆಯ ದಿನಕರ ದೇಸಾಯಿಯವರು ಲೋಕಸಭೆಯ ಸದಸ್ಯರಾಗಿದ್ದರು. ಅವರು ಮಾಡಿದ ಸಾಮಾಜಿಕ ಕೆಲಸ ನಮ್ಮ ಮುಂದಿದೆ. ಉತ್ತರಕನ್ನಡ ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ಅವರು ಮಾಡಿದ ಸಾಧನೆ, ಕಟ್ಟಿದ ಸಂಘಟನೆ ಮಾದರಿಯಾದದ್ದು. ಇಂಥವರ ಮೇಲ್ಪಂಕ್ತಿ ಇಂದು ನಮ್ಮ ಮುಂದಿದೆ.

## ಜನಪ್ರತಿನಿಧಿ ಸರಕಾರದ ದಲ್ಲಾಳಿಯಲ್ಲ;

ಸರಕಾರವೆಂದರೆ ಹಣ, ಅಭಿವೃದ್ಧಿಯೆಂದರೆ ಅನುಕೂಲಗಳ ಸೃಷ್ಟಿ ಎಂದುಕೊಂಡಾಗ ಜನಪ್ರತಿನಿಧಿಯೊಬ್ಬ ಸಾರ್ವಜನಿಕ ಕೆಲಸಗಳಿಗೆ ಸರಕಾರದ ಹಣವನ್ನು ತರುವ ದಲ್ಲಾಳಿಯಾಗುತ್ತಾನೆ. ಅಭಿವೃದ್ಧಿ ಸರಕಾರದ ಕೆಲಸ ಹೌದಾದರೂ "ಸರಕಾರ ಮಾಡಲಿ" ಎಂದು ಸಾರ್ವಜನಿಕರು ಸುಮ್ಮನಿದ್ದರೆ ಆ ಕೆಲಸ ಪೂರ್ಣವಾಗುದಿಲ್ಲ. ಸಾರ್ವಜನಿಕ ಸಹಭಾಗಿತ್ವವಿಲ್ಲದ ಸರಕಾರದ ಕೆಲಸ ಮೂರ್ತಿಯಿಲ್ಲದ ಮಂದಿರವಾಗುತ್ತದೆ. ಉಪಕರಣವಿರುತ್ತದೆ ಉದ್ದೇಶವಿರುವುದಿಲ್ಲ. ಉದಾಹರಣೆಗೆ; ಪ್ರತಿ ಊರಿನಲ್ಲಿ ಒಂದು ಶಾಲೆಯನ್ನು ನಿರ್ಮಿಸುವುದು ಎಂದು ನೀತಿ ನಿರೂಪಕರು ನಿರ್ಣಯ ಮಾಡುತ್ತಾರೆ. ಅಂತೆಯೇ ಒಂದೂರಿನಲ್ಲಿ ಶಾನುಭೋಗರು ಸರಕಾರಿ ಜಾಗ ತೋರಿಸುತ್ತಾರೆ. ಟೆಂಡರ್ ಕರೆದು ಕಟ್ಟಡ ಕಟ್ಟಲು ಗುತ್ತಿಗೆ ಕೊಡುತ್ತಾರೆ. ಕಟ್ಟಡ ಮುಗಿದ ಮೇಲೆ ಶಾಲೆ ಪ್ರಾರಂಭವಾಗಬೇಕು ಎಂದಾಗ ಊರವರಿಗೆ ಅದು ಶಾಲಾ ಕಟ್ಟಡ ಎನ್ನುವುದು ತಿಳಿಯುತ್ತದೆ! ಆಗಲೂ ಸರಕಾರಿ ಕೆಲಸವೆಂದು ಊರವರು ಸುಮ್ಮನಿರುತ್ತಾರೆ. ಸ್ಥಳೀಯ ಶಾಸಕರನ್ನು ಕರೆದು ಅದ್ದೂರಿ ಉದ್ಘಾಟನೆ ಮಾಡಿಸುತ್ತಾರೆ. ಆ ಶಾಲೆಗೆ ಶಿಕ್ಷಕರನ್ನು ನೇಮಿಸುತ್ತಾರೆ. ಆ ಶಿಕ್ಷಕರು ಬಂದವರೇ ಮೊದಲು ಬಾಡಿಗೆ ಮನೆ ಹುಡುಕಿ ವಸತಿಗೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಮರುದಿನ ಶಾಲೆಗೆ ಹೋದರೆ ವಿದ್ಯಾರ್ಥಿಗಳಿಲ್ಲ. ಆಗ ಶಿಕ್ಷಕರು ಊರವರನ್ನು ಕರೆದು ಮಕ್ಕಳನ್ನು ಶಾಲೆಗೆ ಕಳಿಸಿ ಎಂದು ವಿನಂತಿಸುತ್ತಾರೆ. ಆಗ ಊರವರು ಹೇಳುತ್ತಾರೆ "ನಮ್ಮೂರಲ್ಲಿ ಇರುವವರು ಹತ್ತು ಮಕ್ಕಳು, ಅವರೆಲ್ಲ ಪಟ್ಟಣದ ಶಾಲೆಯಲ್ಲಿ ಓದುತ್ತಿದ್ದಾರೆ, ಈ ಶಾಲೆಗೆ ಕಳುಹಿಸಲು ಬೇರೆ ಮಕ್ಕಳಿಲ್ಲ! ನಮಗೆ ಶಾಲೆ ಬೇಕಿರಲಿಲ್ಲ. ಕಟ್ಟುವ ಮೊದಲು ನಮ್ಮನ್ನು ಕೇಳಲೂ ಇಲ್ಲ." ಇಂತಹ ಅನೇಕ ಉದಾಹರಣೆ ಕೊಡಬಹುದು.

ತುಂಬಿನಿಂತ ಕೆರೆಯ ಪಕ್ಕದಲ್ಲಿಯೇ ಕೊಳವೆ ಬಾವಿ ನಿರ್ಮಿಸಿದ ಸಂಗತಿಯನ್ನೂ ನೋಡಿದ್ದೇನೆ. ಹೀಗೇಕೆ ಎಂದು ಅಧಿಕಾರಿಗಳನ್ನು ಕೇಳಿದರೆ ಅವರು ಹೇಳಿದ್ದು "ಯೋಜನೆಯಂತೆ ಕೊಳವೆ ಬಾವಿ ತೋಡಿ ಪಂಪ್‌ಸೆಟ್ ಜೋಡಿಸಬಹುದು, ತುಂಬಿದ ಕೆರೆಗೆ ಪಂಪ್‌ಸೆಟ್ ಹಾಕಲು ಬರುವುದಿಲ್ಲ ಆದ್ದರಿಂದ ಕೊಳವೆ ಬಾವಿ ತೋಡಿದ್ದೇವೆ". ಸರಕಾರದ ಲೆಕ್ಕದಲ್ಲಿ ಖರ್ಚಾಗಿರುತ್ತದೆ, ಶಾಸಕರ ಲೆಕ್ಕದಲ್ಲಿ ಸಾಧನೆಯಾಗಿರುತ್ತದೆ, ಊರವರಿಗೆ ಆದ ಕೆಲಸ ಕಣ್ಣಿಗೆ ಕಾಣುತ್ತದೆ ಆದರೆ ಯಾರಿಗೂ ಪ್ರಯೋಜನವಿಲ್ಲ. ಅಪರೂಪಕ್ಕೆ ಯಾರಾದರೂ ಪ್ರಶ್ನಿಸಿದರೆ, 'ನೀವು ಹೇಳಿದಂತೆ ಮಾಡಲು ಯೋಜನೆಯಲ್ಲಿ ಅನುಕೂಲವಿಲ್ಲ' ಎಂಬ ಸಿದ್ಧ ಉತ್ತರವಿರುತ್ತದೆ! ಇಂತಹ ಅನೇಕ ಸಂಗತಿಗಳನ್ನು ನೋಡಿದಮೇಲೆ, ಸಂದರ್ಭಗಳನ್ನು ಎದುರಿಸಿದ ಮೇಲೆ, ಅಭಿವೃದ್ಧಿಯ ಕುರಿತು ಅದನ್ನು ಸಾಧಿಸುವ ವಿಧಾನಗಳ ಕುರಿತು ನನ್ನ ಆಲೋಚನೆಗಳು ಬದಲಾದವು.

ಅಭಿವೃದ್ಧಿ ಎಂದರೆ ಕೇವಲ ರಸ್ತೆ ಸೇತುವೆಗಳಲ್ಲ ಅಥವಾ ಅದು ಕೇವಲ ಕಣ್ಣಿಗೆ ಕಾಣುವ ಕಾಮಗಾರಿಯಲ್ಲ. ಅನುಕೂಲಗಳು ಬದುಕನ್ನು ಶ್ರೀಮಂತಗೊಳಿಸುತ್ತವೆ. ಆದರೆ ಎಲ್ಲ ಅನುಕೂಲಗಳೂ ಬದುಕಿನ ನೆಮ್ಮದಿಯನ್ನು ಹೆಚ್ಚಿಸುತ್ತವೆ ಎನ್ನಲಾಗದು. ನಾಲ್ಕು ದಶಕಗಳ ಹಿಂದೆ ಹಳ್ಳಿಗೂ ಪಟ್ಟಣಕ್ಕೂ ನಡುವೆ ಸಂವಹನದ ಕೊರತೆಯಿತ್ತು. ಉತ್ತಮ ರಸ್ತೆಯಿರಲಿಲ್ಲ. ಬಸ್ಸಿನ ಓಡಾಟವೂ ಕಡಿಮೆಯಾಗಿತ್ತು. ಊರಿನ ಮಕ್ಕಳೆಲ್ಲ ಊರಿನ ಶಾಲೆಯಲ್ಲಿಯೇ ಕಲಿಯುತ್ತಿದ್ದರು. ಬಡವ ಬಲ್ಲಿದ, ಮೇಲ್ವರ್ಗ ಕೆಳವರ್ಗ ಎಂಬ ಭೇದವಿಲ್ಲದೆ ಒಟ್ಟಿಗೆ ಕಲಿಯುತ್ತಿದ್ದರು. ಶಿಕ್ಷಕರೆಲ್ಲ ಶಾಲೆಯ ಅಕ್ಕಪಕ್ಕದಲ್ಲಿ ಮನೆಮಾಡಿಕೊಂಡಿರುತ್ತಿದ್ದರು. ಊರಿನ ಎಲ್ಲರ ಸಂಗಡ ಶಿಕ್ಷಕರಿಗೆ ನಿತ್ಯದ ಒಡನಾಟ, ಎಲ್ಲರ ಕಷ್ಟಸುಖಗಳ ಪರಿಚಯ. ಊರವರಿಗೂ ಶಿಕ್ಷಕರೆಂದರೆ ನಮ್ಮ ಊರಿನವರೇ ಎಂಬಷ್ಟು ಅಭಿಮಾನ. ಆದರೆ ಬಸ್ಸಿನ ಸೌಕರ್ಯ ಹೆಚ್ಚಿದಂತೆ ಶಿಕ್ಷಕರು ಪಟ್ಟಣದಲ್ಲೇ ಮನೆ ಮಾಡಿ ಅಲ್ಲಿಂದಲೇ ಶಾಲೆಗೆ ಪ್ರತಿ ದಿನ ಬಂದುಹೋಗುವ ಕ್ರಮ ರೂಢಿಯಾಯಿತು. ಪಟ್ಟಣದಲ್ಲಿ ಯಾಕೆ ಮನೆ, ಊರಲ್ಲೇ ಉಳಿಯಬಹುದಲ್ಲ? ಎಂದರೆ "ಮಕ್ಕಳಿಗೆ ಒಳ್ಳೆಯ ಶಿಕ್ಷಣ ಬೇಕಲ್ಲ, ಅದಕ್ಕಾಗಿ ಪಟ್ಟಣದ ಶಾಲೆಗೆ ಸೇರಿಸಿದ್ದೇವೆ" ಎನ್ನುವ ಉತ್ತರ ಸಿಗುತ್ತದೆ. ಹಳ್ಳಿಯಲ್ಲಿ ಸಿಗುವ ಶಿಕ್ಷಣ ಒಳ್ಳೆಯದಲ್ಲ ಪೇಟೆಯಲ್ಲಿ ಅದರಲ್ಲೂ ಖಾಸಗಿ ಶಾಲೆಯಲ್ಲಿ ನೀಡುವ ಇಂಗ್ಲಿಷ್ ಮಾಧ್ಯಮದ ಶಿಕ್ಷಣ ಬಹಳ ಒಳ್ಳೆಯದು ಎನ್ನುವುದನ್ನು ಇನ್ನೊಂದು ರೀತಿಯಲ್ಲಿ ಹೇಳಿದಂತಾಯಿತು! ಉತ್ತಮ ರಸ್ತೆ ಸೇತುವೆಗಳ ಕಾರಣದಿಂದ ಈಗ ಖಾಸಗಿ ಶಾಲೆಯ ವಾಹನಗಳು ಹಳ್ಳಿಹಳ್ಳಿಗೂ ಬರುತ್ತಿವೆ. ಹಳ್ಳಿಯಲ್ಲಿ ಮಕ್ಕಳಿದ್ದರೂ ಊರ ಶಾಲೆಗೆ ವಿದ್ಯಾರ್ಥಿಗಳಿಲ್ಲ. ನುರಿತ ಶಿಕ್ಷಕರು, ಬಿಸಿಯೂಟ ಎಲ್ಲ ಇದ್ದರೂ ಸರಕಾರಿ ಶಾಲೆಗೆ ವಿದ್ಯಾರ್ಥಿಗಳಿಲ್ಲ.

"ಬಡವರ ಮಕ್ಕಳಿಗೆ ಸರಕಾರಿ ಶಾಲೆ, ಉಳ್ಳವರಿಗೆ ಖಾಸಗಿ ಶಾಲೆ" ಎನ್ನುವುದು ಈಗ ಎಲ್ಲರ ತಿಳಿವಳಿಕೆಯಾಗಿದೆ! ಒಂದೂರಿನ ಎಲ್ಲ ಸಮಾಜದ ಮಕ್ಕಳೂ ಕಲೆಯುತ್ತಿದ್ದ, ಕಲಿಯುತ್ತಿದ್ದ ಶಾಲೆ ಬಡವಾಗಿದೆ. ಭಾವನಾತ್ಮಕವಾಗಿ ಊರೇ ಬಡವಾಗಿದೆ. ಸಮಾಜದ ಸಾಮರಸ್ಯ ಮತ್ತು ಅನುಕೂಲಗಳು ಜೊತೆಯಾಗಿ ಸಾಗುತ್ತವೆ ಎನ್ನುವುದು ಎಷ್ಟು ಕಷ್ಟ!! ಹಾಗೆಂದು ಉತ್ತಮ ರಸ್ತೆಗಳು ಆಧುನಿಕ ಸೌಲಭ್ಯಗಳನ್ನು ಬಿಟ್ಟು ಬದುಕುವುದೂ ವಿವೇಕವಾಗುವುದಿಲ್ಲ. ಅಭಿವೃದ್ಧಿ ನಮ್ಮ ಬದುಕಿನ ರೀತಿಯನ್ನು ಬದಲಿಸಲಿ, ಬದುಕಿನ ಮೌಲ್ಯಗಳನ್ನು ಬದಲಿಸಬಾರದು ಅಲ್ಲವೆ!

## ನೀತಿ ನಿರೂಪಣೆಯೇ ಬೇರೆ-ನಿತ್ಯದ ಆಡಳಿತವೇ ಬೇರೆ;

ಸ್ವತಂತ್ರ ಭಾರತದಲ್ಲಿ ಸರಕಾರಿ ಅಧಿಕಾರಿಗಳನ್ನು ಅವರ ಕೆಲಸಗಳಿಗೆ ಹೊಣೆಗಾರರನ್ನಾಗಿಸುವ ಕ್ರಮವನ್ನು ನಾವು ರೂಢಿಸಲಿಲ್ಲ. ಹಾಗಾಗಿ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಯುವ ಕೆಲಸಗಳಿಗೂ ಜನಪ್ರತಿನಿಧಿಗಳು ಉತ್ತರಿಸುವ ಸಂದರ್ಭ ಸೃಷ್ಟಿಯಾಯಿತು. ನಿಮ್ಮೂರಿನ ರಸ್ತೆಗಳ ಗುಣಮಟ್ಟ ಸರಿಯಿಲ್ಲ ಎಂದು ಯಾರಾದರೂ ಹೇಳಿದರೆ ಅದನ್ನು ನಿರ್ಮಿಸಿದ ಇಂಜನೀಯರ್ ಯಾರು ಎಂದು ಹೇಳಲು ಯಾರಿಗೂ ತಿಳಿದಿರುವುದಿಲ್ಲ, ಬದಲು ತಮ್ಮ ಕ್ಷೇತ್ರದ ಶಾಸಕರ ಹೆಸರು ಹೇಳುತ್ತಾರೆ. ಜನ ಪ್ರತಿನಿಧಿಗಳು ಮಾಡಬೇಕಾದದ್ದು ನೀತಿ ನಿರೂಪಣೆಯನ್ನು, ರೂಪಿಸಬೇಕಾದದ್ದು ಯೋಗ್ಯ ಯೋಜನೆಯನ್ನು. ಅದನ್ನು ಜಾರಿ ಮಾಡುವ, ಅನುಷ್ಠಾನಗೊಳಿಸುವ ಹೊಣೆ ಸಂಬಂಧಪಟ್ಟ ಅಧಿಕಾರಿಗಳದ್ದು. ಅನುಷ್ಠಾನದಲ್ಲಿ ವ್ಯತ್ಯಾಸವಾದರೆ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ. ಯೋಜನೆಯಲ್ಲಿಯೇ ಸಮಸ್ಯೆಯಿದ್ದರೆ ಯೋಜಕರು ಹೊಣೆಗಾರರಾಗುತ್ತಾರೆ. ಈ ವ್ಯತ್ಯಾಸವನ್ನು ಸಾರ್ವಜನಿಕರಿಗೆ ತಿಳಿಸುವಲ್ಲಿ ಭಾರತದ ರಾಜಕಾರಣ ಸೋತಿದೆ ಅಥವಾ ಅದಕ್ಕೆ ಮನಸ್ಸಿಲ್ಲ. ಸೇವೆಗೆ ಸಿದ್ಧವಾದ ಆಸ್ಪತ್ರೆಯೊಂದು ಉದ್ಘಾಟನೆಗಾಗಿ ವರ್ಷವಿಡೀ ಕಾಯುತ್ತಿರುತ್ತದೆ! ಏಕೆಂದರೆ ಮಂತ್ರಿಗಳ, ಶಾಸಕರ ಅನುಕೂಲದ ದಿನ ಸಿಗದಿರುವುದರಿಂದ. ಓಡಾಟಕ್ಕೆ ಅರ್ಹವಾದ ಸೇತುವೆಯೊಂದು ಬಳಕೆಗೆ ಸಿಗದೆ ನಿಂತಿರುತ್ತದೆ ಶಾಸಕರಿಂದ ಉದ್ಘಾಟನೆಯಾಗಲಿಲ್ಲವೆಂದು! ಈಗೀಗ ಎಲ್ಲ ಸಾರ್ವಜನಿಕ ಸೌಲಭ್ಯಗಳನ್ನೂ ಜನಪ್ರತಿನಿಧಿಗಳೇ ಉದ್ಘಾಟಿಸಲಿ ಎಂದು ನಿರೀಕ್ಷಿಸುವುದು ಸಾಮಾನ್ಯವಾಗಿದೆ. ಇದೇನೂ ತಪ್ಪಲ್ಲ ಆದರೆ ಇದರಿಂದ ಜನರಿಗೆ ತಲುಪುವ ಸಂದೇಶವೇನೆಂದರೆ ಈ ಎಲ್ಲ ಸಾರ್ವಜನಿಕ ಸೌಲಭ್ಯಗಳ ಗುಣಮಟ್ಟಕ್ಕೆ ಜನಪ್ರತಿನಿಧಿಗಳೇ ಹೊಣೆಗಾರರೆಂಬುದು. ನೀತಿ ನಿರೂಪಣೆ ಮತ್ತು ಅನುಷ್ಠಾನದ ನಡುವಿನ ವ್ಯತ್ಯಾಸ ಯಾರ ಗಮನಕ್ಕೂ ಬಾರದಿರುವುದು.

ರಸ್ತೆಯೊಂದನ್ನು ನಿರ್ಮಾಣ ಮಾಡುವಾಗ ಅದರ ಯೋಜಿತ ವೆಚ್ಚ, ನಿರ್ಮಾಣಕ್ಕೆ ತಗಲುವ ಅವಧಿ, ನಿರ್ಮಾಣದ ಅಪೇಕ್ಷಿತ ಗುಣಮಟ್ಟ, ನಿರ್ಮಾಣದ ನೇತೃತ್ವವಹಿಸಿಕೊಂಡ ಅಭಿಯಂತರರು ಈ ಎಲ್ಲ ವಿವರಗಳನ್ನೊಳಗೊಂಡ ಫಲಕವನ್ನು ಹಾಕಬೇಕೆಂಬ ನಿಯಮವಿದೆ. ಆ ಫಲಕ ಸಾರ್ವಜನಿಕರ ಸಲುವಾಗಿಯೇ ಇರುವುದು. ಈ ಮಾಹಿತಿಯ ನೆರವಿನಿಂದ ಸಾರ್ವಜನಿಕರು, ಆಗುತ್ತಿರುವ ಕೆಲಸದ ಗುಣಮಟ್ಟವನ್ನು ಗಮನಿಸಲಿ, ಸರಕಾರಿ ಕೆಲಸಕ್ಕೊಂದು ಸಾಮಾಜಿಕ ಪರಿಶೀಲನೆಯೂ ಇರಲಿ ಎಂಬುದು ಇದರ ಹಿಂದಿನ ಉದ್ದೇಶ. ಅದೇ ನಿಜವಾದ ಸಾರ್ವಜನಿಕ ಸಹಭಾಗಿತ್ವ.

ಯೋಜನೆ, ಪರಿಶೀಲನೆ, ಬಳಕೆ ಈ ಮೂರೂ ಹಂತದಲ್ಲಿಯೂ ಫಲಾನುಭವಿಗಳು ಭಾಗವಹಿಸುವ, ತಮ್ಮ ಹೊಣೆಯನ್ನು ನಿರ್ವಹಿಸುವ ಅವಕಾಶ ಕಲ್ಪಿಸಲಾಗಿದೆ. ಆದರೆ ಈ ಅವಕಾಶದ ಸದುಪಯೋಗಕ್ಕೆ ಸಾರ್ವಜನಿಕ ಜಾಗೃತಿ ಅಗತ್ಯ.



## ಸೋಲು ನೀಡಿದ ಕಾಲಾವಕಾಶ

ಈ ಮಣ್ಣಿನ ಬಗೆಗಿನ ನನ್ನ ಪ್ರೀತಿಯೇ ನನ್ನ ಸೆಣಸಾಟದ ಸ್ವಭಾವದ ಮೂಲ ಸ್ರೋತ. ಆದರೆ ಚುನಾವಣೆಯ ಸ್ಪರ್ಧೆಯಲ್ಲಿ ಹೋರಾಡಬೇಕಾಗಿ ಬಂದದ್ದು ಅನಿರೀಕ್ಷಿತವಾಗಿತ್ತು ಅಂತೆಯೇ ಅನಪೇಕ್ಷಿತವೂ ಆಗಿತ್ತು. ಅಧಿಕಾರ ರಾಜಯಕೀಯಕ್ಕಿಂತ ಹಿರಿದಾದದ್ದನ್ನು ರಾಜಕಾರಣದಲ್ಲಿ ಸಾಧಿಸಬೇಕೆನ್ನುವುದು ನನ್ನ ಬಯಕೆಯಾಗಿತ್ತು. ಇಂದಿಗೂ ಅದೇ ನನ್ನ ಆಧಾರವಾಗಿದೆ. ಭಾರತದ ರಾಜಕೀಯ ವಿಪರೀತ ಸ್ಥಿತ್ಯಂತರಕ್ಕೆ ಒಳಗಾದ ಸಂದರ್ಭದಲ್ಲಿ ನಾನು ರಾಜಕೀಯಕ್ಕೆ ಬಂದೆ. 1996ರಲ್ಲಿ ಮೊದಲ ಚುನಾವಣೆ ಎದುರಿಸಿದೆ. ಜನರ ಪ್ರೀತಿ ಹಾಗೂ ಸಂಘಟನೆಯ ಕಾರ್ಯಕರ್ತರ ಪರಿಶ್ರಮ ನನ್ನನ್ನು ಗೆಲ್ಲಿಸಿತ್ತು. ದೆಹಲಿಯಲ್ಲಿ ಪರಿಚಯವಾಗಬೇಕು, ಕ್ಷೇತ್ರದಲ್ಲಿ ಓಡಾಡಬೇಕು ಎನ್ನುವಷ್ಟರಲ್ಲಿ ಅಂದರೆ 1998ರಲ್ಲಿ ಮತ್ತೆ ಚುನಾವಣೆ ಬಂತು. ಆಗಲೂ ಜನರೇ ನನ್ನನ್ನು ಗೆಲ್ಲಿಸಿದರು. ಆದರೆ ಆ ಲೋಕಸಭೆಯ ಆಯುಷ್ಯ ಕೇವಲ ವರ್ಷಮಾತ್ರ. 1999ರಲ್ಲಿ ಮತ್ತೆ ಚುನಾವಣೆ. ಆ ಚುನಾವಣೆಯಲ್ಲಿ ನಾನು ಗೆಲ್ಲಲಾಗಲಿಲ್ಲ. ನಾಲ್ಕು ವರ್ಷಗಳಲ್ಲಿ ಮೂರು ಚುನಾವಣೆ ಎದುರಿಸಿದರೆ ಗೆಲುವೂ ಸೋಲಿನಂತೆ ಭಾಸವಾಗುತ್ತದೆ! ಅದರಲ್ಲೂ ಚುನಾವಣೆಯ ಖರ್ಚನ್ನು ನಿಭಾಯಿಸುವ ಅಧಿಕ ಅರ್ಥ ಸಂಪತ್ತಿಯಿಲ್ಲದವರಿಗೆ ಮತ್ತು ಪ್ರಾಮಾಣಿಕವಾಗಿ ಬದುಕುವವರಿಗೆ ಪ್ರಜಾಪ್ರಭುತ್ವ ಬಹಳ ದುಬಾರಿಯೆನಿಸುತ್ತದೆ. ಆ ನನ್ನ ಅನುಭವಗಳನ್ನು ಶಬ್ದಗಳಲ್ಲಿ ವರ್ಣಿಸುವುದು ಸಾಧ್ಯವೇ ಇಲ್ಲ.

ರಾಜಕಾರಣವೆಂದರೆ ಹಣದ ಹೊಳೆ, ವೈಭವದ ಬದುಕು, ಅಂತರಂಗವೇ ಇಲ್ಲದ ಬಹಿರಂಗದ ಆಡಂಬರ ಎನ್ನುವ ಸ್ಥಿತಿ ನಿರ್ಮಾಣಗೊಂಡಿದೆ. ಬದ್ಧತೆಯುಳ್ಳವರಿಗೆ ರಾಜಕಾರಣ ಕಷ್ಟದ ಕಾಯಕವಾಗಿದೆ. ನನ್ನ ರಾಜಕೀಯ ಹೋರಾಟಕ್ಕೆ ಪ್ರಖರ ಸಿದ್ಧಾಂತದ ಹಿನ್ನೆಲೆಯಿತ್ತು. ಪಕ್ಷದ ಕಾರ್ಯಕರ್ತರ ನಿರಂತರ ಬೆಂಬಲವಿತ್ತು. ಆದರೂ ಚುನಾವಣೆಯ ಖರ್ಚು ನನ್ನ ಕೈಮೀರಿದ ಮಾತಾಗಿತ್ತು. 1999ರ ಸೋಲಿನ ನಂತರ ಮುಂದೇನು ಎಂಬ ಪ್ರಶ್ನೆಗೆ ಆ ಸಮಯದಲ್ಲಿ ಯಾವ ಉತ್ತರವೂ ನನ್ನಲ್ಲಿರಲಿಲ್ಲ. ಕೆಲ ಸಮಯ ಕಳೆಯಿತು. ಅಂತರಂಗದ ಅದ್ಯಾವದೋ ಅವ್ಯಕ್ತ ಸೆಳೆತ ಮತ್ತೊಮ್ಮೆ ನನ್ನನ್ನು ಅಂಗಳಕ್ಕಿಳಿಸಿತ್ತು. ಸೋಲು ಸವಾಲಾಯಿತು. ಮನಸ್ಸು ಮತ್ತೊಮ್ಮೆ ಮಲೆತು ನಿಂತಿತ್ತು. 'ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ' ಎಂಬ ಕವಿವಾಣಿ ನನಗೆ ಅರಿವಿಲ್ಲದ ಹಾಗೆ ಹೆಜ್ಜೆಗಳನ್ನು ಮುಂದಿಡಿಸಿತ್ತು. ಕದಂಬ ಅನಾವರಣಗೊಂಡಿತ್ತು. ಜನರೇ ಸೋಲಿಸಿದ್ದಾರಾದ್ದರಿಂದ ನಾನೇಕೆ ಅವರ ಬಗ್ಗೆ ವಿಚಾರ ಮಾಡಲಿ ಎಂಬ ಉದಾಸೀನ ನನ್ನಲ್ಲಿರಲಿಲ್ಲ. ಗೆದ್ದಾಗ ಮತ್ತೆ ನೋಡಿದರಾಯಿತು ಈಗ ಸುಮ್ಮನಿರುವ ಎಂಬ ಪಲಾಯನವಾದ ನನಗಂತೂ ಮರ್ಯಾದೆಯ ಮಾತೇ ಆಗಿರಲಿಲ್ಲ. ಸೋಲೂ ಗೆಲುವಿನ ಬಾಗಿಲು ಎಂದುಕೊಂಡಾಗ ಕದಂಬ ಮೂಡಿಬಂದಿತ್ತು.



## ಸೇವೆ ಎಂಬ ಅಧಿಕಾರ;

ಶಾಸಕನೋ ಸಾಂಸದನೋ ಆಗಿದ್ದಾಗ ಜನಸೇವೆ ಮಾಡಬಹುದು, ಅಧಿಕಾರವಿಲ್ಲದಿದ್ದಾಗ ಜನಸೇವೆ ಮಾಡುವುದು ಹೇಗೆ! ಎಂಬ ಮಾತು ಸಹಜವಾದದ್ದೇ. ಚುನಾವಣೆಯ ನನ್ನ ಸೋಲು ಕೇವಲ ಗಣಿತದ ಲೆಕ್ಕಾಚಾರದ್ದು. ಕ್ಷೇತ್ರದಲ್ಲಿ ನನಗೆ ಸಿಕ್ಕಿರುವ ಪ್ರೀತಿ ಅಭಿಮಾನ ಅಗಣಿತವಾದದ್ದು. ಅದನ್ನು ಮರೆಯಲಾದೀತೇ?

ಅಧಿಕಾರ ಎನ್ನುವ ಶಬ್ದ ಸಂಸ್ಕೃತದಲ್ಲಿ ಅರ್ಹತೆ ಎನ್ನುವ ಅರ್ಥದಲ್ಲಿ ಬಳಕೆಯಾಗುತ್ತದೆ. ಒಬ್ಬನಿಗೆ ಉನ್ನತ ಶಿಕ್ಷಣದ ಅಧಿಕಾರವಿದೆ ಎಂದರೆ ಅವನಿಗೆ ಉನ್ನತ ಶಿಕ್ಷಣಕ್ಕೆ ಬೇಕಾದ ಅರ್ಹತೆಯಿದೆ ಎಂದರ್ಥ. ಜನ ಸೇವೆಗೆ ಅಧಿಕಾರ ಗಳಿಸುವುದೆಂದರೆ ಅದಕ್ಕೆ ಬೇಕಾದ ಅರ್ಹತೆಯನ್ನು ಗಳಿಸವುದೆಂದೇ ಅರ್ಥ. ನಿರೀಕ್ಷಿತ ಅಧಿಕಾರ ಸಿಗುತ್ತದಾದರೆ ಸೇವೆಗೆ ಮುಂದಾಗುತ್ತೇನೆ ಎನ್ನುವುದು ವ್ಯಾಪಾರಿ ಮನೋಭಾವ. ಸೇವೆಗೆ ಬೇಕಾದ ಅಧಿಕಾರ(ಅರ್ಹತೆ) ಗಳಿಸಿಕೊಳ್ಳುತ್ತೇನೆ ಎನ್ನುವ ಬದ್ಧತೆಯಿಂದ ಮುಂದಡಿಯಿಟ್ಟೆ. ಹಿತೈಷಿಗಳ ಭರವಸೆಯ ಮಾತು ಮತ್ತು ಬೆರಳೆಣಿಕೆಯ ಸಹಾಯಕರ ನಿಯತ್ತಿನ ದುಡಿಮೆಯಿಂದ ನನ್ನ ಕ್ಷೇತ್ರದ ವಿಸ್ತಾರದುದ್ದಕ್ಕೂ ಒಂದಷ್ಟು ಕೆಲಸ ಪ್ರಾರಂಭ ಮಾಡಲು ಸಾಧ್ಯವಾಯಿತು. ಕೆಲಸ ಮಾಡುತ್ತ ಮಾಡುತ್ತ ಹೊಸ ಹೊಸ ಆಲೋಚನೆಗಳು ಹುಟ್ಟಿಕೊಂಡವು, ಹೊಸ ವಿಧಾನಗಳು ಹೊಳೆದವು. ಸಮಾನ ಮನಸ್ಸಿನ ಅನೇಕರು ಕೈಜೋಡಿಸಿದರು. ಕದಂಬದ ಕಲ್ಪನೆಗೆ ನೀರೆರೆದರು. ನಮ್ಮವರ ಸೇವೆಯಲ್ಲಿ ನನ್ನದೆಲ್ಲವನ್ನೂ ತೊಡಗಿಸಿಕೊಳ್ಳುವ ಒಂದು ಅದ್ಭುತ ಅವಕಾಶ ನನ್ನದಾಯಿತು. ಕದಂಬದ ದಾರಿ ಸ್ಪಷ್ಟವಾಗತೊಡಗಿತು.



## ಮೂಡಿಬಂದ ಕದಂಬ

ಕದಂಬ ಎಂಬ ಶಬ್ದವೇ ಕನ್ನಡಿಗರಿಗೆ ಸ್ಫೂರ್ತಿದಾಯಕವಾದದ್ದು. ಕದಂಬ ನಿತ್ಯ ನೆರಳಿನ ವೃಕ್ಷವೂ ಹೌದು, ಬನವಾಸಿಯನ್ನು ರಾಜಧಾನಿಯಾಗಿಸಿ ಕರ್ನಾಟಕವನ್ನು ಆಳಿದ ವಂಶವೃಕ್ಷವೂ ಹೌದು. ಅವಮಾನವನ್ನು ಸಹಿಸದ ಸ್ವಾಭಿಮಾನದ ಸಂಕೇತ ಈ ಕದಂಬ. ಕನ್ನಡ ನೆಲದ ಮೊಟ್ಟ ಮೊದಲ ರಾಜ ಮನೆತನ. ಅಧ್ಯಯನಶೀಲ ಮಯೂರ ಶರ್ಮ ಕಾಂಚಿಯ ರಾಜಾಂಗಣದಲ್ಲಿ ತನಗಾದ ಅವಮಾನವನ್ನು ಸಹಿಸಲಾಗದೆ ಹೊಸ ಸಾಮ್ರಾಜ್ಯವನ್ನೇ ಕಟ್ಟಿ ಮೆರೆದು ಮಯೂರ ವರ್ಮನೆನಿಸಿದ ಪೌರುಷದ ಇತಿಹಾಸ ಕದಂಬ. ಕನ್ನಡವನ್ನು ಆಡಳಿತದ ಭಾಷೆಯಾಗಿಸಿದ ನಮ್ಮ ನೆಲದ ರಾಜ ಮನೆತನ ಕದಂಬ. ಎರಡು ಶತಮಾನಗಳಿಗೂ ಮಿಕ್ಕಿ ಕನ್ನಡಿಗರ ರಾಜಧಾನಿಯಾಗಿ ಪೌರುಷದ ಇತಿಹಾಸ ಬರೆದ ಹೆಸರು ಕದಂಬ. ಅದೇ ನನಗೆ ಅಂದಿನ ಪ್ರೇರಣೆ, ಇಂದಿಗೂ ಸಹ ಅದೇ ನನ್ನ ಆರಾಧನೆ.

'ಕದಂಬ' ಕರ್ನಾಟಕದ ಅಭಿಜಾತ ರಾಜವಂಶ. ಬನವಾಸಿಯ ಕನ್ನಡ ಅರಸು ಮನೆತನಕ್ಕೆ (ಕ್ರಿ. ಶ.345–525) ಈ ಹೆಸರು ಬರಲು ಕಾರಣ ಅವರ ಶ್ರದ್ಧೆಯ ನಿಧಿಯಾದ ಕದಂಬ ವೃಕ್ಷ. ಮುದ್ದಣ ಕವಿ ಈಶ್ವರನನ್ನು "ಶಂಭು ಗಿರೀಶ ತ್ರ್ಯಂಬಕ ದೇವ ಕದಂಬ ವಿನುತ ಜಯ ಸಾಂಬಶಿವ" ಎಂದು ಹಾಡಿದ್ದಾನೆ. ಕದಂಬರ ಕಾಲದಲ್ಲಿ ಕದಂಬ ವೃಕ್ಷ ನಿತ್ಯ ಪೂಜಿಸಲ್ಪಡುತ್ತಿತ್ತು. ಕದಂಬ ವೃಕ್ಷದ ನೆರಳಲ್ಲಿ ಪಾರ್ವತಿದೇವಿಗೆ ಮಗುವೊಂದು ಹುಟ್ಟಿತು, ಆ ಮಗುವಿಗೆ ಕದಂಬವೆಂದೇ ಹೆಸರಿಟ್ಟರೆಂದು ಪುರಾಣವೊಂದರಲ್ಲಿ ಉಲ್ಲೇಖವಿದೆ. ಜಂಬೂ ದ್ವೀಪದಲ್ಲಿ, ಕದಂಬ ವೃಕ್ಷದ ಮೂಲದಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿದ ನದಿಗೆ ಕಾದಂಬರಿ ಎಂದು ಹೆಸರು ಬಂತೆಂದು ಭಾಗವತದ ಐದನೆ ಸ್ಕಂಧದಲ್ಲಿ ವರ್ಣಿಸಲಾಗಿದೆ. ಜ್ಯೋತಿಷ ಶಾಸ್ತ್ರದಲ್ಲಿ ಇಪ್ಪತ್ತೇಳು ನಕ್ಷತ್ರಗಳಿಗೆ ಸಂವಾದಿಯಾಗಿ ಇಪ್ಪತ್ತೇಳು ವೃಕ್ಷಗಳನ್ನು ಹೆಸರಿಸಲಾಗಿದೆ. ಆ ಪಟ್ಟಿಯಲ್ಲಿ ಶತತಾರಾ ನಕ್ಷತ್ರಕ್ಕೆ ಹೊಂದಿದ ವೃಕ್ಷ ಕದಂಬ. ಶತತಾರೆ ಜನ್ಮ ನಕ್ಷತ್ರವಾದವರು ಕದಂಬ ವೃಕ್ಷವನ್ನು ಬೆಳೆಸುವ ಕ್ರಮವಿದೆ.



'ಕದಂಬವೃಕ್ಷ ಒಂದರ್ಥದಲ್ಲಿ ಕಲ್ಪವೃಕ್ಷವೂ ಆಗಿದೆ. ಸರ್ವ ಋತುಗಳಲ್ಲಿಯೂ ಹಸಿರಾಗಿದ್ದು ನೆರಳು ನೀಡುತ್ತದೆ. ಸುಗಂಧಿತ ಪುಷ್ಪಗಳನ್ನು ಹೊತ್ತು ನಿಲ್ಲುವ ಸುಂದರ ವೃಕ್ಷ ಇದು. ಅದರ ಹಣ್ಣು ಆಹಾರವಾಗಿ ಔಷಧವಾಗಿ ಒದಗುತ್ತದೆ. ಮರದ ಎಲ್ಲ ಭಾಗಗಳೂ ಔಷಧೀಯವಾದುದರಿಂದ ಬಹೂಪಯೋಗಿ ವೃಕ್ಷ. ಅಗ್ನಿದೀಪಕವಾಗಿ ಅಜೀರ್ಣವನ್ನು ದೂರಮಾಡುತ್ತದೆ, ಪ್ರತಿರಕ್ಷೆಯ ಸಾಮರ್ಥ್ಯ ಹೆಚ್ಚಿಸಿ ಪರಾವಲಂಬಿ ಸೋಂಕನ್ನು ಕಳೆಯುತ್ತದೆ. ಶಿಲೀಂಧ್ರದ ಸೋಂಕನ್ನೂ ಬ್ಯಾಕ್ಟೀರಿಯಾ ಸೋಂಕನ್ನೂ ತಡೆಗಟ್ಟುತ್ತದೆ, ಸಕ್ಕರೆ ರೋಗವನ್ನು ನಿಯಂತ್ರಿಸುತ್ತದೆ, ಕೊಬ್ಬನ್ನು ಕರಗಿಸುತ್ತದೆ, ಸಂಧಿವಾತಕ್ಕೂ ಔಷಧವಾಗುತ್ತದೆ, ಕ್ಯಾನ್ಸರ್ ಕಾಯಿಲೆಗೂ ಪರಿಹಾರ ನೀಡುತ್ತದೆ ಎನ್ನಲಾಗಿದೆ.

ನಮ್ಮ ಸಮಾಜದ ಸರ್ವಾಂಗೀಣ ಉನ್ನತಿಗಾಗಿ, ಸಮಗ್ರ ವಿಕಾಸಕ್ಕಾಗಿ ಶ್ರಮಿಸುವ ಸೇವಾ ಸಂಸ್ಥೆಯೊಂದು ಸಮಾಜದ ಎಲ್ಲ ಸಮಸ್ಯೆಗಳಿಗೂ ಉತ್ತರವಾಗಬೇಕು, ಆರ್ತರಿಗೆ ನೆರಳಾಗಬೇಕು, ಹೊಸ ಕನಸಿಗೆ ದಾರಿದೀಪವಾಗಬೇಕು. ಶೋಧಕ್ಕೆ ತೆರೆದುಕೊಳ್ಳಬೇಕು, ಸಾಧನೆಗೆ ತೊಡಗಿಸಿಕೊಳ್ಳಬೇಕು. ಇಂತಹ ಎಲ್ಲ ಗುಣಗಳನ್ನೂ ಹೊಂದಿರುವ ಕದಂಬ ವೃಕ್ಷ ನಮ್ಮದಾಗಬೇಕು, ಇದೇ ನಮ್ಮ ಅಪೇಕ್ಷೆ.

## ಕದಂಬ ಫೌಂಡೇಶನ್

"ಕದಂಬ ಚಾರಿಟೇಬಲ್ ಫೌಂಡೇಶನ್" ಇದು ಇಂಡಿಯನ್ ಟ್ರಸ್ಟ್ ಆ್ಯಕ್ಟ್ ಅಡಿಯಲ್ಲಿ ನೋಂದಾಯಿತವಾದ ಸಂಸ್ಥೆಯಾಗಿದ್ದು 2000ನೇ ಇಸವಿಯಲ್ಲಿ ಪ್ರಾರಂಭಗೊಂಡಿರುತ್ತದೆ. ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಶಿರಸಿ ಇದರ ಮುಖ್ಯ ಕೇಂದ್ರ. ಸಮಗ್ರ ಸಾಮಾಜಿಕ ವಿಕಾಸ ಇದರ ಗುರಿ. ವ್ಯಕ್ತಿ ವಿಕಾಸ ಮತ್ತು ಸಾಮಾಜಿಕ ಸಾಮರಸ್ಯ ಎರಡೂ ಸಾಧ್ಯವಾಗಬೇಕು. ಬಹಿರಂಗದ ಅನುಕೂಲಗಳೊಡನೆ ಅಂತರಂಗದ ಶ್ರೀಮಂತಿಕೆಯೂ ಬೆಳೆಯಬೇಕು, ಅದೇ ನಿಜವಾದ ವಿಕಾಸ. ಆಗಲೇ ನಿಜವಾದ ನೆಮ್ಮದಿ.




ಉತ್ತಮ ಅಭಿವೃದ್ಧಿಯ ಲಕ್ಷಣಗಳೇನು ಎನ್ನುವ ಪ್ರಶ್ನೆಗೆ ಕದಂಬ ಕಂಡುಕೊಂಡ ಉತ್ತರ ಸರಳವಾದದ್ದು. ಅಭಿವೃದ್ಧಿ; ಪರಿಸರ ಸ್ನೇಹಿಯಾಗಿರಬೇಕು, ಸರ್ವ ಸ್ಪರ್ಶಿಯಾಗಿರಬೇಕು ಮತ್ತು ಸುಸ್ಥಿರವಾಗಿರಬೇಕು. ಎಲ್ಲರಿಗೂ ಸ್ವಾವಲಂಬಿ ಸ್ವಾಭಿಮಾನಿ ಬದುಕು ಸಿಗುವಂತಾಗಬೇಕು. ಈ ಮಾನದಂಡಗಳ ಆಧಾರದಲ್ಲಿಯೇ ನಮ್ಮ (ಕದಂಬದ) ಪಯಣ ಆರಂಭವಾಯಿತು.

ಆಧುನಿಕ ಅಭಿವೃದ್ಧಿಯ ಓಟದಲ್ಲಿ ಸಮಾಜ ಗಳಿಸಿದ್ದಕ್ಕಿಂತ ಹೆಚ್ಚು ಕಳೆದುಕೊಂಡಿದೆ ಎಂಬ ಮಾತು ಚಿಂತನ ವಲಯದಲ್ಲಿ ಕೇಳಿಬರುತ್ತಿದೆ. ಉದಾಹರಣೆಗೆ; ಬೆಲ್ಲ ತಯಾರಿಸುತ್ತಿದ್ದವರು ಸಕ್ಕರೆ ತಯಾರಿಸಲು ಆರಂಭಿಸಿದಾಗ ಲಾಭದ ಪ್ರಮಾಣ ಹೆಚ್ಚಾಯಿತು. ಎತ್ತಿನ ಗಾಡಿಗಳ ಬದಲು ಕಾರು ಟ್ರ್ಯಾಕ್ಟರ್ ಬಂದವು. ಆದರೆ ಸುತ್ತಣ ಹತ್ತೂರಿನ ಜನ ಕಾರ್ಖಾನೆಯ ದುರ್ಗಂಧಕ್ಕೆ ಹೊಂದಿಕೊಳ್ಳಬೇಕಾಯಿತು. ವಿಪರೀತ ನೀರಾವರಿಯಿಂದಾಗಿ ಮಣ್ಣು ಸತ್ವ ಕಳೆದುಕೊಂಡಿತು. ಎಲ್ಲರೂ ಎಲ್ಲ ಹೊಲದಲ್ಲೂ ಕಬ್ಬನ್ನೇ ಬೆಳೆದರು, ಆಹಾರ ಧಾನ್ಯವನ್ನು ಬೆಳೆಯುವವರೇ ಇಲ್ಲವಾದರು. ಸಮೃದ್ಧಿಯಿದ್ದೂ ನೆಮ್ಮದಿಯಿಲ್ಲದ ಈ ರೀತಿಯ ನಡೆ ಪರಿಸರ ಸ್ನೇಹಿಯೂ ಅಲ್ಲ, ಸುಸ್ಥಿರವೂ ಅಲ್ಲ. ಅಂತೆಯೇ ಮನುಷ್ಯನಿಗೆ ಹೊಟ್ಟೆಗೆ ಬಟ್ಟೆಗೆ ಸಿಕ್ಕರಾಯಿತು ಹೆಚ್ಚೆಂದರೆ ಮನೆಯೂ ದೊರಕಿದರೆ ಇನ್ನೇನೂ ಬೇಕಾಗಿಲ್ಲ ಎಂಬ ಅಭಿವೃದ್ಧಿಯ ಧೋರಣೆಯೊಂದಿದೆ. ಇದು ಮನುಷ್ಯನನ್ನು ಪ್ರಾಣಿಯಂತೆ ನೋಡುವ ಕ್ರಮ. ಮನುಷ್ಯ ಸಮಾಜ ಕೇವಲ ಹಸಿವೆಗಾಗಿ ಬದುಕುವುದಿಲ್ಲ. ಹೊಟ್ಟೆಯೇ ಬದುಕಿನ ಕೇಂದ್ರವಲ್ಲ. ಕಡುಬಡತನದಲ್ಲೂ ಕೆಲವು ಮೌಲ್ಯಗಳನ್ನು ಸಾಕಿಕೊಂಡು ಬಂದ ಪರಂಪರೆ ನಮ್ಮದು. ಕಟ್ಟಿದ ಮನೆ ಗುಡಿಸಲಾಗಿರಬಹುದು ಆದರೆ ಅಲ್ಲಿ ವಾಸಿಸುತ್ತಿರುವುದು ಒಂದು ಕುಟುಂಬ. ಕುಟುಂಬ ಎಂದರೆ ಸಂಬಂಧಗಳು. ಸಂಬಂಧಗಳು ಎಂದರೆ ಭಾವನಾತ್ಮಕ ಪರಿಸರ. ತಾಯಿ ಬಡವಳಾದರೆ ಅವಳ ಪ್ರೀತಿ ತ್ಯಾಗ ಕಡಿಮೆಯ ದರ್ಜೆಯದ್ದು ಎಂದಾಗುವುದಿಲ್ಲವಲ್ಲ. ಹಾಗೆ ಆರ್ಥಿಕ ಬಡತನ ಸಾಂಸ್ಕೃತಿಕ ಬಡತನವಾಗದಂತೆ ನೋಡಿಕೊಳ್ಳುವ ಹೊಣೆಯೂ ಸೇವಾ ಕಾರ್ಯಕ್ಕಿದೆ ಎಂದು ತಿಳಿದವರು ನಾವು.

ಇದನ್ನೆಲ್ಲ ಗಮನಿಸಿಯೇ ಎಚ್ಚರಿಕೆಯಲ್ಲಿ ಹೆಜ್ಜೆಗಳನ್ನಿಡಲಾಯಿತು. ಕದಂಬ, ಸಮಾಜದ ಸಮಗ್ರ ವಿಕಾಸಕ್ಕೆ ಬೇಕಾದ ಶಿಕ್ಷಣ, ಆರೋಗ್ಯ, ವಸತಿ, ಕೃಷಿ, ಆರ್ಥಿಕ ಚಟುವಟಿಕೆ, ಕೌಶಲ್ಯ ತರಬೇತಿ ಮುಂತಾದ ಕ್ಷೇತ್ರಗಳಲ್ಲಿ ಕಾರ್ಯಮಾಡುವ ಅನುಮತಿಯನ್ನು ಪಡೆದಿದ್ದರೂ ಎಲ್ಲವನ್ನೂ ಒಮ್ಮೆಲೇ ಆರಂಭಿಸುವ ಉತ್ಸಾಹ ತೋರಲಿಲ್ಲ. ನಿಧಾನವಾಗಿ ಒಂದೊಂದೇ ಕ್ಷೇತ್ರದಲ್ಲಿ ಅಂಬೆಗಾಲಿಡುತ್ತ ಗಟ್ಟಿ ಹೆಜ್ಜೆಗಳನ್ನಿಡಲು ನಿರ್ಧರಿಸಿತು. ಸಮಸ್ಯೆಗಳನ್ನು ಅರಿಯುವಲ್ಲಿ, ಪರಿಹಾರದ ಸಾಧ್ಯತೆಗಳನ್ನು ಹುಡುಕುವಲ್ಲಿ ಮುಕ್ತವಾದ ಸಂವಾದಕ್ಕೂ ಸಹಯೋಗಕ್ಕೂ ಸಿದ್ಧವಾಗಿತ್ತು.




## ಮನೆಯಂಗಳದ ಅಂಗನವಾಡಿಗಳು

ಸಾಮಾಜಿಕ ಜಾಗೃತಿಗೆ ಮತ್ತು ಸಮಾಜದ ಸಮುನ್ನತಿಗೆ ಮೊದಲ ಮೆಟ್ಟಿಲು ಶಿಕ್ಷಣವಲ್ಲ, ಅರಿವು. ಅದು ಸಂಸ್ಕಾರದಿಂದ ಆರಂಭವಾಗುತ್ತದೆ ಕೊನೆಯಲ್ಲಿ ತನ್ನ ತಾನರಿವ ಅವ್ಯಯದ ಅರಿವಿನಲ್ಲಿ ಪೂರ್ಣವಾಗುತ್ತದೆ. ಅಕ್ಷರ, ಅರಿವಿಗೆ ಸಾಧನವಾದರೂ ಅದೇ ಪ್ರಮಾಣವಲ್ಲ. ಅಕ್ಷರದ ಸಂಗಡ ಮಾನವೀಯ ಅನುಬಂಧ ಅನುಕಂಪಗಳನ್ನೂ ರೂಢಿಸದಿದ್ದರೆ ಸಾಕ್ಷರನು ಸಭ್ಯನಾಗುತ್ತಾನೆ ಎಂಬ ಭರವಸೆಯಿರುವುದಿಲ್ಲ, ಆತ ರಾಕ್ಷಸನೂ ಆಗಬಲ್ಲ! ಆದ್ದರಿಂದಲೇ ಕದಂಬ ಆರಂಭಿಸಿದ ಅಂಗನವಾಡಿಗಳಲ್ಲಿ ನೀಡುತ್ತಿದ್ದ ಶಿಕ್ಷಣಕ್ಕೆ ಸಂಸ್ಕಾರ ಎಂದೇ ಕರೆದೆವು. ಮುದ್ದು ಮಕ್ಕಳಿಗೆ ಅಕ್ಷರಗಳೆಲ್ಲ ಚಿತ್ರಗಳಾಗಿ ಕಾಣುತ್ತವೆ. ವಾಕ್ಯಗಳೆಲ್ಲ ರಂಗೋಲಿಯಂತೆ ಭಾಸವಾಗುತ್ತವೆ. ಕನ್ನಡದ ಲಿಪಿ ಅತ್ಯಂತ ಸುಂದರ ಲಿಪಿ ಎನ್ನಿಸಿಕೊಂಡಿದೆ. ಈ ಲಿಪಿಯನ್ನು ಚಿತ್ರವಾಗಿಯೇ ಕಲಿಸಿದರೆ ಮಕ್ಕಳ ಖುಶಿ ಬೇರೆಯೇ ಇರುತ್ತದೆ. ಆಡುವ ಆಟದಲ್ಲಿ, ಸೋಲು ಗೆಲುವಿನ ಲೆಕ್ಕವಿಡದೆ ಆನಂದವನ್ನು ಅನುಭವಿಸುವುದನ್ನು ಕಲಿಸುವುದು ಶಿಶು ಮಂದಿರದ ಪಠ್ಯವಾಯಿತು. ಈ ಬಗೆಯ ಆಟಗಳೇ ಮುಂದಿನ ಬದುಕಿನ ರಂಗಮಂಚದ ನಾಟಕದಲ್ಲಿ ಯಶಸ್ಸಿನ ಪಾಠಗಳಾಗುತ್ತವೆ. ಇದು ಕದಂಬದ ನಿಲುವು.



ಐದು ವರ್ಷಗಳವರೆಗೆ ಮಗುವಿನ ಸ್ವಭಾವ ರೂಪುಗೊಳ್ಳುತ್ತದೆ, ಮುಂದಿನ ಕಲಿಕೆ ಅದರ ವಿಸ್ತಾರವಾಗುತ್ತದೆ ಎಂದು ಮನೋ ವಿಜ್ಞಾನಿಗಳು ಹೇಳುತ್ತಾರೆ. ಹಾಗಾಗಿ ಅಂಗನವಾಡಿಯ ಸಂಸ್ಕಾರ ಬಹಳ ಮುಖ್ಯವಾದದ್ದು. 2001ರಲ್ಲಿ ಉತ್ತರಕನ್ನಡದ ಅನೇಕ ಊರುಗಳಿಗೆ ಶಾಲೆ ದೂರದ ಸಂಗತಿಯಾಗಿತ್ತು. ಮೈಲಿ ದೂರ ನಡೆಯಬಹುದಾದ ಮಕ್ಕಳಿಗೆ ಪ್ರಾಥಮಿಕ ಶಾಲೆಗಳು ಲಭ್ಯವಿದ್ದರೂ ಚಿಕ್ಕ ಮಕ್ಕಳಿಗೆ ಬೇಕಾದ ಅಂಗನವಾಡಿಗಳು ಇರಲಿಲ್ಲ. ನಾಗರಿಕ ಸೌಲಭ್ಯಗಳಿಂದ ವಂಚಿತವಾದ ಅತ್ಯಂತ ಹಿಂದುಳಿದ ಹಳ್ಳಿಗಳಲ್ಲಿ ಕದಂಬದ ಅಂಗನವಾಡಿಗಳು ಆರಂಭವಾದವು. ಶಾಲೆ ಅಂದ ತಕ್ಷಣ ಕಟ್ಟಡಗಳೇ ನಮ್ಮ ಮುಂದೆ ಬರುತ್ತವೆ. ಅಂಗನವಾಡಿಗಳಿಗೆ ಕಟ್ಟಡ ಇದ್ದರೆ ಅನುಕೂಲ, ಇಲ್ಲದಿದ್ದರೂ ನಡೆಸಬಹುದು. ಕಲಿಸುವ ಶಿಕ್ಷಕಿಯ ಮನೆಯಂಗಳವೇ ಅಂಗನವಾಡಿಯಾಯಿತು. ಅಕ್ಷರ ಬರೆಯುವುದಕ್ಕೆ, ಚಿತ್ರ ಬರೆಯುವುದಕ್ಕೆ ಒಂದು ಕರಿಹಲಗೆ ಬೇಕು. ಗೋಡೆಗೆ ಕರಿಬಣ್ಣ ಬಳಿದರೆ ಅದೂ ಕರಿಹಲಗೆಯಾಗುತ್ತದೆ. ಇಂತಹ ಎಲ್ಲ ಸಾಧ್ಯತೆಗಳನ್ನು ಅರಸುತ್ತಲೇ ಮುನ್ನಡೆಯಿತು ಅಂಗಳದ ಅಂಗನವಾಡಿ.

## ಊರಿಗೊಂದು ರೀತಿ, ಸಮಾಜಕ್ಕೊಂದು ಭಾಷೆ



"ನಾನು ಎಸ್ಎಸ್ಎಲ್ಸಿ ಮಾಡಕೊಂಡು ಮನೆಲಿದ್ದೆ. ನನಗೊಂದಿಷ್ಟು ಹಾಡೋದು ಹಾಗೂ ಕಲಿಸೋದೂ ಬರ್ತಿತ್ತು. ಕದಂಬದವರು ಬಂದು ಅಂಗನವಾಡಿ ನಡಸ್ರಿ ಅಂದ್ರು. ನಮ್ಮೂರು ಅಂದ್ರೆ ಮರಾಠಿಗರದ್ದೇ ಕೇರಿ. ಮಕ್ಕಳೆಲ್ಲ ಸುಮ್ನೆ ಅಡ್ಡಾಡತಿದ್ವು. ಅಂಗನವಾಡಿ ನಡಸಲಿಕ್ಕೆ ಕಟ್ಟಡ ಅಂತ ಇರಲಿಲ್ಲ. ನಮ್ಮನೇಲೆ ಎಲ್ಲ ಮಕ್ಕಳನ್ನ ಸೇರಿಸಿ ಕಲಿಸಿದೆ. ಇಪ್ಪತ್ತೈದರಿಂದ ಮೂವತ್ತು ಮಕ್ಕಳಿದ್ರು. ಹತ್ತು ವರ್ಷ ಕಲಿಸಿದೀನಿ. ಮಕ್ಕಳಿಗೆ ಕಲಿಸೋದೇ ಒಂದು ಖುಶಿ. ಅಕ್ಷರ ಕಲಿಸೋದಕ್ಕಿಂತ ಸ್ವಚ್ಛತೆ ಬಗ್ಗೆ, ಊಟ ಮಾಡೋದು, ನೀರು ಕುಡಿಯೋದು ಅದನೆಲ್ಲ ಕಲಿಸಬೇಕಾಯ್ತು. ತಾಯಂದ್ರಿಗೂ ಎಲ್ಲ ಹೇಳಬೇಕಾಯ್ತು. ನಾವು ಮನೇಲೂ ಕನ್ನಡಾನೇ ಮಾತಾಡೋದು. ಮಕ್ಕಳಿಗೂ ಅದನ್ನೇ ಕಲಿಸಿದೆ. ಮುಂದೆ ಸರಕಾರಿ ಮಿನಿ ಅಂಗನವಾಡಿ ಬಂತು. ನಮ್ಮ ಮಕ್ಕಳೆಲ್ಲ ಅದಕೆ ಸೇರಕೊಂಡ್ರು. ನನ್ನ ಕಡೆ ಕಲಿತವರೆಲ್ಲ ಮುಂದೆ ಕನ್ನಡಶಾಲೆ ಹೈಸ್ಕೂಲಿಗೆಲ್ಲ ಹೋದ್ರು. ಕೆಲವರು ಕಾಲೇಜಿಗೂ ಹೋಗಿ ಡಿಗ್ರಿ ಮಾಡಿ ಈಗ ಬೆಂಗಳೂರಲ್ಲಿ ಕೆಲಸ ಮಾಡ್ತಿದಾರೆ" ಇದು ಶ್ರೀಮತಿ ಗೌರಮ್ಮ ಶಿವಾಜಿ ಮರಾಠಿಯವರ ಮಾತು. ಅವರ ಊರು ಯಡೂರಬೈಲು. ಬನವಾಸಿಯಿಂದ ಮೂರು ಕಿಲೋಮೀಟರ್ ದೂರದಲ್ಲಿದೆ. ಎಲ್ಲರ ಉದ್ಯೋಗ ಕೂಲಿ. ಕೆಲವರು ಗೇಣಿಯ ಮೇಲೆ ಬೇರೆಯವರ ಹೊಲಗಳಲ್ಲಿ ಕೃಷಿ ಮಾಡುತ್ತಾರೆ. ಅದೂ ವರ್ಷವಿಡೀ ಉದ್ಯೋಗ ಕೊಡುವ ಕೆಲಸವಲ್ಲ. ಮಳೆಯನ್ನವಲಂಬಿಸಿದ ಕೃಷಿ. ಬಡತನದ ಜೊತೆಯಲ್ಲಿ ಆಗೀಗ ಕಾಡುವ ನಿರುದ್ಯೋಗ, ಸಂಗಡ ಸೇರಿಕೊಳ್ಳುವ ಚಟಗಳ ನಡುವೆ ಊರಿನಲ್ಲಿ ಬದುಕುವ ಮಕ್ಕಳು. ಅಂಗನವಾಡಿಯಲ್ಲಿ ರೂಢಿಸಿದ ಸಂಸ್ಕಾರದಿಂದ ಈ ಮಕ್ಕಳು ಯೋಗ್ಯರಾಗಿ ಬೆಳೆದರು ಎನ್ನುವುದು ಹೆಮ್ಮೆಯ ಸಂಗತಿಯಲ್ಲವೆ! ಮುಂದೆ ಎಲ್ಲ ಊರುಗಳಲ್ಲಿ ಸರಕಾರಿ ಅಂಗನವಾಡಿಗಳು ಬಂದಾಗ ನಮ್ಮ ಪ್ರಯತ್ನದ ಅಗತ್ಯ ಕಾಣಲಿಲ್ಲ. ನಾವು ಕಟ್ಟಿದ ಕಟ್ಟಡದಲ್ಲೇ ಕೆಲವು ಅಂಗನವಾಡಿಗಳು ಆರಂಭವಾದರೆ, ನಾವು ನೇಮಿಸಿದ ಅನೇಕ ಶಿಕ್ಷಕಿಯರು ಸರಕಾರಿ ಅಂಗನವಾಡಿಯ ಶಿಕ್ಷಕಿಯರಾಗಿ ಆಯ್ಕೆಯಾದರು.

## ಊರಿನ ಭಾಗ್ಯ ಬದಲಿಸಿದ ಅಂಗನವಾಡಿಗಳು;

ಕಲಿಕೆಯಲ್ಲಿ ಸಂವಹನವೇ ಮುಖ್ಯವಾದ ಸಂಗತಿ. ಕನ್ನಡವೇ ಆದರೂ ಒಂದೊಂದು ಪ್ರದೇಶದ ಬಳಕೆಯಲ್ಲಿ ತುಸು ವ್ಯತ್ಯಾಸವಿರುತ್ತದೆ. ಮಗುವಿಗೆ ತನ್ನ ಪರಿಸರದ ಉಚ್ಚಾರದ ಕ್ರಮ ರೂಢಿಯಾಗಿರುತ್ತದೆ. ಆ ಮಗುವಿಗೆ ಅದೇ ಭಾಷೆಯಲ್ಲಿ ಸಂವಹನ ಸುಲಭ. ಅಲ್ಲದೆ, ಕಲಿಸುವ ಗುರು ತನ್ನ ಪರಿಸರದವರೇ ಆದಾಗ ದೊರಕುವ ವಿಶ್ವಾಸವೂ ದೊಡ್ಡದು. ಅಂತೆಯೇ ಅಕ್ಷರಾಭ್ಯಾಸವನ್ನು ಮೀರಿದ ಸಂಸ್ಕಾರವೇ ಗುರಿಯಾದಾಗ ಪ್ರತಿ ಊರಿನ ರೀತಿ ನೀತಿಗಳನ್ನೂ ಪಾಲಿಸುವುದು ಮುಖ್ಯವಾಗುತ್ತದೆ. ಹಿರಿಯರನ್ನು ಗೌರವಿಸುವ, ದೇವರಲ್ಲಿ ಪ್ರಾರ್ಥಿಸುವ ವಿಷಯದಲ್ಲಿ ನಮ್ಮಲ್ಲಿ ಬಹುತ್ವವಿದೆ. ಒಂದೇ ವಿಧಾನವನ್ನು ನಾವು ರೂಢಿಸಿದರೆ ಅದು ಸಹಜವಾಗಿ ಸ್ವೀಕರಿಸಲ್ಪಡುವುದಿಲ್ಲ, ಒತ್ತಾಯದ ಕಲಿಕೆಯಾಗುತ್ತದೆ. ಇದನ್ನೆಲ್ಲ ಗಮನಿಸಿದ ನಾವು ಅಂಗನವಾಡಿ ಆರಂಭಿಸಿದ ಊರುಗಳಲ್ಲಿ ಪಿಯುಸಿ/ಎಸ್‌ಎಸ್‌ಎಲ್‌ಸಿ ಪಾಸು ಮಾಡಿದ ಹೆಣ್ಣುಮಕ್ಕಳನ್ನು ಗುರುತಿಸಿ ಅವರಿಗೆ ಅಗತ್ಯ ತರಬೇತಿ ನೀಡಿ ಶಿಕ್ಷಕಿಯಾಗಿ ನೇಮಿಸಿದೆವು. ಈ ಶಿಕ್ಷಕಿಯರೆಲ್ಲ ಮಕ್ಕಳಿಗೆ 'ಮಾತಾಜಿ' ಆಗಿದ್ದರು. ಕಲಿಕೆಗೆ ಬೇಕಾಗಿ ಆಟಿಗೆ ಸಾಧನ, ಮಕ್ಕಳಿಗೆ ಸಮವಸ್ತ್ರ, ಶಾಲೆಗೆ ಚಾಪೆ, ಪ್ರಥಮ ಚಿಕಿತ್ಸೆಯ ಔಷಧಗಳನ್ನೂ ನೀಡಿದೆವು. ಒಂದು ಊರಿನ ಎಲ್ಲ ಸಮಾಜದ ಮಕ್ಕಳು ಒಟ್ಟಿಗೆ ಸೇರಿ ಹಾಡಿ ಕುಣಿದು ನಲಿಯುತ್ತ ಒಂದಷ್ಟು ಹೊತ್ತು ಕಳೆಯುವುದು ಆ ಊರಿನ ಸಾಮಾಜಿಕ ಚಟುವಟಿಕೆ ಎನ್ನಿಸಿದ್ದು ಈಗ ಇತಿಹಾಸ. ಶಿಕ್ಷಣ, ಅಕ್ಷರ ಕಲಿಕೆಯ ಕಸರತ್ತಾಗದೆ ಆನಂದದ ಸಂಸ್ಕಾರವಾದದ್ದು ಕದಂಬದ ಸಂಕಲ್ಪಕ್ಕೆ ಸಂದ ಯಶಸ್ಸಾಗಿದೆ.



ಜೊಯಿಡಾ ತಾಲೂಕಿನಲ್ಲಿ ಕಾಳಿ ನದಿಯ ಹಿನ್ನೀರನ್ನು ದಾಟಿ ಒಳ ಹಳ್ಳಿಯೊಂದರಲ್ಲಿ (ಖನಗಾಂವ್) ಅಂಗನವಾಡಿ ಆರಂಭಿಸಿದ್ದು ನಿಜಕ್ಕೂ ಸಾಹಸದ ಕೆಲಸವಾಗಿತ್ತು. ಇಂತಹ ಅನೇಕ ಸಾಹಸಗಳ ಕಥೆ ಅಂಗನವಾಡಿಯ ಇತಿಹಾಸದಲ್ಲಿವೆ. ಈ ಅಂಗನವಾಡಿ ಅಂಗಳದ ಸದ್ದು ದೆಹಲಿಯನ್ನು ತಲುಪಿತ್ತು. ಕೇಂದ್ರ ಸಮಾಜಕಲ್ಯಾಣ ಮಂಡಳಿಯ ಅಂದಿನ ಅಧ್ಯಕ್ಷೆಯಾದ ಶ್ರೀಮತಿ ಮೃದುಲಾ ಸಿನ್ಹಾರವರು ನನ್ನನ್ನು ಕರೆಸಿದರು, ವಿಷಯ ಕೇಳಿದರು. ಎಲ್ಲವನ್ನೂ ವಿವರವಾಗಿ ತಿಳಿಸಿದೆ. ನನ್ನ ಜೊತೆಯಲ್ಲಿಯೇ ಹೊರಟೇಬಿಟ್ಟರು.



ಕದಂಬ ನಡೆಸುತ್ತಿರುವ ಬಹುತೇಕ ಅಂಗನವಾಡಿಗಳಿಗೆ ಸ್ವತಃ ಅನುದಾನವನ್ನು ಘೋಷಿಸಿದರು. ಸಾಮಾಜಿಕ ಸಂಘಟನೆಯೊಂದರ ಕಾರ್ಯಕ್ಕೆ ಸರಕಾರವೇ ಒಲಿದುಬಂದ ರೀತಿ ನಿಜಕ್ಕೂ ಆಶ್ಚರ್ಯಕರ. ಕೆಲವು ವರ್ಷಗಳ ಕಾಲ ಕೇಂದ್ರ ಸಮಾಜಕಲ್ಯಾಣ ಇಲಾಖೆಯ ಅನುದಾನದಲ್ಲಿ ಈ ಅಂಗನವಾಡಿಗಳನ್ನು ನಡೆಸಿದೆವು. ವರ್ಷವಿಡೀ ಕದಂಬ ಅದನ್ನು ನಿರ್ವಹಿಸಿದರೆ ವರ್ಷದ ಕೊನೆಯಲ್ಲಿ ಇಲಾಖೆಯಿಂದ ಅನುದಾನ ಬರುತ್ತಿತ್ತು. ಯಾವ ಊರಿಗೇ ಹೋಗಲಿ ಆ ಊರಿನವರು ಆರಂಭದಲ್ಲಿ ಅಷ್ಟಾಗಿ ಆಸಕ್ತಿ ತೋರದಿದ್ದರೂ ನಂತರ ಮಕ್ಕಳ ಪ್ರಗತಿಯನ್ನು ಕಂಡು ಅವರೇ ಮುಂದೆ ನಿಂತು ಸಹಕಾರ ನೀಡಿದರು.

## ಪ್ರತಿಭಾ ಪೋಷಣೆಗೆ ಪೂರಕ ಪ್ರಯತ್ನ

ಶಿಕ್ಷಣದ ಆಧುನಿಕ ಪರಿಭಾಷೆ ಬದಲಾಗಿದೆ. ಅಂತೆಯೇ ಅದರ ವೆಚ್ಚವೂ ಬೆಳೆಯುತ್ತಿದೆ. ಕಾಲೇಜುಗಳಲ್ಲಿ ಪ್ರವೇಶ ಉಚಿತವಾಗಿ ಸಿಕ್ಕರೂ, ಪುಸ್ತಕ- ನೋಟ್ ಬುಕ್‌ಗಳನ್ನು ಹೊಂದಿಸಿಕೊಳ್ಳುವುದೇ ಕಷ್ಟವಾಗುವ ಸಂದರ್ಭ ನಿರ್ಮಾಣವಾಗಿದೆ. ಇದನ್ನು ಗಮನಿಸಿದ ಕದಂಬ 2009 ರಲ್ಲಿ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ 'ವಿದ್ಯಾರ್ಥಿವೇತನ' ನೀಡುವ ಪ್ರಯತ್ನ ಮಾಡಿತು. ಅಲ್ಲದೆ, ಜಿಲ್ಲೆಯ ಅನೇಕ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಉಚಿತವಾಗಿ ಹತ್ತಾರು ಸಾವಿರ ಉತ್ತಮ ಗುಣಮಟ್ಟದ ನೋಟ್ ಬುಕ್ ಹಾಗೂ ಕಂಪಾಸ್‌ಬಾಕ್ಸ್ ವಿತರಿಸಿದೆವು. ಇಂತಹ ಪ್ರಯತ್ನಗಳಿಂದ ಅನೇಕ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ಅನುಕೂಲವಾಗಿದೆ. ಅದಕ್ಕಿಂತ ಮಿಗಿಲಾಗಿ ಶಿಕ್ಷಣ ಕ್ಷೇತ್ರದ ವಿವಿಧ ಸ್ತರಗಳಲ್ಲಿರುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಕದಂಬಕ್ಕೆ ಸಾಧ್ಯವಾಗಿದೆ





## ಇಂಗ್ಲೀಷ್ ಕಲಿಕೆ, ಕಾಲದ ಬಯಕೆ

ಜಾಗತಿಕ ವ್ಯವಹಾರಕ್ಕೆ ನಮ್ಮನ್ನು ನಾವು ತೆರೆದುಕೊಂಡಾಗಿನಿಂದ ಸಂವಹನದ ಭಾಷೆಯಾಗಿ ಇಂಗ್ಲೀಷ್ ಬಳಕೆಯಾಗುತ್ತಿದೆ. ಬ್ರಿಟಿಷರ ವಸಾಹತುಶಾಹಿಯ ನೆರಳಿನಿಂದ ಹೊರಬರಲು ಯಾವುದೇ ಗಂಭೀರ ಪ್ರಯತ್ನ ನಡೆಯದಿರುವುದರಿಂದ ಭಾರತದಲ್ಲಿಯೂ 'ಇಂಗ್ಲೀಷ್' ಶಿಕ್ಷಣದ ಮಾಧ್ಯಮವಾಗಿ ಮುಂದುವರಿದಿದೆ. ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಯುವುದು, ಇಂಗ್ಲೀಷ್ ಸಂಭಾಷಣೆಯ ರೀತಿ ನೀತಿಗಳನ್ನು ರೂಢಿಸುವುದು, ಇಂಗ್ಲೀಷ್‌ನಲ್ಲಿ ಪತ್ರವ್ಯವಹಾರ ಮಾಡುವುದು ಇದು ಕಾಲದ ಅಗತ್ಯವಾಗಿದೆ. ಧಾರವಾಡದ 'ವಿದ್ಯಾಪೋಷಕ' ಶಿಕ್ಷಣ ವಿಭಾಗದಲ್ಲಿ ಕ್ರಿಯಾಶೀಲವಾಗಿರುವ ಸೇವಾ ಸಂಸ್ಥೆ. ವಿದ್ಯಾಪೋಷಕದ ಸಹಯೋಗದಲ್ಲಿ ಕದಂಬ, ಇಂಗ್ಲಿಷ್ ಭಾಷಾ ಜಾಗೃತಿ ಆಂದೋಲನವನ್ನು ಆಯೋಜಿಸಿತ್ತು. ಭಾಷೆಯನ್ನು ಭಾಷೆಯಾಗಿ ಕಲಿಯುವ ವಿಧಾನವನ್ನು ತಿಳಿಸುವಲ್ಲಿ ಹಾಗೂ ಇಂಗ್ಲಿಷ್ ಎಂಬ ಗುಮ್ಮನ ಭಯವನ್ನು ದೂರಮಾಡುವಲ್ಲಿ ಈ ಪ್ರಯತ್ನ ಯಶಸ್ವಿಯಾಯಿತು.



## ಕಲಿಕೆಗೆ ತಕ್ಕ ಕರಿಯರ್ ಗೈಡೆನ್ಸ್

ಪರಂಪರೆಯ ಕೌಶಲದಿಂದ ಉದ್ಯೋಗ ಮುಂದುವರಿಸುವ ಅವಕಾಶವನ್ನು ಕಳೆದುಕೊಂಡಾಗಿನಿಂದ ನಮಗೆ ಪದವಿಯ ಪತ್ಯವೇ ಉದ್ಯೋಗವನ್ನು ನೀಡಬೇಕೆಂಬ ನಿರೀಕ್ಷೆ ಆರಂಭವಾಗಿದೆ. ಕಲಿಕೆಯ ಕೆಲವು ಘಟ್ಟಗಳಲ್ಲಿ ಯಾವ ಕೋರ್ಸ್‌ನ್ನು ಆಯ್ದುಕೊಳ್ಳಬೇಕೆಂಬ ಮಾರ್ಗದರ್ಶನವೂ ಬೇಕಾಗುತ್ತದೆ. ಅಲ್ಲದೆ, ಕಲಿತ ವಿದ್ಯೆಯ ಕ್ರಿಯಾತ್ಮಕ ಬಳಕೆ, ವರ್ತಮಾನದ ಅಗತ್ಯಕ್ಕೆ ಬೇಕಾಗಿ ಆ ವಿದ್ಯೆಯ ಅನ್ವಯ ಮತ್ತು ಅನುಷ್ಠಾನಗಳು ಕಾಲೇಜು ಕಲಿಕೆಯ ಭಾಗವಾಗಿಲ್ಲ. ಆದ್ದರಿಂದ ಕಲಿಕೆಗಿರುವ ಅವಕಾಶಗಳ ಕುರಿತು ಮತ್ತು ಉದ್ಯೋಗದ ಅವಕಾಶಗಳ ಕುರಿತು ತಜ್ಞ ಮಾರ್ಗದರ್ಶನ ಕಲ್ಪಿಸುವ ಕರಿಯರ್ ಗೈಡೆನ್ಸ್ (ಬದುಕಿನ ಮಾಹಿತಿ) ಪೂರಕ ಶಿಕ್ಷಣದ ಬಹುಮುಖ್ಯ ಭಾಗವಾಗಿದೆ. ಈ ವಿಷಯದಲ್ಲಿ ಬೆಂಗಳೂರು ಹಾಗೂ ಶಿರಸಿಯ ರೋಟರಿ ಕ್ಲಬ್‌ಗಳೊಡನೆ ಕದಂಬ ಕೈಜೋಡಿಸಿತ್ತು. ಇವೆಲ್ಲ; ಸಂಘಟನೆಗೆ ಹೊಸ ಅವಕಾಶಗಳಾದರೆ, ಕಾರ್ಯಕರ್ತರಿಗೆ ಹೊಸ ಅನುಭವಗಳಾದವು.

ವಿದ್ಯಾಪೋಷಕದ ಸಂಪರ್ಕದಿಂದಾಗಿ ಅನೇಕ ಸಮಾಜಮುಖಿ ಸಾಧಕರ ಪರಿಚಯವಾಯಿತು, ಪೂರಕ ಶಿಕ್ಷಣದ ಅಗತ್ಯ ಮತ್ತು ಸಾಧ್ಯತೆಗಳ ಬಗ್ಗೆ ಹೊಸ ಹೊಳವುಗಳೂ ಸಿಕ್ಕವು. ಇವೆಲ್ಲವೂ ಕಾರ್ಯಕರ್ತರ ಮನೋಬಲವನ್ನು ಬೆಳೆಸುತ್ತವೆ, ಅರಿವಿನ ಕ್ಷಿತಿಜವನ್ನು ವಿಸ್ತರಿಸುತ್ತವೆ. ಬೇರೆ ಕ್ಷೇತ್ರಗಳಲ್ಲಿ ಕಾರ್ಯ ಮಾಡುವಾಗಲೂ ನಮ್ಮ ನೆರವಿಗೆ ಬರುತ್ತವೆ.



## ಕೂಲಿಯಾಳುಗಳ 'ಸಿಂಡ್‌ಕುಬೇರ'

"ನಮಗೆ ಮನೆ ಕಟ್ಟೋ ಕನಸೇ ಇರಲಿಲ್ಲ. ಸೋಗೆ ಗುಡಸಲಲ್ಲಿ ಬದಕೋದೇ ನಮ್ಮ ಹಣೆಬರ ಅಂದಕೊಂಡಿದ್ವಿ. ಕೂಲಿ ಮಾಡೋರಿಗೆ ಊಟದ್ದೇ ಕನಸು. ಆದರೆ ಈ ಕದಂಬದವರು ಬಿಡಲಿಲ್ಲ. ಬ್ಯಾಂಕಿಂದ ಸಾಲ ತಗೋರಿ, ಸಬ್ಸಿಡಿ ಸಿಗತೈತೆ, ಉಳಿದಿದ್ದು ನಿಧಾನ ತುಂಬಿ ಅಂದ್ರು. 30 ಸಾವರ ರೂಪಾಯಿ ಸಾಲಾ ಕೊಡ್ತೇವೆ ಅಂದ್ರು. 10ಸಾವರ ರೂಪಾಯಿ ಸಬ್ಸಿಡಿ ಅಂದ್ರು. 2005ರಲ್ಲಿ 30 ಸಾವರ ಅಂದ್ರೆ ನಮಗೆ ದೊಡ್ಡ ದುಡ್ಡು. ನಮಗೆ ಧೈರ್ಯನೇ ಆಗಲಿಲ್ಲ. ಆಗ ನಮ್ಮ ಎಂಪಿ ಅನಂತಕುಮಾರ ಹೆಗಡೇರು ನಮಗೆ ಧೈರ್ಯ ಕೊಟ್ಟರು. ಆಗ ಒಪ್ಪಿ ಮನೆಕಟ್ಟೋದಕ್ಕೆ ಕೈ ಹಾಕಿದ್ವಿ. ಎರಡು ರೂಮಿಂದು ಒಂದು ಹಂಚಿನ ಮನೆ ಕಟ್ಟಿದಿವಿ. ಮನೆ ನಾವೇ ಕಟ್ಟಿದ್ದು. ನಮ್ಮ ಕೈಯಿಂದನೂ ಸ್ವಲ್ಪ ಹಾಕಿ ಚಲೋ ಕಟ್ಟಿದಿವಿ. ಮುಂದೆ ನಮ್ಮ ಕೈಲಿ ರೊಕ್ಕ ಬಂದಾಗೆಲ್ಲ ಆ ಮನೇನೆ ದೊಡ್ಡ ಮಾಡಿದಿವಿ. ಈಗ ನೋಡಿದರೆ ಇದು ಮೂವತ್ತು ಸಾವಿರದ ಮನೆ ಅನಸೋದಿಲ್ಲ. ಬಚ್ಚಲು ಶೌಚಾಲಯ ಎಲ್ಲ ಕಟ್ಟಿದಿವಿ. ಕದಂಬದವರು ಹೇಳದಿದ್ರೆ ಗುಡಸಲದಾಗೇ ಇರತಿದ್ವಿ. ದುಡಿದಿದ್ದೆಲ್ಲ ಉಂಡು ತಿಂದು ಕುಡದು ಖಾಲಿಯಾಗತಿತ್ತು." ಹೀಗೆ ಕೃತಜ್ಞತೆಯಿಂದ ಕದಂಬವನ್ನು ಸ್ಮರಿಸುತ್ತ ತಮ್ಮ ಮನೆಯ ಮುಂದೆ ಹೆಮ್ಮೆಯಿಂದ ನಿಂತವರು ಯಡೂರಬೈಲಿನ ಶ್ರೀಮತಿ ದಾಕ್ಷಾಯಣಿ ದುರಗೋಜಿ ಮರಾಠಿ.



ರಾಜೀವ ಗಾಂಧಿ ಆವಾಸ್ ಯೋಜನೆಯಡಿ ಸಿಂಡಿಕೇಟ್ ಬ್ಯಾಂಕ್ ನೀಡಿದ ಮೂವತ್ತು ಸಾವಿರ ರೂಪಾಯಿ ಸಾಲ ಪಡೆದು ತಮ್ಮ ದುಡಿಮೆಯಿಂದಲೂ ಒಂದಷ್ಟು ಜೋಡಿಸಿ ಸುಂದರವಾದ ಮನೆ ಕಟ್ಟಿಕೊಂಡರು. ಮನೆಯವರೆಲ್ಲ ದುಡಿದರು, ಅಕ್ಕ ಪಕ್ಕದವರು ಕೈಜೋಡಿಸಿದರು. ಕಲ್ಲು ಕೆತ್ತಿ, ಸಿಮೆಂಟು ಮೆತ್ತಿ, ಪಕಾಸು ಜೋಡಿಸಿ ಹಂಚು ಹೊದೆಸಿದರು. ಹತ್ತು ಸಾವಿರ ರೂಪಾಯಿ ಸಬ್ಸಿಡಿ ಸಿಕ್ಕರೆ ಉಳಿದ ಇಪ್ಪತ್ತು ಸಾವಿರ ರೂಪಾಯಿ ಸಾಲ ತೀರಿಸುವುದಕ್ಕೆ ಹತ್ತು ವರ್ಷಗಳ ಅವಧಿ ಸಿಕ್ಕಿತ್ತು. ಅವಧಿಗಿಂತ ಮೊದಲೇ ಸಾಲ ತೀರಿಸಿದ ಸಾಹಸ ಮೆಚ್ಚಬೇಕಾದದ್ದು. ಸ್ವಸಹಾಯ ಸಂಘಗಳ ಮೂಲಕ ಪ್ರತಿ ವಾರ ಉಳಿಸಿದ ಹಣದಿಂದ ಮನೆ ಸಾಲ ತೀರಿಸಿದ್ದಾರೆ. ಆಕಾರಬದ್ಧ ಮನೆಯಿಂದಾಗಿ ಬದುಕಿನ ಘನತೆ ಹೆಚ್ಚಿದೆ. ಸ್ವಚ್ಛತೆ ಸೌಂದರ್ಯಗಳಿಗೆ ಅವಕಾಶವಾಗಿದೆ. ಕದಂಬದ ಸಣ್ಣದೊಂದು ಪ್ರೇರಣೆ ಕೂಲಿಯಾಳುಗಳ ಬದುಕಿನ ಲಕ್ಷಣವನ್ನೇ ಬದಲಿಸಿದ್ದು ನಮನ್ನು ಬೆರಗಾಗಿಸಿದೆ.

ಮನೆ ಕೇವಲ ಕಟ್ಟಡವಲ್ಲ. ಅದೊಂದು ಕನಸು, ಅದೊಂದು ಭರವಸೆ. ಕುಟುಂಬದ ಭದ್ರತೆಗೂ, ಬದುಕಿನ ನೆಮ್ಮದಿಗೂ ಅವಕಾಶ ಕಲ್ಪಿಸುವ ಬೆಚ್ಚಗಿನ ನೆರಳು, ಮನೆ. ಮನೆ ವ್ಯವಸ್ಥಿತವಾಗಿದ್ದರೆ ಬದುಕುವವರ ಆತ್ಮವಿಶ್ವಾಸ ದೊಡ್ಡದಿರುತ್ತದೆ.ಅನಾರೋಗ್ಯದ ಸಮಸ್ಯೆ ಕಡಿಮೆಯಾಗುತ್ತದೆ. ಮನೆಯಲ್ಲಿ ಅಪೇಕ್ಷಿತವಾದ ಸಾಂಸ್ಕೃತಿಕ ವಾತಾವರಣಕ್ಕೆ ಕನಿಷ್ಟ ಸೌಲಭ್ಯಗಳಾದರೂ ಇರುವ ವಸತಿಯ ಅಗತ್ಯವಿದೆ. ಇದನ್ನೆಲ್ಲ ಚಿಂತಿಸಿದಾಗ ಹಿಂದುಳಿದ ಬಂಧುಗಳಿಗೆ ಸುಸಜ್ಜಿತವಾದ ಮನೆಯನ್ನು ಒದಗಿಸುವ ಕುರಿತು ಯೋಜಿಸಿದೆ. ಆಗ ನಮ್ಮ ನೆರವಿಗೆ ಬಂದಿದ್ದು ರಾಜೀವ ಗಾಂಧಿ ಗ್ರಾಮೀಣ ಗೃಹ ನಿರ್ಮಾಣ ಯೋಜನೆ. ಅದನ್ನು ಅನುಷ್ಠಾನಗೊಳಿಸುವಲ್ಲಿ ನಮ್ಮೊಂದಿಗೆ ನಿಂತಿದ್ದು ಸಿಂಡಿಕೇಟ್ ಬ್ಯಾಂಕ್. ಆಗ ಆ ಯೋಜನೆಗೆ ಒಂದು ಹೆಸರಿಡಬೇಕಾಗಿ ಬಂತು. ನಾನು ಸೂಚಿಸಿದ “ಸಿಂಡ್ ಕುಟೀರ”ಎನ್ನುವ ಹೆಸರನ್ನೇ ಬ್ಯಾಂಕ್ ಒಪ್ಪಿದ್ದರಿಂದ ಕೂಲಿಯಾಳುಗಳ ಸಿಂಡ್ ಕುಟೀರ ಸಿದ್ಧವಾಯಿತು. ಬ್ಯಾಂಕ್ ನೀಡಿದ ಸಾಲ ಬಡ್ಡಿಸಹಿತವಾಗಿ ಮರುಪಾವತಿಯಾಗಿದೆ. ಸಾಲಪಡೆದವರು ಶಾಶ್ವತವಾದ ಮನೆಯನ್ನು ಹೊಂದಿದ್ದಾರೆ. ಸರಕಾರದ ಒಂದು ಯೋಜನೆ ಬಾಧ್ಯಸ್ತರೆಲ್ಲರ ಸಹಕಾರದಿಂದ ಹೇಗೆ ಯಶಸ್ವಿಯಾಗಬಹುದು ಎನ್ನುವುದಕ್ಕೆ ಸಿಂಡ್ ಕುಟೀರ ಒಂದು ನಿದರ್ಶನ.



ಈ ಯೋಜನೆಯ ಯಶಸ್ಸಿನಲ್ಲಿ ಗಮನಿಸಬೇಕಾದ ಇನ್ನೊಂದಿಷ್ಟು ಅಂಶಗಳಿವೆ. ಸಾಲಪಡೆದವರಿಗೆ ನಾವು ಕೊಟ್ಟ ಸ್ವಾತಂತ್ರ್ಯ, ಫಲಾನುಭವಿಗಳು ಪಾಲ್ಗೊಂಡ ರೀತಿ, ಬ್ಯಾಂಕ್ ಸಹಕರಿಸಿದ ಕ್ರಮ ಮತ್ತು ಕದಂಬ ನಿರಂತರವಾಗಿ ನಿರ್ವಹಿಸಿದ ಅನುವರ್ತಿ ಕಾರ್ಯ. ಮನೆ ಕಟ್ಟಿಕೊಳ್ಳುವವರು ತಮ್ಮ ದುಡಿಮೆಯನ್ನು ಸೇರಿಸಿಕೊಂಡು ಮನೆಯ ಅಳತೆಯಲ್ಲಿ ಬದಲಾವಣೆ ಮಡಿಕೊಳ್ಳುವ ಅವಕಾಶವಿತ್ತು. ಇಂಜನೀಯರ್ ಒಪ್ಪಿದ ನಕ್ಷೆಯೇ ಇರಬೇಕೆಂಬ ಒತ್ತಾಯವಿರಲಿಲ್ಲ. ಕದಂಬ ಆರಂಭಿಸಿದ ಸ್ವಸಹಾಯ ಗುಂಪುಗಳು ಸಾಲ ಮರುಪಾವತಿಗೆ ಬೇಕಾದ ಭರವಸೆ ನೀಡಿದ್ದವು. ಸಾಲ ತೀರಿಸಬೇಕೆಂದು ಉಳಿತಾಯ ಮಾಡಿದರು. ಅನಗತ್ಯ ಖರ್ಚನ್ನು ಕಡಿಮೆ ಮಾಡಿದರು. ಹೆಚ್ಚು ದುಡಿಯುವ ಅವಕಾಶವನ್ನು ಹುಡುಕಿದರು. ಮನೆಯವರೆಲ್ಲ ಸೇರಿ ಯೋಚಿಸಿ ಯೋಜಿಸಿ ಮನೆ ಕಟ್ಟಿಕೊಂಡರು. ನಿಜಕ್ಕೂ ಅದು ಅವರದೇ ಮನೆ. ಕಟ್ಟಿದ ಮನೆಗೆ ಸರಕಾರದ ಅಂಗೀಕಾರವೂ ಸಿಕ್ಕಿದ್ದರಿಂದ ಅಧಿಕೃತವಾಗಿ ನಮೂದಾಯಿತು.

ಇಂದ,
ಶ್ರೀಮತಿ ಭಾಗೀರಥಿ ನಾರಾಯಣ ಪಟಗಾರ,
ಮಾಸೂರು,
ಹೆಗಡೆ,
ಕುಮಟಾ.

ಪ್ರಶ್ನೆ - ನಿಮಗೆ ಮನೆ ನಿರ್ಮಾಣ ಮಾಡಲು ಇದ್ದ ಸಮಸ್ಯೆ,ಆ ಸಮಸ್ಯೆಗೆ ಸಿಂಡಕುಟೀರ ಯೋಜನೆ ಸ್ಪಂದಿಸಿದ ರೀತಿ ಮತ್ತು ಯೋಜನೆಯ ಬಗ್ಗೆ ಹೇಳಿ.

ಮನೆ ಕಟ್ಟಿಕೊಡಲು ಬಂದಂತಹ "ಸಿಂಡಕುಟೀರ" ಯೋಜನೆಯ ಬಂಧುಗಳಿಗೆ ಮೇಲಿನ ಪ್ರಶ್ನೆಗೆ ತಿಳಿಯಪಡಿಸುವುದೇನೆಂದರೆ ನಾವು ಮನೆ ಕಟ್ಟಿಕೊಳ್ಳಲು ಸಾಧ್ಯವಾಗುವಷ್ಟು ಹಣ ತೊಡಗಿಸಿಕೊಳ್ಳಲು ನಾವು ಅಸಹಾಯಕರಾಗಿದ್ದೆವು. ಆ ಸಂಧರ್ಭದಲ್ಲಿ ಈ "ಸಿಂಡಕುಟೀರ" ಯೋಜನೆ ನಮ್ಮ ಕನಸಿನ ಮನೆಯ ನನಸು ಮಾಡಿಕೊಟ್ಟಂತಹ ಯೋಜನೆಯಾಗಿದೆ. ಈ ಯೋಜನೆ ಬರದೆ ಹೋಗಿದ್ದರೆ ನಮ್ಮ ಕನಸಿನ ಮನೆ ಹಾಗೆ ಕನಸಾಗಿಯೇ ಉಳಿಯುತ್ತಿತ್ತು.

ಹಾಗೆಯೇ ಮುಂದುವರೆದು ಯೋಜನೆಯ ಬಗ್ಗೆ ಹೇಳಬೇಕೆಂದರೆ, ನಮಗೆ ಬೇಕಾದ ರೀತಿಯಲ್ಲಿ ನಾವು ಮನೆ ಕಟ್ಟಿಕೊಳ್ಳಲು ಅನುವು ಮಾಡಿಕೊಟ್ಟಿದ್ದರಿಂದ, ಈಗ ಗ್ರಾ,ಪಂ. ದಲ್ಲಿ ಬರುವ ಯೊಜನೆಗಳಿಗಿಂತ ಇದು ಉತ್ತಮವಾಗಿದೆ. ಹಾಗೆಯೇ ಸಾಲದ ಮರು ಪಾವತಿ ಮಾಡಲು ಹೆಚ್ಚಿನ ಅವಕಾಶ ಇರುವುದರಿಂದ ನಮ್ಮ ನೆಮ್ಮದಿಯ ಜೀವನ ಸಾಗಿಸಲು ಅನುಕೂಲವಾದಂತಹ ಯೋಜನೆಯಾಗಿದೆ, ಎಂದು ತಮ್ಮಲ್ಲಿ ಹೇಳಲು ಇಷ್ಟ ಪಡುತ್ತೇನೆ.

ಶುಭಾಶಯಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ,
ಭಾಗೀರಥಿ ನಾರಾಯಣ ಪಟಗಾರ,
ಮಾಸೂರು,
ಹೆಗಡೆ,
ಕುಮಟಾ ತಾಲೂಕು,
ಉತ್ತರ ಕನ್ನಡ

# ಆರೋಗ್ಯ ಸಂಜೀವನಿ

ಆರೋಗ್ಯವೇ ಭಾಗ್ಯ ಎಂಬುದು ಪ್ರಸಿದ್ಧವಾದ ಮಾತು. ಇದು ನಮ್ಮ ಪ್ರಯತ್ನದಿಂದ ಗಳಿಸಿಕೊಳ್ಳಬಹುದಾದ ಭಾಗ್ಯ ಎನ್ನಿಸದೆ, ನಮ್ಮ ಭಾಗ್ಯದಲ್ಲಿ ಎಷ್ಟೋ ಅಷ್ಟೇ ನಮ್ಮ ಆರೋಗ್ಯ ಅಂದುಕೊಂಡಿದ್ದೇ ಹೆಚ್ಚು. ಹಾಗಾಗಿ ಅರೋಗ್ಯ ಕ್ಷೇತ್ರದಲ್ಲಿ ಒಂದಷ್ಟು ಕಾರ್ಯ ಮಾಡಬೇಕು ಅಂದುಕೊಂಡಾಗ ನಮಗನಿಸಿದ್ದು ಆಸ್ಪತ್ರೆ, ಔಷಧಕ್ಕಿಂತ ಆರೋಗ್ಯ ಜಾಗೃತಿಯೇ ಮುಖ್ಯವಾದದ್ದು ಎಂಬುದು. ಕಾಲದ ಬದಲಾವಣೆಯಲ್ಲಿ ಕಾಡುವ ನೆಗಡಿ ಜ್ವರದಂತಹ ಸಾಮಾನ್ಯ ಕಾಯಿಲೆಗಳಿಗೆ ವಿಪರೀತ ಕಾಳಜಿ ಮಾಡಿ ಆತಂಕಪಡುವವರೂ ಇದ್ದಾರೆ. ಕ್ಷಯ ಕುಷ್ಟದಂತಹ ಗುಣಪಡಿಸಬಹುದಾದ ಕಾಯಿಲೆಗಳನ್ನೂ ಅಲಕ್ಷಿಸುವವರೂ ಇದ್ದಾರೆ. ಸ್ವಚ್ಛತೆಯ ಕಾಳಜಿಯಿಂದಲೇ ಅನೇಕ ಕಾಯಿಲೆಗಳನ್ನು ಬರದಂತೆ ತಡೆಯಬಹುದೆಂಬ ಸಂಗತಿಯನ್ನೂ ಮತ್ತೆ ಮತ್ತೆ ಹೇಳಬೇಕಾದ ಅಗತ್ಯವಿದೆ.




## ಆರೋಗ್ಯ ಜಾಗೃತಿಗೊಂದು ಕಲಾತ್ಮಕ ಆಯಾಮ

ಮಲೆನಾಡಿನ ಕಾಡಿನ ಹಸಿರಿನಲ್ಲಿ ಅವಿತುಕುಳಿತಿರುವ ಒಂಟಿ ಮನೆಗಳಿಂದ ಜನರನ್ನು ಕರೆತಂದು ಒಂದು ಕಡೆ ಸೇರಿಸಿ ಸಂವಾದ ಏರ್ಪಡಿಸುವುದೇ ಒಂದು ದೊಡ್ಡ ಸಾಹಸ. ಅದರಲ್ಲೂ ಕೇವಲ ಮಾಹಿತಿಯನ್ನು ನೀಡುವುದಕ್ಕಾಗಿ ಎಂದು ಕರೆದರೆ ಬರುವವರಾರು? ಆರೋಗ್ಯದ ಮಾಹಿತಿಗೆ ಮನರಂಜನೆಯ ವೇಷ ತೊಡಿಸಿ ಬೀದಿ ನಾಟಕದ ಸರಣಿಯನ್ನೇ ಯೋಜಿಸಿದೆವು. ಊರಿಂದೂರಿಗೆ ಸಾಗುವ ನಾಟಕದ ತಂಡದೊಡನೆ ತಜ್ಞ ವೈದ್ಯರು, ಕದಂಬದ ಸ್ವಯಂಸೇವಕರು ಇದ್ದು ಸಾರ್ವಜನಿಕರೊಡನೆ ಸಂವಾದವನ್ನು ನಡೆಸುತ್ತಿದ್ದರು. ಪ್ರತಿ ಊರಿನ ಆರೋಗ್ಯದ ಪರಿಸ್ಥಿತಿ ಪ್ರತ್ಯೇಕವಾಗಿದ್ದು. ಕಾಡು, ನೀರು, ವಾತಾವರಣಗಳು ಬೇರೆಯಾದಂತೆ ಆರೋಗ್ಯದ ಕಾಳಜಿಯ ವಿಧಾನವೂ ಬೇರೆಯಾಗುತ್ತದೆ. ಪ್ರತಿ ಸಮಾಜದ ಸಂಪ್ರದಾಯಗಳು, ರೀತಿ ನೀತಿಗಳಿಗೂ ಆರೋಗ್ಯಕ್ಕೂ ನಿಕಟವಾದ ಸಂಬಂಧವಿದೆ. ಮನೆಯ ಆಹಾರ ಪದ್ಧತಿ, ಊಟದ ಸಮಯ, ಸ್ನಾನದ ಕ್ರಮ, ಶೌಚಾಲಯ, ವೈಯಕ್ತಿಕ ಶುಚಿತ್ವ, ಅವಲಂಬಿಸಿದ ಉದ್ಯೋಗ ಎಲ್ಲವೂ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಅವನ್ನೆಲ್ಲ ಪರಿಚಯಿಸಿಕೊಳ್ಳುತ್ತ, ಎಲ್ಲರ ಶ್ರದ್ಧೆ ನಂಬಿಗೆಗಳನ್ನೂ ಗೌರವಿಸುತ್ತ ಆರೋಗ್ಯದ ಸೂತ್ರಗಳನ್ನು ತಿಳಿಸಲು ಪ್ರಯತ್ನಿಸಿದರು. ನಾಟಕದಲ್ಲಿ ಹಾಡು ಅಭಿನಯ ವಾದ ಸಂವಾದಗಳಿದ್ದು ಜನ ಕುತೂಹಲ ಕಾತರಗಳೊಂದಿಗೆ ಪಾಲ್ಗೊಳ್ಳುತ್ತಿದ್ದರು. ನಿವೃತ್ತ ಆರೋಗ್ಯ ಶಿಕ್ಷಕರಾದ ಅಂಕೋಲಾದ ಶ್ರೀ ಮೋಹನ ನಾಯ್ಕರ ನೇತೃತ್ವದಲ್ಲಿ ನಡೆದ ಕಲಾಜಾಥಾ ಆರೋಗ್ಯ ಜಾಥಾ ಆಯಿತು.




ನಾಟಕದ ಪರಿಣಾಮವಾಗಿ ಪ್ರೇಕ್ಷಕರಲ್ಲಿ ಮುಕ್ತವಾಗಿ ಮಾತಾಡುವ ಧೈರ್ಯ ಬರುತ್ತಿತ್ತು. ಆಗ ಆರಂಭವಾದ ಸಂವಾದದಲ್ಲಿ ಆ ಊರಿನ ಆರೋಗ್ಯದ ಗುಟ್ಟುಗಳೂ ಹೊರಬರುತ್ತಿದ್ದವು. ಆರೋಗ್ಯದ ಸೂತ್ರಗಳು ಸಾರ್ವತ್ರಿಕವಾದರೂ ಅನಾರೋಗ್ಯದ ಸಮಸ್ಯೆಗಳು ವೈಯಕ್ತಿಕ. ನಮ್ಮ ಕಾರ್ಯ ಸಾರ್ವಜನಿಕ ಜಾಗೃತಿಯೇ ಹೊರತು ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ನೀಡುವುದಲ್ಲ. ಆದರೂ ಅಳಲು ತೋಡಿಕೊಂಡವರಿಗೆ ನೇರ ಪರಿಹಾರ ನೀಡಲಾಗದಿದ್ದರೂ ಪರಿಹಾರದ ಮಾರ್ಗವನ್ನು ಸೂಚಿಸುವ ಅನಿವಾರ್ಯತೆ ಬಂತು. ಆರೋಗ್ಯ ಜಾಗೃತಿ ಎಂದರೆ ಔಷಧ ಪ್ರಜ್ಞೆಯಲ್ಲ, ರೋಗ ನಿಯಂತ್ರಣದ ಮಾಹಿತಿಯಲ್ಲ, ಜೀವನ ವಿಧಾನದ ಸಮಗ್ರ ಅಧ್ಯಯನವೆಂಬ ಅರಿವು ನಮ್ಮದಾಯಿತು. ಕಾರವಾರ, ಹಳಿಯಾಳ, ಜೊಯಿಡಾ, ಕುಮಟಾ, ಹೊನ್ನಾವರ, ಅಂಕೋಲಾ ಹಾಗೂ ಭಟ್ಕಳ ತಾಲೂಕುಗಳ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿಯೂ ಕಲಾಜಾಥಾ ಕಾರ್ಯಕ್ರಮ ನಡೆಯಿತು. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಶನ್(**N R H M**)ನೀಡಿದ ಒಂದು ಕೋಟಿ ಹತ್ತು ಲಕ್ಷ ರೂಪಾಯಿಯ ಅನುದಾನದ ಪ್ರತಿ ಪೈಸೆಯನ್ನೂ ಸಾರ್ಥಕವಾಗಿ ಬಳಸಿಕೊಳ್ಳಲಾಯಿತು.

## ಸಂಜೀವಿನಿಯಾದ ಸಂಚಾರಿ ಆಸ್ಪತ್ರೆ

ಸಾರ್ವಜನಿಕ ಆರೋಗ್ಯ ಜಾಗೃತಿ ಅಭಿಯಾನ ಕೈಗೊಂಡಾಗ ಗಮನಕ್ಕೆ ಬಂದ ಮುಖ್ಯವಾದ ಸಂಗತಿಗಳಲ್ಲೊಂದು ಆರೋಗ್ಯ ಕೇಂದ್ರದಿಂದ ಹಳ್ಳಿಗಳಿಗಿರುವ ದೂರ. ಆಸ್ಪತ್ರೆಗೂ ಒಳ ಹಳ್ಳಿಗಳಿಗೂ ಇರುವ ದೂರ ಇಪ್ಪತ್ತು ಮೂವತ್ತು ಮೈಲಿಗಳವರೆಗೂ ಹೆಚ್ಚಿತ್ತು. ಅನಿರೀಕ್ಷಿತ ಸಂದರ್ಭಗಳಲ್ಲಿ ಉಳ್ಳವರಿಗೂ ಅಗತ್ಯ ಚಿಕಿತ್ಸೆ ಲಭ್ಯವಾಗುವುದು ಕಷ್ಟ. ಬಡವರ ಪರಿಸ್ಥಿತಿಯನ್ನಂತೂ ಹೇಳುವುದೇ ಬೇಡ. ಇಂತಹ ಪರಿಸ್ಥಿತಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಸಾಮಾನ್ಯವೇ ಆಗಿದ್ದರೂ ಪ್ರಯೋಗಾರ್ಥವಾಗಿ ನಾವು ಆಯ್ದುಕೊಂಡದ್ದು ಯಲ್ಲಾಪುರ ತಾಲೂಕನ್ನು. ಸಮಸ್ಯೆಯಲ್ಲಿದ್ದವರು ಆಸ್ಪತ್ರೆಗೆ ಬರುವುದು ಸಹಜ. ಆದರೆ ಆಸ್ಪತ್ರೆಯೇ ಸಮಸ್ಯೆ ಇರುವಲ್ಲಿಗೆ ಹೋಗುವಂತಾದರೆ ಎನ್ನುವ ವಿಚಾರ ಬಂತು. ಒಂದು ಸಂಚಾರಿ ಆಸ್ಪತ್ರೆಯನ್ನು ಆರಂಭಿಸುವ ಯೋಜನೆ ಮಾಡಲಾಯಿತು. ಆದರೆ ಅದು ಅಷ್ಟು ಸುಲಭವಾಗಿರಲಿಲ್ಲ. ವ್ಯವಸ್ಥಿತವಾದ ಒಂದು ವಾಹನ ಮತ್ತು ವಾಹನದಲ್ಲಿ ವೈದ್ಯರು/ದಾದಿಯರು ಬೇಕಾಗಿದ್ದರು.

ನನ್ನ ಆಲೋಚನೆಯನ್ನು ಕೆನರಾ ಬ್ಯಾಂಕಿನ ಆಗಿನ ಅಧ್ಯಕ್ಷರಾಗಿದ್ದ ಶ್ರೀ ಆರ್. ವಿ. ಶಾಸ್ತ್ರಿಯವರಲ್ಲಿ ಹಂಚಿಕೊಂಡಾಗ ಒಂದು ಟೆಂಪೊ ಟ್ರಾವೆಲರ್ ವಾಹನವನ್ನು ಪುಟ್ಟ ಆಸ್ಪತ್ರೆಯಾಗಿ (**Mobile dispensary**) ಪರಿವರ್ತಿಸಿ ಕದಂಬಕ್ಕೆ ದೇಣಿಗೆಯಾಗಿ ನೀಡಿದರು. ಶ್ರೀ ಸ್ವರ್ಣವಲ್ಲೀ ಸಂಸ್ಥಾನದ ಸಹಕಾರದಲ್ಲಿ, ಗ್ರಾಮಾಭ್ಯುದಯ ಸಂಸ್ಥೆಯ ಹೆಸರಿನಲ್ಲಿ ಅದು ಕಾರ್ಯರೂಪಕ್ಕೆ ಬಂತು.



2008ರಿಂದೀಚೆ ರಾಜ್ಯದ ತುಂಬ 108ರ ಸೈರನ್ ಶಬ್ದ ಕೇಳುತ್ತಿರುವುದರಿಂದ ಸಂಚಾರಿ ಆಸ್ಪತ್ರೆಯ ಕಲ್ಪನೆ ವಿಶೇಷವೆನಿಸುವುದಿಲ್ಲ. ಆದರೆ 2002ರಲ್ಲಿ ಆರಂಭವಾದ ನಮ್ಮ ಸಂಚಾರಿ ಆಸ್ಪತ್ರೆ ರುಗ್ಣ ವಾಹನವಾಗಿಲಿಲ್ಲ, ಆರೋಗ್ಯ ವಾಹಿನಿಯಾಯಿತು. ಬಡವರ ಪಾಲಿನ ಸಂಜೀವಿನಿಯಾಯಿತು. ಸಂಚಾರಿ ಆಸ್ಪತ್ರೆ ಊರಿಗೆ ಬರುತ್ತದೆ ಎಂದು ತಿಳಿದಾಗ ರಸ್ತೆಯ ಪಕ್ಕದಲ್ಲಿ ನಿಂತು ಔಷಧ ಪಡೆದವರು, ಆರೋಗ್ಯದ ಸಮಸ್ಯೆಗೆ ಉಪಚಾರದ ವಿವರ ತಿಳಿದವರು ಸಾವಿರಾರು ಜನ. ಇದೂ ಒಂದು ಆರೋಗ್ಯ ಜಾಗೃತಿಯ ಅಭಿಯಾನದ ಭಾಗವೇ ಆಯಿತು. ಯಲ್ಲಾಪುರದಿಂದ ನಲವತ್ತು ಕಿಲೋಮೀಟರ್ ದೂರದಲ್ಲಿರುವ ಮಲವಳ್ಳಿಯ ಕಾಡಿನಲ್ಲಿರುವ ಕುಣಬಿ ಜನಾಂಗದ ತಾಯಿಯ ಹೆರಿಗೆಯ ನೋವಿಗೆ ಸ್ಪಂದಿಸಿದ್ದು, ಬಳಗಾರದ ಬಡ ಕೂಲಿಕಾರನನ್ನು ನಡು ರಾತ್ರಿಯಲ್ಲಿ ಆಸ್ಪತ್ರೆಗೆ ಸಾಗಿಸಿದ್ದು ಒಂದೆರಡು ನೆನಪುಗಳು ಮಾತ್ರ. ಮುಂದೆ ಕರ್ನಾಟಕ ಸರಕಾರ 2009ರಲ್ಲಿ 108ರ ಸೇವೆಯನ್ನು ಆರಂಭಿಸಿದಾಗ ಕದಂಬದ ಯತ್ನ ಸಾರ್ವತ್ರಿಕವಾದ ಧನ್ಯತೆ ನಮ್ಮದಾಗಿತ್ತು. ನಂತರದ ದಿನಗಳಲ್ಲಿ ನಮ್ಮ ಸಂಚಾರದ ನಂತರ ಆ ವಾಹನವನ್ನು ಹೊನ್ನಾವರದ ಶಾಲೆಯೊಂದಕ್ಕೆ ದೇಣಿಗೆಯಾಗಿ ನೀಡಿದೆವು.

## ನಿಟ್ಟೆಯ ನಿರಂತರ ಸೇವೆ

ನಿಟ್ಟೆಯ ಜಸ್ಟಿಸ್ ಕೆ.ಎಸ್. ಹೆಗಡೆ ಚಾರಿಟೇಬಲ್ ಆಸ್ಪತ್ರೆ ಔದಾರ್ಯಕ್ಕೆ ಮತ್ತೊಂದು ಹೆಸರು. ಆರೋಗ್ಯ ಸೇವೆ ದಿನದಿಂದ ದಿನಕ್ಕೆ ದುಬಾರಿಯಾಗುತ್ತಿರುವಾಗ, ಸುಲಭದಲ್ಲಿ ಹಣಗಳಿಸುವ ವೃತ್ತಿಯಾಗಿ ವೈದ್ಯಕೀಯ ಬೆಳೆಯುತ್ತಿರುವಾಗ ನಮಗೆ ಸಿಕ್ಕ ಸೇವಾ ಮನೋಭಾವದ 'ಆರೋಗ್ಯ ಧಾಮ' ನಿಟ್ಟೆ ಆಸ್ಪತ್ರೆ. ಖರ್ಚು ಮಾಡುವ ಸಾಮರ್ಥ್ಯ ಉಳ್ಳವರಿಗೂ ಭರವಸೆಯ ಆರೋಗ್ಯ ಸೇವೆ ಬೇಕಾಗಿತ್ತು. ಆದರೆ, ಖರ್ಚಿನಲ್ಲಿ ಒಂದಷ್ಟು ಕಡಿಮೆಯಾಗಬಹುದೇ ಎನ್ನುವ ನಿರೀಕ್ಷೆ ಕೆಲವರದಾಗಿತ್ತು. ಖರ್ಚು ಮಾಡುವುದು ಸಾಧ್ಯವಿಲ್ಲ ಆದರೆ ಅನಾರೋಗ್ಯಕ್ಕೆ ಚಿಕಿತ್ಸೆ ಬೇಕು ಎಂಬ ಅಸಹಾಯಕತೆ ಬಡವರದಾಗಿತ್ತು. ಈ ಮೂರೂ ರೀತಿಯ ಅಪೇಕ್ಷೆಗಳಿಗೆ ಸ್ಪಂದಿಸಿ ಮಾನವೀಯ ಸೇವೆ ನೀಡಿದ್ದು ನಿಟ್ಟೆಯ ಜಸ್ಟಿಸ್ ಕೆ.ಎಸ್.ಹೆಗಡೆ ಚಾರಿಟೇಬಲ್ ಆಸ್ಪತ್ರೆ 'ಕ್ಷೇಮ'. 2002ರಿಂದ 2011ರವರೆಗೆ 4000ಕ್ಕೂ ಮಿಕ್ಕಿದ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಿದೆ. ಸಾವಿರಾರು ಅಸಹಾಯಕರಿಗೆ ನಿಃಶುಲ್ಕ ಸೇವೆ ನೀಡಿದೆ. ಈಗಲೂ ಈ ಸೇವೆ ಮುಂದುವರೆದಿದ್ದು ಪ್ರತಿನಿತ್ಯ ರಿಯಾಯಿತಿ ದರದ ಸೇವೆಗಾಗಿ ಹಲವಾರು ಜನ ಕದಂಬದಿಂದ ಪತ್ರ ತೆಗೆದುಕೊಂಡು ನಿಟ್ಟೆ ಆಸ್ಪತ್ರೆಗೆ ಹೋಗುತ್ತಾರೆ. ಕದಂಬದಿಂದ ಒಮ್ಮೆ ಪರಿಚಯಿಸಲ್ಪಟ್ಟವರು ಮುಂದೆ ಉಳಿದವರಿಗೆ ಅದನ್ನು ತಿಳಿಸುತ್ತ ಅದೊಂದು ಆರೋಗ್ಯ ಸೇವೆಯ ಆಂದೋಲನವೇ ಆಗಿದೆ.



ಯಲ್ಲಾಪುರದಲ್ಲಿ ಧರ್ಮಾರ್ಥ ಆಸ್ಪತ್ರೆ; 2002ರ ಡಿಸೆಂಬರ್ ತಿಂಗಳಲ್ಲಿ ಸ್ವರ್ಣವಲ್ಲಿಯ ಸುಧರ್ಮಾ ಸಭಾಭವನದಲ್ಲಿ ಏರ್ಪಡಿಸಿದ್ದ ಆರೋಗ್ಯ ಶಿಬಿರ ಅತ್ಯಂತ ಯಶಸ್ವಿಯಾದ ಶಿಬಿರ. ಅಲ್ಲಿ ಬಂದಿದ್ದ ಶ್ರೀ ಗಣೇಶ ಕಾರ್ಣಿಕರು ಕದಂಬದ ಬದ್ಧತೆ, ಸಾರ್ವಜನಿಕರ ಸ್ಪಂದನವನ್ನು ಕಂಡು ಧರ್ಮಾರ್ಥ ಆಸ್ಪತ್ರೆಯ ಕಲ್ಪನೆಯನ್ನು ಮುಂದಿಟ್ಟರು. ಯಲ್ಲಾಪುರದಲ್ಲಿ ಅದನ್ನು ಆರಂಭಿಸಿದೆವು. ತಜ್ಞ ವೈದ್ಯರು, ದಾದಿಯರನ್ನು ಪಡೆದ ಧರ್ಮಾರ್ಥ ಆಸ್ಪತ್ರೆ ಜನಮುಖಿಯಾಗಿ ಅತ್ಯಂತ ಪ್ರೀತಿಯ ಸೇವೆ ಸಲ್ಲಿಸಿತು. ಅದರ ನಿರ್ವಹಣಾ ವೆಚ್ಚವೆಲ್ಲವನ್ನೂ ಕೆ.ಎಸ್.ಹೆಗಡೆ ಆಸ್ಪತ್ರೆಯೇ ನೋಡಿಕೊಂಡಿತು. ಕದಂಬ ಸೇವಾ ಅನುಕೂಲಗಳನ್ನು ಕಲ್ಪಿಸಿತು.

ಮನುಷ್ಯ ಸೇವೆ ಮತ್ತು ಸಮಾಜ ಸಂಘಟನೆಗಳು ನಮ್ಮ ತಾಳ್ಮೆಯನ್ನು ಹೆಜ್ಜೆ ಹೆಜ್ಜೆಗೂ ಪರೀಕ್ಷಿಸುತ್ತವೆ. ಆದರೆ, ಅಲ್ಪ ಕಾಲದಲ್ಲಿಯೇ ಸಮಾಜದ ಅಶಕ್ತರಿಗೆ ನಿಸ್ವಾರ್ಥದ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿರುವುದು; ಸಮಾಜ ಸ್ವಾಸ್ಥ್ಯ ಮತ್ತು ವ್ಯಕ್ತಿ ವಿಕಸನದ ದೃಷ್ಟಿಯಿಂದ ಅದೊಂದು ಸಾರ್ಥಕವಾದ ಕೆಲಸ ಎಂದು ಭಾವಿಸುತ್ತೇನೆ.



## ಆರೋಗ್ಯ ಮಾಹಿತಿ ಶಿಬಿರಗಳು

ಕೆಲವು ಸಂಗತಿಗಳೇ ಹಾಗೆ ಮತ್ತೆ ಮತ್ತೆ ಹೇಳುತ್ತಿರಬೇಕು. ಆರೋಗ್ಯದ ಕುರಿತಾದ ಮಾಹಿತಿಯನ್ನೂ ಮತ್ತೆ ಮತ್ತೆ ಹೇಳುವ ಅಗತ್ಯವಿದೆ. ಮುಂಜಾನೆ ಹಲ್ಲು ತಿಕ್ಕುವ ವಿಧಾನದಿಂದಾರಂಭಿಸಿ ಊಟಕ್ಕೆ ಮೊದಲು ಕೈ ತೊಳೆಯುವ ಕ್ರಮದವರೆಗೆ ಎಲ್ಲವನ್ನೂ ಹೇಳುತ್ತಿರಬೇಕು. ವ್ಯಕ್ತಿಯ ಸತ್ವವನ್ನೇ ನಾಶ ಮಾಡುವ 'ಎಚ್‌ಐವಿ ಏಡ್ಸ್' ಕುರಿತು ಜಾಗೃತಿ ಮೂಡಿಸಲು ಜಾಥಾ ನಡೆಸಿದ್ದೇವೆ.

ಸಾಮಾನ್ಯರ ಆರೋಗ್ಯದ ಕಾಳಜಿಗಾಗಿರುವ ಸರಕಾರದ ಯೋಜನೆಗಳ ಕರಿತು ಭಾಷಣ, ಸಂವಾದ, ಕರಪತ್ರಗಳ ಮೂಲಕ ಜನರಿಗೆ ತಿಳಿಹೇಳಿದ್ದೇವೆ. ಆರೋಗ್ಯ ಆಹಾರಗಳ ಕುರಿತು ವಿಚಾರ ಸಂಕಿರಣ ಏರ್ಪಡಿಸಿ ತಜ್ಞರೊಡನೆ ಸಂವಾದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಬಹುತೇಕ ಆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

## ಶ್ರೀ ಶ್ರೀಗಳ ಸಹಯೋಗ

ಶ್ರೀ ಶ್ರೀ ರವಿಶಂಕರ ಗುರೂಜಿಯವರ ನೇತೃತ್ವದ ಆರ್ಟ್ ಆಫ್ ಲಿವಿಂಗ್ ಸಹಯೋಗದಲ್ಲಿ ಆರೋಗ್ಯಕ್ಕೆ ಸಹಕಾರಿಯಾದ ಯೋಗ ಶಿಬಿರ ನಡೆಸುವಲ್ಲಿ ಕದಂಬ ಪಾಲ್ಗೊಂಡಿತ್ತು. ಶಿರಸಿ ತಾಲೂಕು 'ನಕ್ಷೆ' ಗ್ರಾಮದ ಅಭಿವೃದ್ಧಿ ಯೋಜನೆಗೆ ಬೇಕಾದ ಸಮಗ್ರ ನಕ್ಷೆಯನ್ನು ಸಿದ್ಧಪಡಿಸಿದ ಅನುಭವವೂ ನಮಗಾಯಿತು. ನಬಾರ್ಡ್‌ನ ಸಹಯೋಗದಲ್ಲಿ ನಡೆಸಿದ ಸಮೀಕ್ಷೆ, ಸಿದ್ಧಪಡಿಸಿದ ವರದಿ ಇಂದು ಗ್ರಾಮವೊಂದರ ಅಧ್ಯಯನಕ್ಕೆ ಮಾದರಿಯಾಗಿದೆ ಎಂದರೆ ನಿಜಕ್ಕೂ ನಮಗೊಂದು ಹೆಮ್ಮೆ.





## ಆಹಾರದ ರುಚಿ–ಮದ್ದಿನ ಮಾಯೆ

ಅಂಗೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕಾಗಿ ಊರೆಲ್ಲ ಓಡಾಡಿದರು ಎನ್ನುವ ಗಾದೆಯಂತೆ ನಮ್ಮ ಆರೋಗ್ಯದ ಸಮಸ್ಯೆ ಇದೆ. ಹಸಿರಿನ ಚಪ್ಪರವೇ ಆದ ನಮ್ಮ ಜಿಲ್ಲೆಯಲ್ಲಿ ಕಾಡಿನ ನೂರು ತೆರನ ಸೊಪ್ಪು ಹೂವು ಹಣ್ಣುಗಳು ತರಕಾರಿಯಾಗಿ ಒದಗುತ್ತವೆ. ಅದನ್ನು ಬಳಸುವ ವಿಧಾನಗಳು ನಮ್ಮ ತಾಯಂದಿರಿಗೆ ಪರಿಚಿತ. ಆದರೆ ದಟ್ಟ ಕಾಡಿನ ಮಧ್ಯೆ ಬದುಕುತ್ತಿರುವ ವನವಾಸಿಗಳಾದ ಗೌಳಿಗರ ಹೆಣ್ಣುಮಕ್ಕಳನೇಕರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಹೆಚ್ಚಿನ ಮಕ್ಕಳಲ್ಲಿ ಅಪೌಷ್ಟಿಕತೆಯ ಲಕ್ಷಣ ಕಾಣುತ್ತಿದೆ. ಕಾರಣವನ್ನರಿಸಿದಾಗ ಆಹಾರ ಪದ್ಧತಿಯಲ್ಲಿ ಅರಿವಿಲ್ಲದೇ ಆದ ಬದಲಾವಣೆ ಗಮನಕ್ಕೆ ಬಂತು. ಕಾಡಿನ ಸೊಪ್ಪು ತರಕಾರಿಗಳ ಬಳಕೆ ಕಡಿಮೆಯಾಗಿದೆ. ಹೊಸ ಪೀಳಿಗೆಗೆ ವನಸ್ಪತಿಗಳ ಪರಿಚಯ ಕಡಿಮೆಯಾಗುತ್ತಿದೆ. ಮುಖ್ಯವಾದ ಸಮಸ್ಯೆ ಎಂದರೆ ಆಹಾರಕ್ಕೆ ಸತ್ವಕ್ಕಿಂತ ರುಚಿಯೇ ಪ್ರಮಾಣವಾದದ್ದು. ನೂರಾರು ಪಾನೀಯಗಳನ್ನು ಬಲ್ಲ ಹಳ್ಳಿಗರ ಅಡುಗೆ ಮನೆಯಲ್ಲಿ ಕೋಕೋ ಕೋಲಾ ಪ್ರವೇಶಮಾಡಿದೆ! ಪಡಿತರದ ಬಿಳಿ ಅಕ್ಕಿಯನ್ನು ಉಣ್ಣುತ್ತ ಬಂದಂತೆ ವನವಾಸಿಗಳಲ್ಲೂ ಸಕ್ಕರೆ ರೋಗ ಕಾಣಿಸಿಕೊಂಡಿದೆ! ಎಸಿಡಿಟಿ(ಆಮ್ಲೀಯತೆ) ಎಲ್ಲರನ್ನೂ ಕಾಡುತ್ತಿದೆ. ಶುಂಠಿ, ಕೊಡಸ, ಓಂಕಾಳು, ಜೀರಿಗೆಯ ಔಷಧದ ಬದಲು ಪೇಟೆಯ ಅಂಗಡಿಗಳಲ್ಲಿ ಸಿಗುವ ಮದ್ದುಗಳು ಮನೆ ಸೇರಿವೆ. ಔಷಧವೆಂದರೆ ಮದ್ದಲ್ಲ, ಸತ್ವಯುತವಾದ ಆಹಾರ. ಆಹಾರಗಳೆಲ್ಲ ಔಷಧವಾಗಲಿ ಎಂಬ ಮಂತ್ರದ ಮಹತ್ವವನ್ನು ತಿಳಿಸುವುದು ಹೇಗೆ? ಎಂಬ ಪ್ರಶ್ನೆ ನನ್ನನ್ನು ನಿತ್ಯ ಕಾಡುತ್ತದೆ.

# ವಿಘ್ನ ಸಂತೋಷಿಗಳಿಂದ ಬಂದ ಅಗ್ನಿದಿವ್ಯ

ಸಂಕಲ್ಪದಂತೆ ಹಲವು ಆಯಾಮಗಳಲ್ಲಿ ಸಾಮಾಜಿಕ ಸೇವೆಯ ಕಾರ್ಯ ನಿಯಮಿತವಾಗಿ ನಡೆಯುತ್ತಿದ್ದವು. ನಾವು ಮಾಡುತ್ತಿದ್ದೇವೆ ಎನ್ನುವ ರೀತಿಯ ಅಹಂಕಾರಕ್ಕಾಗಿ ಪ್ರಸಿದ್ಧಿಗೆ, ಪ್ರಚಾರಕ್ಕೆ ಮುಂದಾಗದೆ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಮಾಡುವ ಕೆಲಸದಲ್ಲಿ ಮಗ್ನರಾಗಿದ್ದೆವು. ಆಗುತ್ತಿದ್ದ ಪ್ರತಿ ಕೆಲಸದ ಫೋಟೊ, ಪತ್ರಿಕಾ ವರದಿ, ಫಲಾನುಭವಿಗಳ ಅಭಿಪ್ರಾಯ ಸಂಗ್ರದಂತಹ ಕ್ರಮವತ್ತಾದ ದಾಖಲೀಕರಣಕ್ಕೆ ಗಮನ ಕೊಟ್ಟಿರಲಿಲ್ಲ. ಅದರಲ್ಲಿ ನಮಗೆ ಅಷ್ಟೊಂದು ಆಸಕ್ತಿಯೂ ಇರಲಿಲ್ಲ. 'ಹಾಡು ಹಕ್ಕಿಗೆ ಬೇಕೆ ಬಿರುದು ಸಮ್ಮಾನ' ಎನ್ನುವ ಕವಿ ಕಾಣ್ಕೆಯಂತೆ ನಮ್ಮ ಸಾಮಾಜಿಕ ಕಾರ್ಯ ಸದ್ದಿಲ್ಲದೆ ನಡೆದಿತ್ತು. ಆದರೆ ಲೆಕ್ಕಾಚಾರ ಪಾರದರ್ಶಕವಾಗಿತ್ತು. ಆರ್ಥಿಕ ಪಾರದರ್ಶಕತೆ ಸಾಮಾಜಿಕ ಬದುಕಿನ ಪ್ರಾಥಮಿಕ ಅಗತ್ಯವೆನ್ನುವುದು ನಮ್ಮ ಬದ್ಧತೆ. ಈ ಸಂದರ್ಭದಲ್ಲಿ ಕದಂಬದ ಚಟುವಟಿಕೆಗಳ ಕುರಿತು ತನಿಖೆಯಾಗಬೇಕೆಂದು ಉತ್ತರಕನ್ನಡ ಜಿಲ್ಲಾಧಿಕಾರಿಗಳಿಂದ ಪತ್ರ ಬಂದಾಗ ನಮಗೆ ಆಶ್ಚರ್ಯ! ತನಿಖೆಯಾಗಬೇಕೆಂದರೆ ಕಾರಣ ಏನಿರಬಹುದು ಎನ್ನುವ ಕುತೂಹಲವೂ ಮನಸ್ಸಿನ ಮೂಲೆಯಲ್ಲಿ ಇಣುಕು ಹಾಕಿದರೂ, ಸರಕಾರ ತನಿಖೆಗೆ ಆದೇಶಿಸಿದಾಗ ಅದಕ್ಕೆ ಅನುಕೂಲ ಮಾಡಿಕೊಡುವುದು ನಮ್ಮ ಧರ್ಮ ಎಂದು ಭಾವಿಸಿದೆವು.



Government of Karnataka

**Ritesh Kumar Singh**, I.A.S.
Deputy Commissioner & District Magistrate
Uttara Kannada, Karwar - 581 301

ರಿತೇಶ ಕುಮಾರ ಸಿಂಗ್, ಭಾ.ಆ.ಸೇ.
ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು
ಉತ್ತರ ಕನ್ನಡ, ಕಾರವಾರ - 581 301

DCB/Miscl/2004-05

22 March 2005

CERTIFICATE

This is to certify that "Kadamba Charitable Foundation", Registered Office, Basavaraja Nilaya, Chowkimat, Sirsi, Uttara Kannada district, Karnataka is a Social and Charitable organization registered with the Sub-Registrar of Societies, Sirsi and the organization is working for the benefit of poor and the needy and is engaged in organizing self-help groups, running crèches, housing and other integrated programmes for rural development without any distinction of caste, creed and race.

(Ritesh Kumar Singh)
Deputy Commissioner,
Uttara Kannada, Karwar

ತನಿಖೆಯನ್ನು ಮಾಡಿದವರು ಶಿರಸಿಯಲ್ಲಿ ಸಹಾಯಕ ಕಮಿಶನರ್ ಆಗಿದ್ದ ಶ್ರೀ ನವೀನರಾಜ ಸಿಂಗ್ ಅವರು. ಅವರ ವರದಿಯನ್ನು ಆಧರಿಸಿ ಅಂತಿಮ ಪತ್ರವನ್ನು ನೀಡಿದವರು ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ರಿತೇಶಕುಮಾರ ಸಿಂಗ್ ಅವರು.

ನಂತರದ ದಿನಗಳಲ್ಲಿ ಸದರಿ ತನಿಖೆಗೆ ಕಾರಣವೇನಿತ್ತೆಂಬುದು ತಿಳಿದಾಗ ಮಾತ್ರ ನಿಜಕ್ಕೂ ಮನಸ್ಸಿಗೆ ತುಂಬ ನೋವಾಯಿತು. ಹೆಸರೇ ಇರದ ಅನಾಮಿಕ ಪತ್ರವೊಂದು ತನಿಖೆಗೆ ಕಾರಣವಾಗಿತ್ತು. "ಕದಂಬ ಒಂದು ಬೋಗಸ್ ಸಂಸ್ಥೆ, ಅದು ಅಧಿಕೃತವಲ್ಲ. ಕದಂಬ ಸಂಸ್ಥೆ ಯಾವ ಕೆಲಸವನ್ನೂ ಮಾಡದೆ ಸರಕಾರದಿಂದ ಹಣವನ್ನು ಪಡೆಯುತ್ತಿದೆ" ಎನ್ನುವುದು ತಳ್ಳಿ ಅರ್ಜಿಯ ಒಕ್ಕಣೆಯಾಗಿತ್ತು. ಹೀಗೆ ಅರ್ಜಿಯನ್ನು ಬರೆದವರು ಹಾಗೂ ತನಿಖೆಗೆ ಒತ್ತಡ ತಂದವರೂ ದೂರದವರೇನಲ್ಲ ಎಂಬುದು ನಂತರ ತಿಳಿಯಿತು. ಒಳ್ಳೆಯ ಕೆಲಸಕ್ಕೆ ವಿಘ್ನಗಳು ಹೆಚ್ಚು ಎನ್ನುವ ನಾಡ ಮಾತೊಂದಿದೆಯಲ್ಲ! ಮಾನವೀಯ ಸೇವೆಯಲ್ಲಿಯೂ ಪೂರ್ವಗ್ರಹ ಪೀಡಿತ ರಾಜಕೀಯ ಮಾಡುವವರ ಮಾನಸಿಕ ರೋಗದ ಬಗೆಗೆ ಅನುಕಂಪವನ್ನಲ್ಲದೆ ಮತ್ತೇನನ್ನು ಹೇಳಲು ಸಾಧ್ಯ?

# ರಾತ್ರಿಯನ್ನು ಬೆಳಗಿದ ಹಗಲಿನ ದೀಪ

ಅದು ಭಟ್ಕಳ ತಾಲೂಕಿನ ಹಾಡುವಳ್ಳಿ. 2012ರ ಅಗಸ್ಟ 5ನೇ ತಾರೀಖು, ಹಳ್ಳಿಗಳಿಗೆ ಸೋಲಾರ್ ಲ್ಯಾಂಟರ್ನ್ ಕೊಡುವ ಸಮಾರಂಭ. ಬೆಂಗಳೂರಿನ ಸುಪ್ರಾ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸಹಯೋಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮ. ಅಂದು ಮೊದಲೇ ನಿರ್ಣಯಿಸಿದಂತೆ ಹಾಡುವಳ್ಳಿ ಹಾಗೂ ಸುತ್ತಮುತ್ತಲಿನ ನೂರಾರು ಮನೆಗಳಿಗೆ ಸೋಲಾರ್ ಶಕ್ತಿಯ ಎಲ್ಈಡಿ ಲ್ಯಾಂಟರ್ನ್ ವಿತರಣೆಗೆ ವೇದಿಕೆ ಸಜ್ಜಾಗಿತ್ತು.

ಕಾರ್ಯಕ್ರಮಕ್ಕೆ ಹಿರಿಯರೊಡನೆ ಯುವಕರು ವಿದ್ಯಾರ್ಥಿಗಳೂ ಬಂದಿದ್ದರು. ಕಾರ್ಯಕ್ರಮ ಬಹುತೇಕ ಮುಗಿಯುತ್ತ ಬಂದಿತ್ತು. ಅಷ್ಟರಲ್ಲಿ ಇಬ್ಬರು ವಿದ್ಯಾರ್ಥಿನಿಯರು ಎದ್ದುನಿಂತು ಹೇಳಿದರು, "ನಮಗೆ ಇನ್ನೆರಡು ಲ್ಯಾಂಟರ್ನ್‌ಗಳು ಬೇಕು".
ನಾನು ಕೇಳಿದೆ ಏಕೆ? "ನಮ್ಮ ಗೆಳತಿಯರಿಗೆ ಇಬ್ಬರಿಗೆ ಲ್ಯಾಂಟರ್ನ್‌ಗಳು ಬೇಕಾಗಿವೆ. ಅವರಿಗೂ ಓದಲು ಬೆಳಕು ಬೇಕಲ್ಲ?"ಎಂದರು. ನಿಜಕ್ಕೂ ಅವರು ಕೊಟ್ಟ ಉತ್ತರ ನನಗೆ ಹಾಗೂ ಅಲ್ಲಿದ್ದವರಿಗೆಲ್ಲರಿಗೂ ಒಂದು ಹೊಸ ಪಾಠವಾಗಿತ್ತು. ಆ ಎರಡು ಮಕ್ಕಳ ಮಾತು ನನ್ನೊಳಗೆ ಒಂದು ಹೊಸ ಚಿಂತನೆಯನ್ನೇ ಹುಟ್ಟುಹಾಕಿತ್ತು. ನಾವು ಸರಕಾರಿ ದಾಖಲೆಗಳ ಆಧಾರದ ಮೇಲೆ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದರೂ ಅವರ ವಾಸ್ತವಿಕ ಕೋರಿಕೆ ಸತ್ಯವನ್ನು ತೆರೆದಿಟ್ಟಿತ್ತು.

ತಮ್ಮ ಸಹಪಾಠಿಗಳಿಗೂ ಬೆಳಕು ನೀಡಿ ಎಂದ ಆ ವಿದ್ಯಾರ್ಥಿನಿಯರ ಮಾತು ಈಗಲೂ ನನ್ನ ಕಿವಿಯಲ್ಲಿ ಹಾಗೆಯೇ ಅತ್ಯಂತ ಸ್ಪಷ್ಟವಾಗಿ ಮೊಳಗುತ್ತಿದೆ. ಅವರ ಅಂತರಂಗದಲ್ಲಿ ಸಹಪಾಠಿಗಳ ಕುರಿತಂತೆ ಅದೆಂತಹ ಪ್ರೀತಿಯ ದೀಪ ಬೆಳಗುತ್ತಿದೆ! ಇಂತಹ ಅನುಭವಗಳೇ ನನ್ನ ಸಾಮಾಜಿಕ ಜೀವನದ ಶ್ರದ್ಧಾ ದೀಪಕಗಳು ಎಂದರೆ ತಪ್ಪೇನಿಲ್ಲ. ಅವರನ್ನು ಕರೆದು ದೀಪಗಳನ್ನು ಕೊಡುವಾಗ ನಿಜಕ್ಕೂ ಹೃದಯ ತುಂಬಿ ಬಂದಿತ್ತು.
ಕಾರ್ಯಕ್ರಮ ಧನ್ಯ ಎನಿಸಿತ್ತು.

ವಿದ್ಯುತ್ ಸಂಪರ್ಕದಿಂದ ವಂಚಿತವಾದ ಹಳ್ಳಿಗಳ ರಾತ್ರಿಯ ಕತ್ತಲೆ ಕಥೆ, ಅದೊಂದು ವ್ಯಥೆ. ಸೊಪ್ಪಿನ ಹೊಸಳ್ಳಿ ಊರಿಗೆ ಭೇಟಿ ನೀಡಿದಾಗ ಅದೊಂದು ಅದ್ಭುತ ಅನುಭವ. ಅದೆಷ್ಟು ಎತ್ತರದ ಸ್ಥಳ! ದಾರಿಯೂ ಕಡಿದಾದದ್ದು. ಹೊಗೆಯುಗುಳುವ ಸೀಮೆ ಎಣ್ಣೆ ಚಿಮಣಿಯನ್ನು ಬಿಟ್ಟರೆ ಕತ್ತಲೆಗೆ ಬೇರೆ ಬೆಳಕೇ ಇಲ್ಲ. ಆ ಊರಿಗೆ ಸೋಲಾರ್ ಉಪಕರಣಗಳನ್ನು ಸಾಗಿಸಿ ದೀಪ ನೀಡುವುದೂ ಸಹ ಸಾಹಸದ ಕೆಲಸವೇ ಆಗಿತ್ತು. ಆದರೆ ಆ ದೀಪವನ್ನು ಅವರೆಲ್ಲ ಸ್ವಾಗತಿಸಿದ ರೀತಿ, ಬಳಸುವಾಗ ತೋರಿದ ಕಾಳಜಿ ನಮ್ಮನ್ನು ದಿಗಿಲುಗೊಳಿಸಿತ್ತು. ಅಷ್ಟೇ ಅಲ್ಲ ಕೆಲಸದ ಬಗೆಗಿನ ಸಂತೃಪ್ತಿ ನೂರ್ಮಡಿಯಾಗಿತ್ತು.



ಜೊಯಿಡಾ ತಾಲೂಕಿನ ಬರ್ಖೂರಕುಣಾಂಗ್ ಎನ್ನುವ ಊರು ಜೊಯಿಡಾದಿಂದ 86 ಕಿಲೋಮೀಟರ್ ದೂರದಲ್ಲಿದೆ. ಆ ಗ್ರಾಮದ ನೂರು ಕುಟುಂಬಗಳಿಗೆ ಸೋಲಾರ್ ಶಕ್ತಿಯ ಎಲ್‌ಈಡಿ ದೀಪ ನೀಡಿದೆವು. ಹಗಲೆಂದರೆ ಬೆಳಕು ರಾತ್ರಿಯೆಂದರೆ ಕತ್ತಲು ಎಂದುಕೊಂಡಿದ್ದವರಿಗೆ ಹೊಗೆಯಿಲ್ಲದ, ಖರ್ಚಿಲ್ಲದ ಶುದ್ಧವಾದ ಬೆಳಕು ಸಿಕ್ಕಾಗ ತುಂಬ ಸಂತೋಷಪಟ್ಟರು. ಇಂತಹ 560 ಮನೆಗಳಿಗೆ ಕದಂಬದಿಂದ ಸೋಲಾರ್ ದೀಪ ತಲುಪಿಸಿದೆವು. ಅವರೆಲ್ಲರ ರಾತ್ರಿಯನ್ನು ಬೆಳಗಲು ನಾವು ಮೊರೆಹೋದದ್ದು ಹಗಲಿನ ದೀಪವಾದ ಸೂರ್ಯನಿಗೆ! ಸರಳ ತಂತ್ರಜ್ಞಾನ, ಸುಲಭ ನಿರ್ವಹಣೆ, ಶುದ್ಧವಾದ ಬೆಳಕು, ಅಪಾಯರಹಿತ ಸ್ವತಂತ್ರ ವ್ಯವಸ್ಥೆ. ಮುಗಿಯಲಾರದ ಶಕ್ತಿ ಮೂಲವಾದ ಸೂರ್ಯನನ್ನು ಆಧರಿಸಿದ ಸಾಧನವಾದ್ದರಿಂದ ಸುಸ್ಥಿತರವಾದ ಬೆಳಕು. ನಿತ್ಯ ಬಳಕೆಯ ಸಾಧನದೊಂದಿಗೆ ಅದರ ತಂತ್ರಜ್ಞಾನದ ತಿಳುವಳಿಕೆಯನ್ನೂ ನೀಡಿದ
ಸಾರ್ಥಕತೆ ಕದಂಬಕ್ಕೆ.

ಶ್ರೀ ನರೇಂದ್ರ ಮೋದಿಯವರ ಸರಕಾರ ದೇಶದ ಎಲ್ಲ ಊರುಗಳಿಗೂ ವಿದ್ಯುತ್ತನ್ನು ತಲುಪಿಸುವ ನಿರ್ಧಾರ ಕೈಗೊಂಡು ಅದನ್ನು ಸಾಧಿಸಿದೆ. ಪ್ರತಿ ಮನೆಯಲ್ಲೂ ವಿದ್ಯುದ್ದೀಪ ಬೆಳಗಿಸುವ ಹಂಬಲ ಮೋದಿಯವರ ಸರಕಾರಕ್ಕೆ. ಎಲ್ಲರ ಮನೆಗಳಿಗೂ ವಿದ್ಯುದ್ದೀಪ ತಲುಪಿದಾಗ ಸೋಲಾರ್ ದೀಪದ ಅಗತ್ಯ ಬೀಳಲಿಕ್ಕಿಲ್ಲ. ಆದರದು 2012ರಿಂದ ಆರೇಳು ವರ್ಷ ವಿದ್ಯಾರ್ಥಿಗಳ ಪುಸ್ತಕದ ಮೇಲೆ ಚೆಲ್ಲಿದ ಬೆಳಕು, ತಾಯಂದಿರ ಅಡುಗೆ ಮನೆಯಲ್ಲಿ ಹೊಗೆಯಿಲ್ಲದ ದೀಪವಾದದ್ದರ ಮಹತ್ವ ಕಡಿಮೆಯಾಗುವುದಿಲ್ಲ. ಹೊರಗಿನ ವಿದ್ಯುತ್‌ನೊಂದಿಗೆ ಸ್ವತಂತ್ರ ಬೆಳಕಾಗಿ ಮನೆಯಲ್ಲಿರುತ್ತದೆ.

## ಸ್ವ ಸಹಾಯದ ಸ್ವಾವಲಂಬನ

ಪ್ರಗತಿಯ ಮೊದಲ ಹೆಜ್ಜೆಯೇ ಸ್ವಾವಲಂಬನೆ. ಈ ವಿಷಯದಲ್ಲಿ ಕದಂಬದ ಅರಿವು ನಿಚ್ಚಳವಾದದ್ದು. ಬೇರೆಯವರಿಂದಲೇ ನಮ್ಮ ಉದ್ಧಾರ ಎಂದಂದುಕೊಂಡವರು ಯಾವತ್ತೂ ಉದ್ಧಾರವಾಗುವುದಿಲ್ಲ. ಆದರೆ ಪ್ರಯತ್ನಶೀಲರಾದವರು, ಪ್ರಗತಿಯ ಹಾದಿ ಅರ್ಥವಾಗದವರಿಗೆ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಮಾರ್ಗದರ್ಶನ ನೀಡುವ ಕೆಲಸ ಮಾಡಬೇಕಾಗುತ್ತದೆ. ಆ ಕೆಲಸದಲ್ಲಿ ನಮಗೆ ಪರಿಣಮಕಾರಿ ಸಾಧನವಾಗಿ ಒದಗಿದ್ದು
'ಸ್ವ ಸಹಾಯ ಸಂಘಗಳು'.

ಮಾಡುವುದು ಕೂಲಿ, ಅದರಲ್ಲೂ ಹೆಣ್ಣುಮಕ್ಕಳಿಗೆ ಕಡಿಮೆ ಸಂಬಳ, ಇಂತಹ ಅನೇಕ ಕೀಳರಿಮೆಗಳಿಂದ ಮುಕ್ತವಾಗಿ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡವರು ಮಹಿಳೆಯರು. ಅವರ ಬದುಕಿನಲ್ಲಾದ ಬದಲಾವಣೆಗಳನ್ನು ಕಂಡಾಗ ಸ್ವಸಹಾಯ ಸಂಘ ಎನ್ನುವ ಶಬ್ದ ಮಂತ್ರದಂತೆ ಭಾಸವಾಗುತ್ತದೆ. 2002ರಲ್ಲಿ ಆರಂಭವಾದ ಕದಂಬದ ಈ ಪ್ರಯತ್ನ ಈಗ ಸ್ವತಂತ್ರವಾಗಿ ಮುಂದುವರಿದಿದೆ. ಅದರ ನಿಜವಾದ ಯಶಸ್ಸು ಕೂಡ ಅದೇ ಆಗಿದೆ.

## ಸಣ್ಣದು ಸುಂದರ

2003ರ ಸಂದರ್ಭ: ಸಂಗವ್ವಳ ದಿನದ ದುಡಿಮೆ ಕೇವಲ ಹದಿನೈದು ರೂಪಾಯಿ. ಮನೆಯಲ್ಲಿ ಮೂವರು ಸಣ್ಣ ಮಕ್ಕಳು. ಗಂಡನ ದುಡಿಮೆ ದಿನಕ್ಕೆ ಇಪ್ಪತ್ತರಿಂದ ಮೂವತ್ತು ರೂಪಾಯಿಯವರೆಗಿದ್ದರೂ ಪ್ರತಿದಿನ ದುಡಿಮೆ ಸಿಗುತ್ತದೆ ಎನ್ನುವಂತಿಲ್ಲ. ಅವನ ದುಡಿಮೆಯಲ್ಲಿ ಕುಡಿತಕ್ಕಷ್ಟು ಕಳೆಯುವುದರಿಂದ ಮನೆಯ ಖರ್ಚಿಗೆ ಬಹಳ ನಿರೀಕ್ಷೆ ಮಾಡುವಂತಿಲ್ಲ. ಮುರುಕು ಗುಡಿಸಲು, ಹರುಕು ಬಟ್ಟೆ. ವರ್ಷದಲ್ಲಿ ಒಂದೆರಡು ಬಾರಿ ಹಬ್ಬದ ಸಂದರ್ಭದಲ್ಲಿ ಸಿಹಿಯುಂಡರೆ ಅದೇ ದೊಡ್ಡದು. ಇದಕ್ಕಿಂತ ಹೆಚ್ಚು ನಮಗೆ ಸಾಧ್ಯವಿಲ್ಲ ಎಂಬ ಕೊರಗು ಸಂಗವ್ವಳಿಗೆ. ಸ್ವಸಹಾಯ ಸಂಘಕ್ಕೆ ಸೇರಿಕೊ ಎಂದು ಅಕ್ಕ ಪಕ್ಕದ ಮಹಿಳೆಯರು ಹೇಳಿದಾಗ 'ನಾನು ದುಡಿದು ಉಳಿಸುವುದೆಲ್ಲಿ' ಎಂದು ಅಸಹಾಯಕ ನಗು ನಕ್ಕಿದ್ದಳು. ಆದರೆ ಸಂಗಡಿಗರ ಒತ್ತಾಯಕ್ಕೆ ಸಂಘದಲ್ಲಿ ಸೇರಿಕೊಂಡು ವಾರದ ಕೊನೆಯಲ್ಲಿ ಹತ್ತು ರೂಪಾಯಿ ಉಳಿಸತೊಡಗಿದಳು. ವರ್ಷದ ಕೊನೆಯಲ್ಲಿ ಅವಳ ಉಳಿತಾಯ ಬಡ್ಡಿ ಸೇರಿ ಆರು ನೂರು ರೂಪಾಯಿಯಷ್ಟು. ಇಷ್ಟು ದೊಡ್ಡ ಮೊತ್ತವನ್ನು ಅವಳ ಬದುಕಿನಲ್ಲಿ ಮೊದಲ ಬಾರಿ ಎಣಿಸಿದ್ದಳು. ಆ ಹಣದಲ್ಲಿ ಒಂದು ಬಂಗಾರದ ಮೂಗುತಿಯನ್ನು ಮಾಡಿಸಿಕೊಳ್ಳಬೇಕೆಂದು ಕನಸು ಕಂಡಳು. ಆ ಕನಸನ್ನು ಹತ್ತಿರದ ಗೆಳತಿಯರಲ್ಲಿ ಹಂಚಿಕೊಂಡಳು. ಒಂದೇ ವರ್ಷದ ಉಳಿತಾಯದಲ್ಲಿ ಆಪದ್ಧನವೊಂದು ಅವಳಿಗೆ ದಕ್ಕಿತ್ತು. ಉಳಿತಾಯ ಸಣ್ಣದಾದರೂ ಅದು ನೀಡುವ ಕನಸು ದೊಡ್ಡದು. ಸಣ್ಣದು ಸುಂದರ ಎಂಬ ನುಡಿಯ ಸಾಕ್ಷಾತ್ಕಾರವಾಗುವುದು ಸ್ವಸಹಾಯ ಸಂಘಗಳ ಸಾಧನೆಯನ್ನು ನೋಡಿದಾಗ.

# ಸಂಗ್ರಹವಲ್ಲ ಸಾಮಾಜಿಕ ಬದುಕು

ಸ್ವಸಹಾಯ ಸಂಘವೆಂದರೆ ಮಹಿಳೆಯರಿಗೆ ಸಾಮಾಜಿಕ ಬದುಕನ್ನು ನೀಡಿದ ವೇದಿಕೆಯಾಯಿತು. ಮನೆಯಿಂದಾಚೆ ಸಾಮಾಜಿಕ ಬದುಕನ್ನೇ ಕಾಣದ ಮಹಿಳೆಯರಿಗೆ ಸ್ವಸಹಾಯ ಸಂಘಕ್ಕೆ ಬಂದುದರಿಂದ ವಾರಕ್ಕೊಮ್ಮೆ ಉಳಿದ ಮಹಿಳೆಯರೊಡನೆ ಹರಟೆಗೆ ಅವಕಾಶವಾಯಿತು. ಲೆಕ್ಕ ಪತ್ರ ಬರೆಯುವುದು, ಬ್ಯಾಂಕಿಗೆ ಹೋಗಿ ವ್ಯವಹಾರ ಮಾಡುವುದು ರೂಢಿಯಾಯಿತು. ತಿಂಗಳಿಗೊಮ್ಮೆ ಸೇರುವ ಹಲವು ಸಂಘಗಳ ಒಕ್ಕೂಟದ ಮೀಟಿಂಗಿನಲ್ಲಿ ಎದ್ದು ನಿಂತು ಮಾತಾಡುವ ಧೈರ್ಯ ಬಂತು. ಸಮಾಜದ ಎಲ್ಲರೊಡನೆ ಮಾತಾಡುವ ಅವಕಾಶ ದೊರಕಿತು. ವೈಯಕ್ತಿಕ ಸಮಸ್ಯೆಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯ, ತಜ್ಞರೊಡನೆ ಹಂಚಿಕೊಳ್ಳುವ ವಿಶ್ವಾಸ ಬಂತು. ಇಷ್ಟು ದಿನ ಮನೆಯ ಹೊರಗಿನ ಆಗುಹೋಗುಗಳು ತಮಗೆ ಸಂಬಂಧವೇ ಇಲ್ಲ ಎನ್ನುವಂತಿದ್ದವರು ಈಗ ಊರಿನ ಚಟುವಟಿಕೆಗಳಲ್ಲಿ ಜವಾಬ್ದಾರಿಯುತ ಬಾಧ್ಯಸ್ತರಾದರು. ನಮ್ಮೂರಿಗೆ ಹೆಂಡದಂಗಡಿ ಬೇಡ ಎಂದು ಹೇಳುವಷ್ಟು ಪ್ರಜ್ಞಾವಂತರಾದರು. ಬನವಾಸಿಯ ಸಾಮಾಜಿಕ ಕಾರ್ಯಕರ್ತರಾದ ಶ್ರೀ ರುದ್ರಗೌಡರ ನೇತೃತ್ವದಲ್ಲಿ ಬನವಾಸಿಯ ಸುತ್ತ ನಡೆದ 'ಕದಂಬ ಸ್ವಸಹಾಯ ಸಂಘಗಳ' ಕೆಲಸ ಮಹಿಳಾ ಸಬಲೀಕರಣದ ಅಭಿಯಾನವೇ ಆಯಿತು.



"ಬನವಾಸಿ ಸುತ್ತಮುತ್ತ 79 ಸ್ವಸಹಾಯ ಸಂಘ ಮಾಡಿದರು. ಪ್ರತಿ ಸಂಘದ ಇಬ್ಬರು ಸದಸ್ಯರನ್ನು ಸೇರಿಸಿ ಮಯೂರ ಒಕ್ಕೂಟ ಸ್ಥಾಪಿಸಿದರು. ಪ್ರತಿ ತಿಂಗಳು ಮೀಟಿಂಗ್, ಪ್ರತಿ ವರ್ಷ ವಾರ್ಷಿಕೋತ್ಸವ, ರಕ್ಷಾ ಬಂಧನ ಕಾರ್ಯಕ್ರಮ, ಅರಿಷಿಣ ಕುಂಕುಮ ಕಾರ್ಯಕ್ರಮ, ಶ್ರೀಕೃಷ್ಣ ಜನ್ಮಾಷ್ಟಮಿ ಹೀಗೆ ಅನೇಕ ಕಾರ್ಯಕ್ರಮಗಳನ್ನ ಉತ್ಸವದಂತೆ ಆಚರಿಸುತ್ತಿದ್ದರು. ಪ್ರತಿ ಸಂಘದಿಂದ ವರ್ಷಕ್ಕೊಂದು ಪ್ರವಾಸ. ಧಾರ್ಮಿಕ ಕ್ಷೇತ್ರಗಳು, ಕೃಷಿ ಸಾಧಕರ ಭೇಟಿ, ಪ್ರಕೃತಿ ರಮ್ಯ ಸ್ಥಳಗಳು ಹೀಗೆ ಪ್ರತಿ ಪ್ರವಾಸವೂ ಶ್ರದ್ಧೆ ಶಿಕ್ಷಣಗಳ ಸಂಯೋಜನೆಯಾಗಿತ್ತು. ಸಾಮಾಜಿಕ ಸಾಮರಸ್ಯಕ್ಕೆ ಈ ಅಭಿಯಾನದ ಕೊಡುಗೆ ಬಹಳ ದೊಡ್ಡದು. ಹಿಂದೂ ಮಹಿಳೆಯರ ಸಂಘಗಳನ್ನು ನೋಡಿ ಮುಸ್ಲಿಂ ಕೇರಿಗಳಲ್ಲೂ ಸ್ವಸಹಾಯ ಸಂಘಗಳು ಆರಂಭವಾದವು. ಮಾರಿಕಾಂಬಾ ಸ್ವಸಹಾಯ ಸಂಘ, ಬಸವೇಶ್ವರ ಸ್ವಸಹಾಯ ಸಂಘಗಳಂತೆ ಮುಬಾರಕ್ ಸ್ವಸಹಾಯ ಸಂಘ, ಹೀನಾ ಸ್ವಸಹಾಯ ಸಂಘಗಳೂ ಆರಂಭವಾದವು. ಮಯೂರ ಒಕ್ಕೂಟದಲ್ಲಿ ಸೇರಿದಾಗ ಒದಗಿದ ಸ್ನೇಹ ಮುಂದೆ ಪ್ರತಿ ಉತ್ಸವದಲ್ಲಿಯೂ ವಿಸ್ತಾರವಾಯಿತು. ಪರಸ್ಪರ ಸಾಮರಸ್ಯಕ್ಕೆ ಹಾದಿಯಾಯಿತು. ಮುಸ್ಲಿಂ ಮಹಿಳೆಯರೂ ಹಿಂದೂ ಮಹಿಳೆಯರಂತೆ ಸಾಮಾಜಿಕ ಅವಕಾಶಗಳನ್ನೂ, ಸ್ವಾತಂತ್ರ್ಯವನ್ನೂ ಅನುಭವಿಸಿದ್ದು ಅದೊಂದು ಅಪೂರ್ವವಾಗಿತ್ತು. ಮನೆಯ ಗಂಡಸರ, ಮಸೀದಿಯ ಮುಖಂಡರ ಮಾತನ್ನು ಮೀರಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಸಭಾ ಕಾರ್ಯಕ್ರಮಗಳನ್ನು ನಿರ್ವಹಿಸಿದರು. ಮಹಿಳಾ ಸಬಲೀಕರಣಕ್ಕೆ ಧೈರ್ಯದ ಮಾದರಿಯಾದರು." ಇದು ಬನವಾಸಿಯ ಶ್ರೀ ರುದ್ರಗೌಡರ ಮಾತು.



ಬನವಾಸಿಯ 79 ಸ್ವಸಹಾಯ ಸಂಘಗಳ ಒಟ್ಟೂ ಸದಸ್ಯರ ಸಂಖ್ಯೆ 1550. 11ವರ್ಷಗಳ ನಂತರ ಎಲ್ಲರ ಸಂಗ್ರಹವನ್ನು ಎಣಿಸಿದಾಗ ಒಬ್ಬೊಬ್ಬರಿಗೆ ಬಂದ ಬಡ್ಡಿಯೇ ಎಂಟು ಸಾವಿರ ರೂಪಾಯಿ. ಅಂದರೆ ಒಟ್ಟೂ ಮೊತ್ತ ರೂ.1ಕೋಟಿ 24 ಲಕ್ಷ. ವಾರಕ್ಕೆ ಹತ್ತು ರೂಪಾಯಿ ಉಳಿಸಿ ಗಳಿಸಿದ ಈ ಮೊತ್ತವನ್ನು ನೋಡಿದಾಗ ಹನಿ ಹನಿ ಕೂಡಿದರೆ ಹಳ್ಳ ಎನ್ನುವ ಅನುಭವದ ಮಾತು ಸತ್ಯ ಎನಿಸುವುದಿಲ್ಲವೆ! ಇಂತಹ ವಿಸ್ಮಯಗಳ ಸಾಲೇ ಇವೆ ಸ್ವಸಹಾಯ ಸಂಘಗಳ ಸಾಧನೆಗಳಲ್ಲಿ.



ಬನವಾಸಿಯ ಹತ್ತಿರದ ಅಜ್ಜರಣಿ, ಕೃಷಿಕರ ಊರು. ಸಹಜವಾಗಿಯೇ ಪುರುಷ ಪ್ರಧಾನ ವ್ಯವಸ್ಥೆ. ಮಧ್ಯಮ ವರ್ಗದ ಕುಟುಂಬವಿದ್ದರೂ ಮಹಿಳೆಯರಿಗೇಕೆ ಊರ ಉಸಾಬರಿ ಎನ್ನುವ ಧೋರಣೆ. ಆ ಊರಿನಲ್ಲಿ ಮಹಿಳೆಯರು ಸ್ವಸಹಾಯ ಸಂಘ ಆರಂಭಿಸಬೇಕೆಂದಾಗ ಅವೆಲ್ಲ ಯಾಕೆ ಬೇಕು ಎಂದು ಊರ ಗಂಡಸರು ಗದರಿಸಿದರು. ಹೇಗೆ ಸಂಘ ಕಟ್ಟುತ್ತೀರಿ ನೋಡುತ್ತೇವೆ ಎಂದು ಹೆದರಿಸಿದರು. ಆದರೂ ಅಜ್ಜರಣಿಯಲ್ಲಿ 'ಅನ್ನಪೂರ್ಣೇಶ್ವರಿ' ಮತ್ತು 'ಆದಿಶಕ್ತಿ' ಸ್ವಸಹಾಯ ಸಂಘಗಳು ಆರಂಭವಾದವು. ಉಳಿತಾಯದ ಸಂಗಡ ಬ್ಯಾಂಕ್ ಸಾಲವನ್ನೂ ಪಡೆದು ಮನೆಮನೆಯಲ್ಲಿ ಎಮ್ಮೆ ದನ ಕಟ್ಟಿದರು. ಹಾಲು ಹೈನಿನ ಉದ್ಯೋಗದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದರು. ಮಹಿಳಾ ಸಬಲೀಕರಣದಲ್ಲಿ ಅಜ್ಜರಣಿಯ ಮಹಿಳೆಯರು ಇತಿಹಾಸವನ್ನೇ ನಿರ್ಮಿಸಿದರು. ಮನೆಯಿಂದ ಹೊರಬರುವುದಕ್ಕೆ ಅಂಜುತ್ತಿದ್ದವರು ಊರಿನ ಪ್ರತಿ ವ್ಯವಹಾರದಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸತೊಡಗಿದರು. ಅನ್ನಪೂರ್ಣೇಶ್ವರಿ ಸ್ವಸಹಾಯ ಸಂಘದ ಶ್ರೀಮತಿ ವೀಣಾ ಸತೀಶ ಗೌಡರು ಚುನಾವಣೆಗೆ ನಿಂತು ಮಂಡಲ ಪಂಚಾಯತದ ಅಧ್ಯಕ್ಷರಾದರು. ಸಂಘದ ಹದಿನೈದು ಸದಸ್ಯರು ಸೇರಿ ಊರಿನಲ್ಲಿ ಹಿಟ್ಟಿನ ಗಿರಣಿ ಸ್ಥಾಪಿಸಿದರು. ಕಳೆ ಕತ್ತರಿಸುವ ಮಶಿನ್ ತಂದರು. ಎರೆಹುಳು ಗೊಬ್ಬರ ತಯಾರಿಕೆ ತರಬೇತಿ ಪಡೆದು ಕೃಷಿಯ ಗುಣಮಟ್ಟವನ್ನು ಹೆಚ್ಚಿಸಿದರು. ಅವರು ಬರೆದಿಟ್ಟ ಠರಾವು, ಲೆಕ್ಕಪತ್ರ ಮಾರ್ಗದರ್ಶಕವಾಗಿವೆ.

ಆದಿಶಕ್ತಿ ಸ್ವಸಹಾಯ ಸಂಘದ ಶ್ರೀಮತಿ ಸುಜಾತಾ ಅಶೋಕ ಗೌಡ ಹೇಳುತ್ತಾರೆ "ನಮ್ಮೂರಿನಲ್ಲಿ ನಡೆಯುವ ಎಲ್ಲ ಸಾರ್ವಜನಿಕ ಕಾರ್ಯಕ್ರಮಗಳನ್ನು ನಾವೇ ನಿರ್ವಹಿಸುತ್ತೇವೆ. ಅಂದರೆ ಇವೆಂಟ್ ಮೆನೇಜ್‌ಮೆಂಟ್ ಮಾಡುತ್ತೇವೆ. ನಮ್ಮ ಸದಸ್ಯರ ಮನೆಯ ಮಕ್ಕಳ ವಿದ್ಯಾಭ್ಯಾಸ, ಮದುವೆ, ಆರೋಗ್ಯದ ಸಮಸ್ಯೆ ಏನೇ ಬಂದರೂ ನಾವೆಲ್ಲ ಒಟ್ಟಾಗಿ ಅದನ್ನು ನಿರ್ವಹಿಸುತ್ತೇವೆ. ಹದಿನಾರು ವರ್ಷಗಳಿಂದ ನಡೆದು ಬಂದಿರುವ ನಮ್ಮ ಸಂಘದ ಪ್ರತಿ ಸದಸ್ಯರ ಸಂಗ್ರಹ ರೂ. 15,000/– ಆಗಿದೆ. ಮೊತ್ತ ಸಣ್ಣದೆನಿಸಿದರೂ ನಾವು ಸ್ವತಂತ್ರವಾಗಿ ವ್ಯವಹಾರ ಮಾಡುತ್ತಿದ್ದೇವೆ."

## ಬೈಗುಳ ಸಹಿಸದ ಸ್ವಾಭಿಮಾನ

ಬನವಾಸಿಯ ಉರ್ದು ಶಾಲೆಯ, ಶಾಲಾ ಅಭಿವೃದ್ಧಿ ಸಮಿತಿ (ಎಸ್‌ಡಿಎಂಸಿ)ಯಲ್ಲಿ ಸ್ವಸಹಾಯ ಸಂಘದ ಸದಸ್ಯರೂ ಇದ್ದರು. ಮಹಿಳೆಯರು ಸಾರ್ವಜನಿಕವಾಗಿ ಮಾತಾಡುವುದನ್ನೇ ಇಷ್ಟಪಡದವರೂ ಶಾಲಾಭಿವೃದ್ಧಿ ಸಮಿತಿಯ ಮೀಟಿಂಗಿಗೆ ಬರುತ್ತಿದ್ದರು. ಅದರಲ್ಲೂ ಒಮ್ಮೆ ಗ್ರಾಮ ಪಂಚಾಯತದ ಉಪಾಧ್ಯಕ್ಷರು ಮಾತನಾಡುತ್ತ ಅವಾಚ್ಯವಾಗಿ ಮಹಿಳಾ ಸದಸ್ಯರನ್ನು ಬೈದರು. ಸ್ವಸಹಾಯ ಸಂಘಗಳಿಗೆ ಹೋಗಿ ಮುಸ್ಲಿಂ ಹೆಣ್ಣುಮಕ್ಕಳು ನೀತಿಗೆಟ್ಟರೆಂದು ನಿಂದಿಸಿದರು. ಕೇಳಿದ ಹೆಣ್ಣುಮಕ್ಕಳು ಸುಮ್ಮನೆ ಕೂಡಲಿಲ್ಲ. ಬೈದವನ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರಿತ್ತರು. ಬೈದ ವ್ಯಕ್ತಿಯ ಬಂಧನವಾಯಿತು. ಜಾಮೀನಿನ ಮೇಲೆ ಬಿಡುಗಡೆಯಾಗಬೇಕಾಗಿ ಬಂತು. ಮುಂದೆ ಆತ ಕ್ಷಮೆ ಕೇಳಿದ ಮೇಲೆ ಪ್ರಕರಣ ಮುಗಿಯಿತು. ಇದು ನಿಜವಾದ ಮಹಿಳಾ ಸಬಲೀಕರಣ. ಇದು ಸಾಧ್ಯವಾದದ್ದು ಕದಂಬ ಸ್ವಸಹಾಯ ಸಂಘದಿಂದ.

ಭಟ್ಕಳ ತಾಲೂಕು ಬಸ್ತಿಯಲ್ಲಿ ಹೆಣ್ಣುಮಕ್ಕಳ ಸ್ವಸಹಾಯ ಸಂಘವಿದೆ. ಹತ್ತು ಹೆಣ್ಣಮಕ್ಕಳು ಕಟ್ಟಿಕೊಂಡ ಸಂಘ. ಚಾಪೆ ನೇಯುವವರು, ಬಟ್ಟೆ ಅಂಗಡಿ ಇಟ್ಟವರು, ಅಡುಗೆ ತಯಾರಿಸುವವರು ಹೀಗೆ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಕೊಂಡವರೇ ಇದ್ದಾರೆ. ಪ್ರತಿಯೊಬ್ಬರ ಉಳಿತಾಯ 25ರಿಂದ 30 ಸಾವಿರ ರೂಪಾಯಿ. ಸಂಘದ ವರ್ಷದ ವ್ಯವಹಾರ 25ರಿಂದ 30 ಲಕ್ಷ ರೂಪಾಯಿ. ಕದಂಬದಿಂದ ಆರಂಭಗೊಂಡ ಸ್ವಸಹಾಯ ಸಂಘಗಳು ಸಾವಿರದೈನೂರು. ಅವುಗಳ ಒಟ್ಟೂ ಮೊತ್ತ ಅದೆಷ್ಟೋ ಕೋಟಿ ರೂಪಾಯಿಗಳು. ದಣಿವರಿಯದೆ ದುಡಿಯುವವರಿಗೆ ಉಳಿಸುವ ವಿಧಾನವನ್ನು ಒಮ್ಮೆ ಕಲಿಸಿದರೆ ಮುಂದೆ ಅವರೇ ಸಮಾಜಕ್ಕೆ ಪಾಠ ಹೇಳುತ್ತಾರೆ. ದುಡ್ಡಿನ ಮಹತ್ವ ದುಡಿದವರಿಗೇ ಗೊತ್ತು.



# ಕೈ ಹಿಡಿದ ಕೌಶಲ್ಯ

**"ಯೋಗಃ ಕರ್ಮಸು ಕೌಶಲಂ"** ಕೌಶಲ್ಯಪೂರ್ಣ ಕಾಯಕವೇ ಯೋಗ ಎನಿಸಿಕೊಳ್ಳುತ್ತದೆ. ಇದು ನಮ್ಮ ಪರಂಪರೆಯ ಹಿರಿಯರ ಅನುಭವದ ಮಾತು. ದುಡಿಯುವ ಪ್ರತಿಯೊಬ್ಬರಿಗೂ ವೃತ್ತಿ, ತೃಪ್ತಿ ನೀಡಬೇಕೆಂಬುದೇ ಎಲ್ಲರ ಆಶಯ. ಒಂದು ಕೆಲಸದ ಫಲವನ್ನು ಮಾತ್ರ ಅನುಭವಿಸುತ್ತೇನೆ ಆದರೆ ಆ ಕೆಲಸದಲ್ಲಿ ಆನಂದವಿಲ್ಲ ಎನ್ನುವ ಸ್ಥಿತಿ ಬರಬಾರದು.

ನಮಗೆ ಅನುಭವವಿರುವ ಕೆಲಸವನ್ನೇ ಮಾಡುವ ಅವಕಾಶ ಸಿಕ್ಕಾಗ ಅದು ಸುಲಭ ಸಾಧ್ಯವಾಗುತ್ತದೆ. ಅದಕ್ಕೆ ಕೌಶಲ್ಯ ತರಬೇತಿ ಅತಿ ಮುಖ್ಯವಾದದ್ದು.

ಉಪಜೀವನಕ್ಕೆ ಬೇಕಾದ ಆದಾಯಕ್ಕೂ, ಬದುಕಿನ ತೃಪ್ತಿಗೂ ಅದು ಸಾಧನವಾಗುತ್ತದೆ. ಮಾಡುವ ಕೆಲಸದಲ್ಲಿ ತನ್ಮಯತೆ, ಬಂದ ಗಳಿಕೆಯಲ್ಲಿ ನೆಮ್ಮದಿಯ ಬದುಕು ನಮ್ಮದಾಗಬೇಕೆಂದರೆ ನಮಗೆ ಒಂದಾದರೂ ಕೌಶಲ್ಯದಲ್ಲಿ ಪರಿಣತಿ ಬೇಕು.

ನಮಗೆ ಪರಂಪರೆಯಿಂದ ಬಂದ ಕೌಶಲ್ಯಗಳು ಅನೇಕ. ಆದರೆ ಆಧುನಿಕ ಶಿಕ್ಷಣ ಪದ್ಧತಿ ಮಕ್ಕಳನ್ನು ಪರಂಪರಾಗತ ಕೌಶಲ್ಯದಿಂದ ಸಾಕಷ್ಟು ದೂರ ಮಾಡಿದೆ. ಈ ಸಂಬಂಧದ ಚರ್ಚೆಯೊಂದು ನ್ಯಾಯಾಲಯದ ಮೆಟ್ಟಿಲೇರಿತ್ತು.

ಮಕ್ಕಳಿಗೆ ಶಾಲೆಯ ಶಿಕ್ಷಣವನ್ನು ಬಿಟ್ಟು ಬೇರೇನೂ ಕೆಲಸವನ್ನು ಹಚ್ಚುವಂತಿಲ್ಲ ಎನ್ನುವುದು ಕಾನೂನು.

ಬಂಗಾರದ ಆಭರಣವನ್ನು ಸಿದ್ಧಪಡಿಸುವವನ ಮಗ ನೋಡುತ್ತ ನೋಡುತ್ತ ಆ ಕೌಶಲವನ್ನು ಕಲಿಯಬಲ್ಲ.

ಕಾಷ್ಠಶಿಲ್ಪಿಯ ಮಗನಿಗೆ ಉಳಿ ಸುತ್ತಿಗೆ ಆಟದ ವಸ್ತುವಾಗುತ್ತದೆ.

ಬಾಲ್ಯದ ಕುತೂಹಲಕ್ಕೆ ಅನುಕರಣೆ ಆನಂದವನ್ನು ನೀಡುತ್ತದೆ, ನಂತರ ಪರಂಪರೆಯ ಕೌಶಲ್ಯ ಅವನ ಹವ್ಯಾಸವಾಗುತ್ತದೆ.

ಇಂತಹ ಆಟಕ್ಕೆ ಹದಿನಾಲ್ಕು ವರ್ಷಗಳವರೆಗೆ ಅವಕಾಶ ನೀಡಬಾರದು ಎಂಬುದನ್ನು ಒಪ್ಪಿದರೆ ಮಕ್ಕಳ ಕುತೂಹಲವನ್ನು ಕೊಲ್ಲುತ್ತೇವೆ. ಪರಂಪರೆಯ ಕೌಶಲ್ಯ ಸಹಜ ಹವ್ಯಾಸವಾಗುವ ಅವಕಾಶವನ್ನೂ ಕಿತ್ತುಕೊಳ್ಳುತ್ತೇವೆ. ಪರ ವಿರೋಧ ವಾದಗಳನ್ನು ಆಲಿಸಿದ ನ್ಯಾಯಾಲಯ ಮನೆತನದ ಕೌಶಲವನ್ನು ಮಕ್ಕಳು ಕಲಿತರೆ, ಪರಿಣತಿಗಾಗಿ ದುಡಿದರೆ ಬಾಲಕಾರ್ಮಿಕ ಕಾನೂನಿನಡಿಯ ಅಪರಾಧವಾಗುವುದಿಲ್ಲ ಎಂದು ಐತಿಹಾಸಿಕ ತೀರ್ಮಾನ ನೀಡಿದೆ.



## ಉಪಯೋಗ-ಉಪ ಉದ್ಯೋಗ

ಕದಂಬ ಫೌಂಡೇಶನ್ ಕೌಶಲ್ಯ ತರಬೇತಿಯ ಕುರಿತು ಚಿಂತಿಸಿದಾಗ ಅದರ ಬಹುಮುಖೀ-ದೂರಗಾಮೀ ಪರಿಣಾಮಗಳು ಹೊಸದೊಂದು ಅವಕಾಶದ ಹೆಬ್ಬಾಗಿಲನ್ನೇ ತೆರೆದಿಟ್ಟಿತ್ತು. ವಿಶೇಷವಾಗಿ ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡುವುದರಿಂದ ಕೌಟುಂಬಿಕ ಹಾಗೂ ಸಾಮಾಜಿಕವಾಗಿ ಒದಗುವ ಅನುಕೂಲಗಳ ಪಟ್ಟಿ ಉದ್ದವಾಗಿತ್ತು. ಹೆಣ್ಣುಮಕ್ಕಳು ಹುಟ್ಟುವಾಗಲೇ ಅನೇಕ ಕೌಶಲ್ಯಗಳನ್ನು ಕಲಿತು ಬಂದಿರುತ್ತಾರೆ! ಸೂಕ್ಷ್ಮ ಸಂವೇದನೆ, ತಾಳ್ಮೆಯ ಪರಿಶ್ರಮ ಅವರಿಗೆ ಸ್ವಭಾವವೇ ಆಗಿರುವುದು ನಮ್ಮೆಲ್ಲರ ಅನುಭವಕ್ಕೆ ಬಂದಿದೆ. ಮಹಿಳೆಯರ ಸೌಂದರ್ಯ ಪ್ರಜ್ಞೆ ಹಾಗೂ ಪರಿಶ್ರಮಗಳನ್ನು ಗುರುತಿಸುವ ಹಾಗೂ ಅದನ್ನು ತಿದ್ದಿ ತೀಡಿ ಓರಣಗೊಳಿಸುವ ಪ್ರಯತ್ನ ಫಲದಾಯಕವೆನಿಸಿತು. ಕೌಶಲ್ಯ ತರಬೇತಿಯ ಮೂಲಕ  ಮಹಿಳಾ ಸಬಲೀಕರಣ ಹಾಗು ಉದ್ಯೋಗ ನಿರ್ಮಾಣದ ಯೋಜನೆ ಮಾಡಿದೆವು. ಕೌಶಲ್ಯ ತರಬೇತಿ ಪಡೆದ ಎಲ್ಲರಿಗೂ ಅದು ಉಪಯೋಗಕ್ಕೆ ಬರಬೇಕು, ಹೆಚ್ಚಿನವರಿಗೆ ಉಪ ಉದ್ಯೋಗವಾಗಬೇಕು, ಕೆಲವರಿಗಾದರೂ ಪೂರ್ಣಪ್ರಮಾಣದ ಉದ್ಯೋಗಕ್ಕೆ ಹಾದಿಯಾಗಬೇಕು ಎನ್ನುವ ಉದ್ದೇಶದೊಂದಿಗೆ ಯೋಜನೆಯ ಅನುಷ್ಠಾನಕ್ಕೆ ತೊಡಗಿದೆವು. ಸೋಪು, ಸೋಪಿನ ಪುಡಿ ಮುಂತಾದ ದಿನ ಬಳಕೆಯ ವಸ್ತುಗಳ ತಯಾರಿಕೆ, ಹೊಲಿಗೆ, ಕಸೂತಿ, ಜರದೋಶಿ, ತರಬೇತಿ ನೀಡುವುದು. ಆಹಾರ ಪದಾರ್ಥಗಳ ತಯಾರಿಕೆ, ಪೊಟ್ಟಣ ಮತ್ತು ಶೇಖರಣೆ (ಪ್ಯಾಕಿಂಗ್ & ಪ್ರಿಸರ್ವೇಶನ್), ಬಾಳೆ ದಿಂಡಿನ, ನಾರಿನ ಬಹುಮುಖೀ ಉಪಯೋಗದ ತರಬೇತಿ, ಕರಕುಶಲ ವಸ್ತುಗಳ ತಯಾರಿಕಾ ತರಬೇತಿ, ಬಿದಿರಿನಿಂದ ತಯಾರಿಸುವ ಉಪಕರಣಗಳ ತರಬೇತಿ ಹೀಗೆ ಹತ್ತಾರು ತರಬೇತಿಗಳನ್ನು ನೀಡಲಾಯಿತು.  ಕೃಷಿ ಉಪಕರಣಗಳ ತಯಾರಿ ಮತ್ತು ಬಳಕೆ ಕುರಿತೂ ತರಬೇತಿ ನೀಡಿದೆವು. ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗ ದೊರೆತಿದ್ದರಿಂದ  ತರಬೇತಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು.

2005ರ ಮೇ ತಿಂಗಳಿನಲ್ಲಿ ಯಲ್ಲಾಪುರ ತಾಲೂಕಾ ಹಿತ್ಲಳ್ಳಿಯಲ್ಲಿ 'ಸವಿ ಸಾವಯವ ಆಹಾರ ಪದಾರ್ಥ ತಯಾರಿಕಾ ಘಟಕ' ವನ್ನು ಮಹಿಳೆಯರೇ ಆರಂಭಿಸಿದರು. ಮಹಿಳೆಯರ ಆಹಾರ ಕೌಶಲ್ಯಕ್ಕೆ ಮಾರುಕಟ್ಟೆಯ ಸ್ಪರ್ಶ ಸಿಕ್ಕಾಗ ರುಚಿಗೆ ಬೆಲೆ ಬರುತ್ತದೆ. ಮನೆಯಲ್ಲಿ ಸಾಮಾನ್ಯ ಎನ್ನಿಸಿಕೊಂಡ ಸಂಗತಿಗಳನ್ನೂ ಸಂತೆ ವಿಶೇಷವಾಗಿ ಗುರುತಿಸುತ್ತದೆ. ಮಹಿಳೆಯರ ದೃಷ್ಟಿಯಿಂದ ಕೌಶಲ್ಯದ ಗುರುತಿಸುವಿಕೆ ಮತ್ತು ಸಿದ್ಧಪಡಿಸಿದ ವಸ್ತುಗಳಿಗೆ ಒದಗುವ ಲಾಭದಾಯಕ ಮಾರುಕಟ್ಟೆ ಎರಡೂ ಮುಖ್ಯವಾದವು.



## ಪರಿಸರ ಸ್ನೇಹಿ ಊಟದ ಬಟ್ಟಲು

ಶಿರಸಿ ನಗರದಂಚಿನ ಎಸಳೆಯಲ್ಲಿ ಮಹಿಳೆಯರು ಕಟ್ಟಿದ ಶ್ರೀಮಾತಾ ಸ್ವಸಹಾಯ ಸಂಘ ತುಂಬಾ ಕ್ರಿಯಾಶೀಲವಾದದ್ದು. ಆ ಸಂಘದ ಸದಸ್ಯೆ ಶ್ರೀಮತಿ ಲತಾ ನಾಯ್ಕರು ಅಡಿಕೆ ಹಾಳೆಯಿಂದ ಊಟದ ಬಟ್ಟಲು ಮತ್ತು ದೊನ್ನೆ ತಯಾರು ಮಾಡುವ ಕೌಶಲ್ಯವನ್ನು ರೂಢಿಸಿಕೊಂಡು ಉದ್ಯಮಿಯಾಗಿದ್ದಾರೆ. ಸ್ವಂತದ ಅಡಿಕೆ ತೋಟವಿಲ್ಲದಿದ್ದರೂ ಅಡಿಕೆ ಹಾಳೆಯ ದೊನ್ನೆ ಮತ್ತು ತಾಟು ಸಿದ್ಧಮಾಡುವ ಅವರ ಸಾಹಸ ದೊಡ್ಡದು. ಸ್ವಸಹಾಯ ಸಂಘದ ಮೂಲಕ ದೊರೆತ ಸಾಲದ ಸಹಾಯ, ಶ್ರದ್ಧೆಯಿಂದ ಕಲಿತ ಕೌಶಲ್ಯದಿಂದ ಸ್ವತಂತ್ರ ಉದ್ಯಮ ನಡೆಸುತ್ತಿದ್ದಾರೆ. ಒಂದು ಹೊಸ ಕೌಶಲ್ಯ ಒಂದು ಕುಟುಂಬದ ಬದುಕಾಯಿತು. ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪರಿಸರ ಸ್ನೇಹಿ ತಟ್ಟೆ ಬಟ್ಟಲುಗಳು ತಯಾರಾದವು. ಗೊತ್ತಿಲ್ಲದ ಹಾಗೆ ಸಂಕ್ರಾಂತಿ ಸಂಭ್ರಮಿಸಿತ್ತು.



## ಸಂಘಟಿತ ಯತ್ನದ ಸಿಮೆಂಟ್‌ರಿಂಗ್

ಯಲ್ಲಾಪುರ ತಾಲೂಕು ಮಂಚಿಕೇರಿಯ ಮಹಿಳೆಯರ ಮಹಾಗಣಪತಿ ಸ್ವಸಹಾಯ ಸಂಘದ ಸಂಘಟಿತ ಉದ್ಯಮ ಅಪೂರ್ವವಾದದ್ದು. ಮರಳು, ಸಿಮೆಂಟ್, ಕಬ್ಬಿಣ ಮತ್ತು ಜಲ್ಲಿಗಳನ್ನು ತರಿಸಿಕೊಂಡು ಆರ್‌ಸಿಸಿ ರಿಂಗುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ತಯಾರಿಕೆಯಲ್ಲಿ ತಜ್ಞರ ಸಹಾಯ ಪಡೆದರೂ ಇದನ್ನೊಂದು ಉದ್ಯಮವಾಗಿ ಬೆಳೆಸಿದ ಸಾಧನೆ ಅವರದು. ಮೂರು ಅಡಿಯಿಂದ ಆರು ಅಡಿ ವ್ಯಾಸದ ರಿಂಗುಗಳನ್ನು ತಯಾರಿಸಿ ಸುತ್ತಲಿನ ಹಳ್ಳಿಗಳ ಅಗತ್ಯಗಳಿಗೆ ಪೂರೈಸುತ್ತಾರೆ. ವರ್ಷಕ್ಕೆ ಪ್ರತಿಯೊಬ್ಬರ ಲಾಭ 25ರಿಂದ 30 ಸಾವಿರ ರೂಪಾಯಿ. ಎಲ್ಲರೂ ಹಣ ತೊಡಗಿಸಿ, ಎಲ್ಲರೂ ದುಡಿದು, ಒಟ್ಟಾಗಿ ಲಾಭವನ್ನು ಹಂಚಿಕೊಳ್ಳುವ ಈ ಮಹಿಳೆಯರು ಸಹಕಾರದ ಹೊಸ ಅವಕಾಶವನ್ನೇ ಸೃಷ್ಟಿಸಿದ್ದಾರೆ. ಉದ್ಯಮದ ಉತ್ಸಾಹಕ್ಕೆ ವ್ಯವಹಾರ ನಿರ್ವಹಣೆಯ ಕೌಶಲ್ಯವೂ ಸೇರಿದಾಗ ಆರ್ಥಿಕ ಸಹಕಾರ, ಸಾಮಾಜಿಕ ಸಾಮರಸ್ಯಗಳು ತನ್ನಿಂದ ತಾನೇ ಸಾಧ್ಯವಾಗುತ್ತವೆ ಎನ್ನುವುದಕ್ಕೆ ಇವರೆಲ್ಲ ನಿದರ್ಶನವಾಗಿದ್ದಾರೆ.



## ದಾಖಲೆ ನಿರ್ಮಿಸಿದ ಕೌಶಲ್ಯ ಮೇಳ

2002ರ ಜನವರಿ 18,19,20ರಂದು ಮೂರು ದಿನಗಳ ಕೌಶಲ್ಯ ಮೇಳವೊಂದನ್ನು ಶಿರಸಿಯ ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದೆವು. ಕದಂಬ ಆರಂಭಿಸಿದ ಸ್ವಸಹಾಯ ಗುಂಪುಗಳು, ಕದಂಬದಿಂದ ತರಬೇತಿ ಪಡೆದ ಮಹಿಳಾ ಗುಂಪುಗಳು, ಸುತ್ತಲಿನ ಅನೇಕ ಸ್ವಯಂಸೇವಾ ಸಂಸ್ಥೆಗಳು ಭಾಗವಹಿಸಿದ್ದವು. ಆ ಮೇಳದಲ್ಲಿ ಕರಕುಶಲ ವಸ್ತುಗಳು ಹಾಗೂ ಗೃಹ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವನ್ನು ಆಯೋಜಿಸಲಾಗಿತ್ತು. 42 ಮಳಿಗೆಗಳು ವೈವಿಧ್ಯಮಯ ವಸ್ತುಗಳಿಂದ ಅಕ್ಷರಶಃ ಅಲಂಕಾರಗೊಂಡಿದ್ದವು. ಹೆಚ್ಚಿನವರು ಮೊದಲ ಬಾರಿ ತಮ್ಮ ಮನೆಯಲ್ಲಿ ತಯಾರಿಸಿದ ಅಲಂಕಾರಿಕ ವಸ್ತುಗಳನ್ನೋ ಆಹಾರ ಪದಾರ್ಥಗಳನ್ನೋ ಪ್ರದರ್ಶನಕ್ಕೆ ತಂದಿದ್ದರು. ಮಾರಾಟವೂ ಹೊಸದೇ ಆಗಿತ್ತು. ಆ ಮಹಿಳೆಯರ ಉತ್ಸಾಹ, ಸಂಭ್ರಮ ಮೇಳದ ಯೋಜಕರಿಗೆ ಮತ್ತಷ್ಟು ಉತ್ಸಾಹ ತುಂಬಿದವು. ಮಳಿಗೆಗಳನ್ನು ಉಚಿತವಾಗಿ ನೀಡಲಾಗಿತ್ತು. ಆ ಉದ್ಯಮಶೀಲ ಮಹಿಳೆಯರಿಗೆ ಮೂರೂ ದಿನ ಊಟ ವಸತಿಯ ವ್ಯವಸ್ಥೆಯನ್ನೂ ಉಚಿತವಾಗಿ ನೀಡಲಾಗಿತ್ತು. ಮೇಳದ ಸಂದರ್ಭದಲ್ಲಿ ಕೌಶಲ್ಯಾಭಿವೃದ್ಧಿಗೆ ಮತ್ತು ಮಾರುಕಟ್ಟೆಗೆ ಪೂರಕವಾದ ವಿಚಾರ ಸಂಕಿರಣಗಳನ್ನು ನಡೆಸಲಾಯಿತು. ಮೂರೂ ದಿನ ಸಂಜೆ ಮನರಂಜನಾ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿತ್ತು. ಅಕ್ಷರಶಃ ಅದು ಕೌಶಲ್ಯದ ಜಾತ್ರೆಯಾಗಿತ್ತು.

ಮೂರು ದಿನದ ಆ ಮೇಳವನ್ನು ಸಂದರ್ಶಿಸಿದವರು ಹತ್ತು ಸಾವಿರಕ್ಕೂ ಹೆಚ್ಚು ಜನ. ಮಳಿಗೆಗಳಲ್ಲಿ ನಡೆದ ಒಟ್ಟೂ ವ್ಯವಹಾರ ಎರಡು ಲಕ್ಷ ರೂಪಾಯಿಗಳಷ್ಟು. ಮೇಳವನ್ನು ಉದ್ಘಾಟಿಸಿದವರು ಆಗ ಕೇಂದ್ರ ಸಮಾಜ ಕಲ್ಯಾಣ ಮಂಡಳಿ ಅಧ್ಯಕ್ಷರಾಗಿದ್ದ ಶ್ರೀಮತಿ ಮೃದುಲಾ ಸಿನ್ಹಾರವರು. ಮೇಳದ ಅಯೋಜನೆಯ ಶಿಸ್ತು, ಪಾಲ್ಗೊಂಡವರ ಉತ್ಸಾಹ, ವಸ್ತುಗಳ ವೈವಿಧ್ಯ ಮತ್ತು ಗುಣಮಟ್ಟ, ಮಹಿಳೆಯರ ಶ್ರದ್ಧೆ ಸಂಭ್ರಮಗಳನ್ನು ಕಂಡು
ಶ್ರೀಮತಿ ಮೃದುಲಾ ಸಿನ್ಹಾರವರು ಮನಸಾರೆ ಸಂಭ್ರಮಿಸಿದರು. ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯ
ಶ್ರೀಮತಿ ರುಕ್ಮಿಣಿ ಸಾವಕಾರ್ ಅವರೂ ಪಾಲ್ಗೊಂಡಿದ್ದರು. ಆ ಮೇಳ, ಪಾಲ್ಗೊಂಡ ಎಲ್ಲರಿಗೂ ಹೊಸ ಕನಸನ್ನು ನೀಡಿತು, ನೂತನ ಅವಕಾಶಗಳನ್ನೂ ಅನಾವರಣಗೊಳಿಸಿತು.



# ಸಂಕಷ್ಟದಲ್ಲಿ ಸಾಂತ್ವನ

ಒಂದು ಸಾಮಾಜದ ಸ್ವಾಸ್ಥ್ಯ ಆ ಸಮಾಜದ ಸಂಪತ್ತನ್ನೂ ಶಿಕ್ಷಣವನ್ನೂ ಅವಲಂಬಿಸಿಲ್ಲ, ಬದಲಾಗಿ ಬೇರೆಯವರ ಕಷ್ಟಕ್ಕೆ ಕರಗುವವರು, ಸಹಾಯಕ್ಕೆ ಬರುವವರು ಎಷ್ಟಿದ್ದಾರೆ ಎಂಬುದನ್ನು ಅವಲಂಬಿಸಿದೆ. ಸಮಾಜದ ನೈತಿಕ ಪರಂಪರೆ, ಸರಕಾರದ ಕಾನೂನು ಎಷ್ಟೇ ಬಿಗಿಯಾಗಿದ್ದರೂ ಅಪರಾಧಗಳು ಘಟಿಸುತ್ತಲೇ ಇರುತ್ತವೆ! ದೌರ್ಜನ್ಯಕ್ಕೊಳಗಾದವರ ಕಣ್ಣೀರೊರಸುವ, ಬಿದ್ದವರನ್ನು ಕೈಹಿಡಿದು ಮೇಲೆತ್ತುವ ಮಾನವೀಯ ಸೇವೆ ಸಜ್ಜನರ ಕರ್ತವ್ಯವಾಗಿದೆ.

ಆರ್ಥಿಕ ಹಾನಿಗೆ ಪರಿಹಾರ ಕೊಡಬಹುದು, ರೋಗಕ್ಕೆ ಔಷಧ ಸೂಚಿಸಬಹುದು ಆದರೆ ಮನಸಿನ ನೋವಿಗೆ ಮನುಷ್ಯರ ಆಸರೆಯೇ ಬೇಕಾಗುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಕಾರದಲ್ಲಿ ಸಾಂತ್ವನ ಕೇಂದ್ರವೊಂದನ್ನು ಕುಮಟಾದಲ್ಲಿ ಆರಂಭಿಸಿದೆವು. 2008ರ ಎಪ್ರಿಲ್‌ನಲ್ಲಿ ಆರಂಭವಾದ ಸಾಂತ್ವನ ಕೇಂದ್ರ ಹತ್ತು ವರ್ಷಗಳ ಕಾಲ ನಿರಂತರವಾಗಿ ಕಾರ್ಯಮಾಡಿತು. ಹಗಲು ರಾತ್ರಿ ಎನ್ನದೆ ಸೇವೆ ನೀಡಿತು. ಶ್ರೀಮತಿ ಉಮಾ ಪಟಗಾರರ ನೇತೃತ್ವದಲ್ಲಿ ನಾಲ್ಕು ಜನರ ತಂಡ ಹತ್ತು ವರ್ಷಗಳಲ್ಲಿ ಪಡೆದ ಅನುಭವ, ನೀಡಿದ ಪ್ರತಿಸ್ಪಂದನ ಅನಿರ್ವಚನೀಯ. ಅಪರಿಚಿತರ ಗೋಳನ್ನು ಕೇಳಬೇಕು, ಅದರ ಹಂದರವನ್ನು ಹುಡುಕಿ ತೆಗೆದು ಸಮಸ್ಯೆಯ ಮೂಲವನ್ನೂ ಅರಿಯಬೇಕು. ಸಂಬಂಧಪಟ್ಟವರನ್ನೆಲ್ಲ ಸಂಪರ್ಕಿಸಬೇಕು. ಸಮಾಜದ ಹಿರಿಯರು, ಶ್ರದ್ಧಾ ಕೇಂದ್ರಗಳು, ಮಾನಸಿಕ ಆರೋಗ್ಯ ಕೇಂದ್ರಗಳು, ಪೋಲೀಸ್ ವ್ಯವಸ್ಥೆ, ನ್ಯಾಯಾಲಯ ಹೀಗೆ ಎಲ್ಲರ ಸಹಕಾರದಿಂದ ಒಂದು ಸಮಸ್ಯೆಗೆ, ದುಃಖಕ್ಕೆ ಪರಿಹಾರ ಕಂಡುಕೊಳ್ಳಬೇಕು. ಈ ಎಲ್ಲ ಸಂದರ್ಭಗಳಲ್ಲಿಯೂ ಕಾರ್ಯಕರ್ತರ ತಾಳ್ಮೆ ಪ್ರೀತಿಗಳು ಹೆಜ್ಜೆ ಹೆಜ್ಜೆಗೂ ಪರೀಕ್ಷಿಸಲ್ಪಡುತ್ತವೆ. ಹೊಸ ಹೊಸ ಪಾಠಗಳನ್ನು ತಿಳಿಸಿಕೊಡುತ್ತವೆ.
ಅದೇ ನಿಜವಾದ ಸಮಾಜಸೇವೆ ಅಲ್ಲವೆ!





# ಶಿಕ್ಷೆಯಲ್ಲ ಸಾಮರಸ್ಯ

ಸಾಂತ್ವನ ಕೇಂದ್ರದ ಬಾಗಿಲು ತಟ್ಟಿದ ಸಾವಿತ್ರಿಗೆ ಮೂವತ್ತೈದರ ಹರೆಯ. ಜತೆಯಲ್ಲಿ ಹದಿನಾಲ್ಕು ವರ್ಷದ ಮಗಳು. ಮದುವೆಯಾದ ಮರುದಿನದಿಂದಲೂ ಗಂಡನ ಮನೆಯಲ್ಲಿ ಅತ್ತೆ ಹಾಗೂ ಗಂಡನಿಂದ ಚಿತ್ರಹಿಂಸೆ. ಆ ಮಗಳು ಹೊಟ್ಟೆಯಲ್ಲಿದ್ದಾಗಲೇ ಒಂದು ದಿನ ಗರ್ಭಿಣಿಯನ್ನು ಬಾವಿಗೆ ದೂಡುತ್ತಾರೆ. ಕೂಗಿಕೊಂಡವಳ ನೆರವಿಗೆ ಬಂದ ಅಕ್ಕಪಕ್ಕದವರಿಂದಾಗಿ ತಾಯಿಯ ಮನೆ ಸೇರುತ್ತಾಳೆ ಸಾವಿತ್ರಿ. ತಾಯಿಯ ಮತ್ತು ಅಣ್ಣನೊಡನೆ ಬದುಕುತ್ತ ಮಗಳನ್ನೂ ಬೆಳೆಸಿದ್ದಾಳೆ. ಮುಂದೆ ಅಣ್ಣನಿಗೆ ಮದುವೆಯಾದಾಗ ಅಲ್ಲಿಯೂ ಕಿರಿಕಿರಿಯಾಯಿತು. ಮಗಳು ದೊಡ್ಡವಳಾದಾಗ ಅವಳ ಭವಿಷ್ಯದ ಕುರಿತು ಚಿಂತೆ ಹತ್ತಿತು. ಗಂಡನ ಮನೆಯಲ್ಲಿ ಆಸ್ತಿ ಅನುಕೂಲಗಳಿದ್ದರೂ ಇವಳು ಅನಾಥೆ!

ಸಾಂತ್ವನ ಕೇಂದ್ರ ಅವಳ ಗಂಡನ ಮನೆಗೆ ಹೋಗಿ ವಿಷಯ ತಿಳಿಸಿತು. ಸಂಗಡ ಇಟ್ಟುಕೊಳ್ಳಿ ಇಲ್ಲವೇ ಆಸ್ತಿಯಲ್ಲಿ ಪಾಲುಕೊಡಿ ಎಂದು ಒತ್ತಾಯಿಸಿತು. ಎರಡೂ ಸಾಧ್ಯವಿಲ್ಲವೆಂದು ಅವರು ತಿರಸ್ಕರಿಸಿದಾಗ ನ್ಯಾಯಾಲಯಕ್ಕೆ ಮೊರೆಹೋಗಬೇಕಾಯಿತು. ಅಷ್ಟರಲ್ಲಿ ಒಂದು ವರ್ಷವೇ ಕಳೆಯಿತು. ಒಂದೆರಡು ವಾಯ್ದೆಗೆ ಹಾಜರಾದ ಮೇಲೆ ಪ್ರಕರಣದ ಗಂಭೀರತೆ ಅರ್ಥವಾಗಿ ಗಂಡನ ಮನೆಯವರು ಮೆತ್ತಗಾದರು. ರಾಜಿಗೆ ಮುಂದಾದರು. ನ್ಯಾಯಾಲಯದಲ್ಲಿಯೇ ರಾಜಿ ಒಪ್ಪಂದವಾಯಿತು. ಹಳತನ್ನೆಲ್ಲ ಮರೆತು ಒಟ್ಟಿಗೆ ಬದುಕುವುದಕ್ಕೆ ಸಿದ್ಧರಾದರು. ಹೊಂದಾಣಿಕೆಯಾಗಬಹುದೇ ಎಂಬ ನಮ್ಮ ಅನುಮಾನವನ್ನೂ ಮೀರಿ ಸಂತೋಷದಿಂದ ಬದುಕಿದ್ದಾರೆ ಎನ್ನುವುದು ಅಚ್ಚರಿಯ ಸತ್ಯ!

ಸಾವಿತ್ರಿಗೆ ಸಂಸಾರವಿದೆ. ಮಗಳಿಗೆ ಶಿಕ್ಷಣವಿದೆ. ಇಲ್ಲಿ ಕದಂಬ ಸಾಂತ್ವನ ಕೇಂದ್ರ ಅಪರಾಧಿಗೆ ಶಿಕ್ಷೆ ನೀಡಬೇಕೆಂದು ಪ್ರತಿಪಾದಿಸಲಿಲ್ಲ, ಬದಲಾಗಿ ಅಸಹಾಯಕರಿಗೆ ನ್ಯಾಯ ಸಿಕ್ಕಿದರೆ ಅಷ್ಟೇ ಸಾಕು ಎಂದು ಪ್ರಯತ್ನಿಸಿತು. ಶಿಕ್ಷೆಯನ್ನೂ ಮೀರಿದ ಸಾಮರಸ್ಯವೊಂದು ಮೂಡಿಬಂದಿದ್ದು, ನಿಜಕ್ಕೂ ಧನ್ಯತೆಯನ್ನು ನೀಡಿದೆ.



## ತಾಯಿಗೆ ಅರಿವಿಲ್ಲ, ಮಗುವಿಗೆ ನೆಲೆಯಿಲ್ಲ

ಹೊನ್ನಾವರದ ಹಳ್ಳಿಯೊಂದರಿಂದ ಹದಿನಾರರ ಬಾಲೆಯೊಬ್ಬಳನ್ನು ಸಾಂತ್ವನ ಕೇಂದ್ರಕ್ಕೆ ತಂದಾಗ ಅವಳು ಗರ್ಭಿಣಿ. ಅದು ಆ ಮುಗ್ಧೆಗೆ ತಿಳಿದೇ ಇಲ್ಲ! ಯಾರಿಂದಾಯಿತು ಹೇಗಾಯಿತು ಎಂಬುದಕ್ಕೆ ಸರಿಯಾದ ಉತ್ತರವಿಲ್ಲ. ಕಾಳಜಿಯಿಂದ ವಿವರಿಸಿ, ವಿಚಾರಿಸಿದಾಗ ಮೂರು ನಾಲ್ಕು ಹೆಸರುಗಳು ಬಂದವು. ಅವುಗಳಲ್ಲಿ ಮುಖ್ಯವಾದ ಹೆಸರೊಂದನ್ನು ನಿಶ್ಚಯಿಸಿ ಆತನೇ ಆಗಿರಬಹುದೆಂದು ಭಾವಿಸಿದರು. ಬೇಡದ ಬಸಿರು ಬೆಳೆದು ಮಗು ಭೂಮಿಗೆ ಬಂತು. ಆಗ ನಡೆಸಿದ ಡಿಎನ್ಎ ಪರೀಕ್ಷೆ ತಂದೆಯನ್ನು ಹುಡುಕಿಕೊಡಲಿಲ್ಲ. ಅಂದುಕೊಂಡವನು ಅಪರಾಧಿಯಾಗಿರಲಿಲ್ಲ. ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ತಾಯಿಗೆ ಹಣಕಾಸಿನ ನೆರವು ಬಂತಾದರೂ ಮಗುವಿನ ಭವಿಷ್ಯ ನಿರ್ಣಯವಾಗಲಿಲ್ಲ. ಆ ಹುಡುಗಿಯ ಅಕ್ಕಂದಿರಿಗೆ ಮದುವೆಯಾಗಿರಲಿಲ್ಲ. ಈ ಮಗುವನ್ನು ಸಾಕುವುದರಿಂದ ಅವರಿಗೆಲ್ಲ ಸಮಸ್ಯೆ! ಸಂಬಂಧಿಕರು ಯಾರಾದರೂ ಸಾಕಲಿ ಎಂದರೆ ಕಾನೂನು ಒಪ್ಪುವುದಿಲ್ಲ. ಈ ಹೊಯ್ದಾಟದಲ್ಲಿ ಮಗು ಸರಕಾರದ ಅನಾಥ ಶಿಶುಗಳ ಸಂಗಡ ಬೆಳೆಯಬೇಕಾಗಿ ಬಂತು. ತಪ್ಪು ಸರಿಗಳ ತಕ್ಕಡಿಯಲ್ಲಿ ತೂಗಲಾಗದ ಅದೆಷ್ಟು ಸಂಗತಿಗಳಿರುತ್ತವೆ ಈ ಬದುಕಿನಲ್ಲಿ! ಅಲ್ಲೆಲ್ಲ ನಿರ್ವ್ಯಾಜ ಪ್ರೀತಿ ನತದೃಷ್ಟರನ್ನು ಮತ್ತೆ ಬದುಕಿಗೆ ಹಚ್ಚುತ್ತದೆ. ನೈತಿಕತೆ ಮರೆಯಾದಲ್ಲಿ, ಕಾನೂನು ಸೋತಲ್ಲಿ, ಜೀವಕಾರುಣ್ಯ ಗೆಲ್ಲಿಸುತ್ತದೆ.

ಕದಂಬ ಸಾಂತ್ವನ ಕೇಂದ್ರ ಇಂತಹ ನೂರಾರು ಪ್ರಕರಣಗಳನ್ನು ನಿಭಾಯಿಸಿದೆ. ಅದೆಷ್ಟೋ ಕುಟುಂಬಗಳನ್ನು ಜೋಡಿಸಿದೆ, ಮತ್ತು ಅನೇಕರಿಗೆ ಸರಿ ದಾರಿಯನ್ನೂ ತೋರಿದೆ. ಬಹು ಪತ್ನಿತ್ವ, ಲೈಂಗಿಕ ದೌರ್ಜನ್ಯ, ಬಲಾತ್ಕಾರ, ವ್ಯಸನಗಳು ಮತ್ತು ಆಸ್ತಿಗೆ ಸಂಬಂಧಿಸಿದ ಅನೇಕ ಸಂಗತಿಗಳಲ್ಲಿ ಅಸಹಾಯಕರ ನೆರವಿಗೆ ನಿಂತು ಯಶಸ್ಸನ್ನು ಕಂಡಿದೆ. ವ್ಯವಸ್ಥೆ ಹೇಗೇ ಇದ್ದರೂ ಅದರ ಮುಖದಲ್ಲಿರುವ ವ್ಯಕ್ತಿ ಸಹೃದಯಿಯಾದರೆ ಎಲ್ಲ ಸಮಸ್ಯೆಗಳಿಗೂ ಒಂದು ಸಮಾಧಾನ ಸಾಧ್ಯ ಎಂಬ ಅನುಭವವೇ ಸಾಂತ್ವನ ಕೇಂದ್ರದ ಪ್ರಯತ್ನದ ಸಾಫಲ್ಯ ಎನ್ನಬಹುದು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅನುದಾನದಲ್ಲಿ ನಡೆಯುತ್ತಿದ್ದ ಸಾಂತ್ವನ ಕೇಂದ್ರವನ್ನು ತಿರುಗಿ ಸರಕಾರಕ್ಕೆ ವಹಿಸಿದೆವು. ನಾನು ಮಂತ್ರಿಯಾದಾಗ ಒಂದು ನೈತಿಕ ಪ್ರಶ್ನೆ ನನ್ನನ್ನು ಕಾಡಿತು. ನಾವೆಷ್ಟೇ ಪಾರದರ್ಶಕವಾಗಿ ವ್ಯವಹಾರ ನಡೆಸಿದರೂ 'ಮಂತ್ರಿಗಳ ಸಂಸ್ಥೆಗೆ ಸರಕಾರಿ ಅನುದಾನ' ಎಂಬ ಬಿರುದನ್ನು ನೀಡುವವರಿರುತ್ತಾರೆ. ಆದ್ದರಿಂದ ಕದಂಬದ ಜನೋಪಯೋಗಿ ಕೇಂದ್ರವೊಂದನ್ನು ಸರಕಾರಕ್ಕೆ ಬಿಟ್ಟುಗೊಟ್ಟೆವು. ಆ ಕೇಂದ್ರ ಮುಂದೆಯೂ ಪರಿಣಾಮಕಾರಿಯಾಗಿ ಕಾರ್ಯವನ್ನು ನಿರ್ವಹಿಸಲಿ ಎಂಬುದಷ್ಟೇ ನನ್ನ ಆಶಯ.

## ಮೌಲ್ಯ ನೀಡಿದ ಮಾರುಕಟ್ಟೆ

ಕದಂಬ ಮೂಲತಃ ಮಾರುಕಟ್ಟೆಯನ್ನು ದೃಷ್ಟಿಯಲ್ಲಿಟ್ಟು ಪ್ರಾರಂಭಗೊಂಡಿದ್ದಲ್ಲ. ಆದರೆ ಕೃಷಿ ಉತ್ಪನ್ನಗಳ ಅಂದಿನ ಮಾರುಕಟ್ಟೆಯ ಪರಿಸ್ಥಿತಿ ನಮ್ಮನ್ನು ಅನಿವಾರ್ಯವಾಗಿ ಮಾರುಕಟ್ಟೆಗೆ ನೂಕಿತು. ಮಾರುಕಟ್ಟೆಯನ್ನು ನೋಡಿ ಕೃಷಿ ಮಾಡಿ ಎನ್ನುವ ಸಲಹೆ ಚೆನ್ನಾಗಿದೆ ಆದರೆ ಮಾರುಕಟ್ಟೆಯೂ ಕೃಷಿಯನ್ನು ಆದರಿಸಬೇಕಲ್ಲ. ಬಿತ್ತುವಾಗ ಭರವಸೆ ನೀಡಿದ ಮಾರುಕಟ್ಟೆ, ಬೆಳೆ ಬಂದಾಗ ಕೈ ಎತ್ತಿದರೆ ಹೇಗೆ! ಬೆಳೆಗಾರನ ಕಷ್ಟವೆಂದರೆ ಒಮ್ಮೆ ಮಾರುಕಟ್ಟೆಗೆ ತಂದರೆ ತಿರುಗಿ ಮನೆಗೆ ಒಯ್ಯಲಾಗುವುದಿಲ್ಲ. ಅಲ್ಲದೆ, ಅನೇಕ ಬೆಳೆಗಳು ಬಹಳ ದಿನ ಉಳಿಯಲಾರವು ಕೂಡ.

ಸಿಕ್ಕ ದರಕ್ಕೇ ಮಾರಬೇಕಾಗಿರುವುದು ರೈತನ ಅನಿವಾರ್ಯತೆ. ಕೃಷಿಕರದೇ ಆದ ಸ್ಪರ್ಧಾತ್ಮಕ ಮಾರುಕಟ್ಟೆ ಇಲ್ಲದಿದ್ದರೆ ಶೋಷಣೆ ನಿಶ್ಚಿತ. ಕೃಷಿಯ ಮುಖ್ಯ ಬೆಳೆಗಳಲ್ಲದೆ ಪೂರಕ ಬೆಳೆಗಳೂ ಅನೇಕ ಇವೆ. ಕಾಳುಮೆಣಸು, ಯಾಲಕ್ಕಿ, ಲವಂಗ, ಜಾಯಿಕಾಯಿ, ಕಾಫಿ, ಕೋಕೊ, ಗೋಡಂಬಿ, ವೆನಿಲಾ, ಸೂಜಿಮೆಣಸು ಮುಂತಾದವು. ಅವಕ್ಕೆಲ್ಲ ಗೌರವಯುತ ಮಾರುಕಟ್ಟೆ ದೊರಕಲೇಬೇಕು. ಜೊತೆಯಲ್ಲಿ ಕಿರು ಅರಣ್ಯ ಉತ್ಪನ್ನಗಳಾದ ಜೇನುತುಪ್ಪ, ಶೀಗೇಕಾಯಿ, ಅಂಟುವಾಳ ಕಾಯಿ, ಮುರುಗಲು, ದಾಲಚಿನ್ನಿ, ಉಪ್ಪಾಗೆಗಳಿಗೂ ನಿಶ್ಚಿತ ಮಾರುಕಟ್ಟೆ ಸಿಗುವಂತಾಗಬೇಕು. ಅಂತಹ ಸುಸಂಘಟಿತ ಮಾರುಕಟ್ಟೆಯ ಕೊರತೆಯಿಂದಲೇ ಖಾಸಗಿ ವ್ಯಾಪಾರಸ್ಥರು ಮೂರುಕಾಸಿನ ಬೆಲೆಗೆ ಅವುಗಳನ್ನು ಖರೀದಿಸಿ ಶೋಷಣೆ ಮಾಡುತ್ತಿದ್ದರು. ಪೇಟೆಯ ಮಾರುಕಟ್ಟೆಗೆ ಇಂತಹ ಉತ್ಪನ್ನಗಳನ್ನು ತರುವಾಗ ಕನಿಷ್ಠ ಒಂದು ಕೇಜಿಯಷ್ಟಾದರೂ ಇರಬೇಡವೆ ಎನ್ನುವ ಸಂಕೋಚ ಕಾಡುತ್ತದೆ.

ಈ ಎಲ್ಲ ಸಂಗತಿಗಳನ್ನು ಪರಿಗಣಿಸಿ ಶಿರಸಿಯಲ್ಲಿ 2005ರಲ್ಲಿ ಆರಂಭಿಸಿದ್ದ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ, ವೆನಿಲಾ ಬೆಳೆಯ ಮಾರಾಟಕ್ಕೆ ಇಸ್ಕಾನ್ ಸಂಸ್ಥೆಯೊಂದಿಗೆ ಮಾಡಿಕೊಂಡ ಒಪ್ಪಂದ ಶಿರಸಿ ಸುತ್ತಲಿನ ರೈತರಿಗೆ ವರದಾನವಾದದ್ದು ಈಗ ಇತಿಹಾಸ.

## ಸಣ್ಣ ಅಳತೆಗೂ ಸೌಹಾರ್ದದ ಮೌಲ್ಯ

ಕೃಷಿ ಕಾರ್ಮಿಕಳಾದ ನಾಗಜ್ಜಿ, ಮನೆಯ ಎದುರಿನಲ್ಲಿ ಹತ್ತು ಸೂಜಿಮೆಣಸಿನ ಗಿಡ ಬೆಳೆದಿದ್ದಾಳೆ. ಅದರ ತುಂಬೆಲ್ಲ ಮೆಣಸಿನ ಕಾಯಿ. ವಿಪುಲವಾಗಿ ಬೆಳೆದ ಮೆಣಸಿನ ಕಾಯಿಯನ್ನು ಕೊಯ್ದು ಒಣಗಿಸಿ ಒಪ್ಪವಾಗಿಟ್ಟಿದ್ದಳು.

ಅವಳ ಮಗ ಅಣ್ಣಪ್ಪ ಕಾಡಿನ ಶೀಗೇಕಾಯಿಯನ್ನು ಕೊಯ್ದು ತಂದು ಒಣಗಿಸಿದ್ದ. ಆದರೆ ಅವನ್ನೆಲ್ಲ ಕೊಳ್ಳುವವರು ಯಾರು? ಕೊಂಡರೂ ಅದಕ್ಕೆ ಗೌರವವೆಲ್ಲಿ!

ಅಂತಹ ಸಂದರ್ಭದಲ್ಲಿ ಉತ್ತರ ನೀಡಿದ್ದು ಕದಂಬ. ನಾಗಜ್ಜಿ ತನ್ನ ಮಡಿಲಲ್ಲಿ ಕಟ್ಟಿಕೊಂಡು ಬಂದ ಒಣ ಸೂಜಿಮೆಣಸಿಗೆ ಯೋಗ್ಯ ದರ ನಿಗದಿ ಮಾಡಿದ್ದಲ್ಲದೆ ತಕ್ಷಣ ಹಣ ನೀಡಲಾಯಿತು.

ಅಣ್ಣಪ್ಪನ ಐದು ಕೇಜಿ ಶೀಗೇಕಾಯಿಗೂ ಯೋಗ್ಯ ಬೆಲೆ ಸಿಕ್ಕಿತು. ಇಪ್ಪತ್ತು ಗ್ರಾಂ ಜಾಯಿಕಾಯಿ ಪತ್ರೆ ತಂದರೂ, ಅರ್ಧ ಕೇಜಿ ಕೋಕೊ ಬೀಜ ತಂದರೂ ಕೊಳ್ಳುವ ಮತ್ತು ತಕ್ಷಣವೇ ಹಣ ನೀಡುವ ವ್ಯವಸ್ಥೆಯಿಂದಾಗಿ ಕೃಷಿಕರ, ವನವಾಸಿಗಳ, ಕೃಷಿ ಕಾರ್ಮಿಕರ ಆದಾಯದ ಸಂಗಡ ಆತ್ಮ ಗೌರವವೂ ಹೆಚ್ಚಾಯಿತು.




## ಮೌಲ್ಯವರ್ಧಿತ ವಸ್ತುಗಳಿಗೆ ಮರ್ಯಾದೆಯ ಮಾರುಕಟ್ಟೆ

ಅನೇಕ ಬಾರಿ ನಮ್ಮ ಸಮೃದ್ಧಿ ನಮಗೇ ತಿಳಿದಿರುವುದಿಲ್ಲ. ನಮ್ಮೂರಿನ ಹಲಸಿನ ಕಾಯಿ ಮರದಲ್ಲೇ ಹಣ್ಣಾಗಿ ಬಿದ್ದು ಹೋಗುತ್ತದೆ. ನಾವು ಬೆಳೆದ ಬಾಳೆಕಾಯಿಗೆ ಮನೆಬಾಗಿಲಿಗೆ ಬಂದು ಖರೀದಿಸುವವರು ಕೊಡುವ ಬೆಲೆ ನಗಣ್ಯವಾಗಿರುತ್ತದೆ. ನಾವು ಕೊಡುವಾಗ ಒಂದು ಕೇಜಿ ಬಾಳೆಕಾಯಿಗೆ ಐದು ರೂಪಾಯಿ. ಅದೇ ಕಾಯಿ ಹಣ್ಣಾದಾಗ ಪೇಟೆಯಲ್ಲಿ ಅದರ ಬೆಲೆ ಕೇಜಿಗೆ ಮೂವತ್ತು ರೂಪಾಯಿ! ಕಾಯಿ ಹಣ್ಣಾಗುವುದು ಸಹಜ. ಅದರಲ್ಲಿ ಮೌಲ್ಯ ವರ್ಧನೆಯ ಯಾವ ಶ್ರಮವೂ ಇಲ್ಲ. ಆದರೂ ಐದಾರು ಪಟ್ಟು ಮೌಲ್ಯ ವರ್ಧನೆ. ಇಂತಹ ಸಂದರ್ಭದಲ್ಲಿ ಮೌಲ್ಯ ವರ್ಧಿತ ಉತ್ಪನ್ನಗಳಿಗೆ ಯೋಗ್ಯ ಮಾರುಕಟ್ಟೆ ಒದಗಿಸುವ ಪ್ರಯತ್ನಕ್ಕೆ ಕದಂಬ ಮುಂದಾಯಿತು. ಹಲಸಿನ ಹಪ್ಪಳ, ಚಿಪ್ಸ್, ಬಾಳೆಕಾಯಿ ಹಪ್ಪಳ, ಸುಕೇಳಿ, ಅರಿಷಿಣದ ಪೌಡರ್, ಶೀಗೇಕಾಯಿ ಪುಡಿ, ಮುರುಗಲು ಸಿಪ್ಪೆಯ ಪಾಕ, ನೆಲ್ಲಿಕಾಯಿಯ ಪಾಕ ಹೀಗೆ ಹತ್ತಾರು ರೀತಿಯ ಮೌಲ್ಯವರ್ಧಿತ ವಸ್ತುಗಳಿಗೆ ವ್ಯವಸ್ಥಿತ ಮಾರುಕಟ್ಟೆಯನ್ನೂ ಒದಗಿಸಿತು ಕದಂಬ. ಕುಟುಂಬದ ಆದಾಯ ಹೆಚ್ಚಿತು ಎನ್ನುವುದೊಂದೇ ಅಲ್ಲ ಪರೋಕ್ಷವಾಗಿ ಸಮಾಜದ ಅದರಲ್ಲೂ ತಾಯಂದಿರ, ಅಕ್ಕತಂಗಿಯರ ಗೌರವದ ಬದುಕಿಗೂ ಕದಂಬ ಕಾರಣವಾಯಿತು.

# ಆಲೋಚನೆಯ ಆಕಾಶ, ಆತ್ಮ ಸಾಕ್ಷಿಯ ಆತಂಕ

ಕದಂಬ ಸಹಕಾರ ಬ್ಯಾಂಕ್ ಹಾಗೂ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ಇವೆರಡರ ಸ್ಥಾಪಕ ಅಧ್ಯಕ್ಷ ನಾನೇ ಆಗಿದ್ದೆ. ನನ್ನ ಆಲೋಚನೆಯ ಆಕಾಶವನ್ನೇ ಧರೆಗಿಳಿಸುವ ಉತ್ಸಾವಿತ್ತು. ಆರಂಭದಲ್ಲಿ ನಮ್ಮ ಆಲೋಚನೆಯನ್ನು ಒಪ್ಪಿದವರು ಬಹಳ ಕಡಿಮೆ. ಇದು ಯಶಸ್ವೀ ಪ್ರಯೋಗವಾಗಲಾರದು ಎನ್ನುವುದೇ ಹೆಚ್ಚಿನವರ ಪ್ರತಿಕ್ರಿಯೆಯಾಗಿತ್ತು. ಆದರೆ ಆರೇ ತಿಂಗಳಲ್ಲಿ ಸಾರ್ವಜನಿಕರು ಸ್ಪಂದಿಸಿದ ರೀತಿ ಅನನ್ಯವಾಗಿತ್ತು.

ವಿಶೇಷವಾಗಿ ಮಹಿಳೆಯರು ಈ ಆಲೋಚನೆಯನ್ನು, ಪ್ರಯೋಗವನ್ನು ಬೆಂಬಲಿಸಿದ ರೀತಿ ಆಪ್ತವಾಗಿತ್ತು. ಹಳ್ಳಿ ಹಳ್ಳಿಯ ರೈತರು ತಮ್ಮ ಹೊಲ ಬೇಣ ಬೆಟ್ಟಗಳಲ್ಲಿ ಹಾಳಾಗಿಹೋಗುತ್ತಿದ್ದ ವಸ್ತುಗಳಿಗೆಲ್ಲ ಯೋಗ್ಯ ಮಾರುಕಟ್ಟೆಯನ್ನು ಪಡೆದಿದ್ದು ಸಹಕಾರಿ ಜಗತ್ತಿನಲ್ಲಿ ಮೊದಲ ಸಾಧನೆಯಾಗಿತ್ತು. ಶಿರಸಿಯಲ್ಲಿ ಮಾತ್ರ ಮಾರಿದರೆ ಸಾಕೆ? ಎಂಬ ಪ್ರಶ್ನೆ ಕಾಡಿದಾಗ, ಕರ್ನಾಟಕದ ಬೇರೆ ಬೇರೆ ಟ್ರೇಡ್‌ಫೇರ್(ವ್ಯಾಪಾರಿ ಜಾತ್ರೆ)ಗಳಲ್ಲಿ ನಮ್ಮ ಹಳ್ಳಿಯ ಮೌಲ್ಯ ವರ್ಧಿತ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮಳಿಗೆಗಳನ್ನು ಏರ್ಪಡಿಸಿದೆವು. ಇದು ನಮ್ಮ ಮಹಿಳೆಯರಿಗೆ ಹೊರ ಜಗತ್ತಿನೊಡನೆ ಸಂಬಂಧ ಕಲ್ಪಿಸಿದಂತೆ, ಹೊರ ಜಗತ್ತಿಗೆ ನಮ್ಮ ಮಲೆನಾಡಿನ ವೈವಿಧ್ಯಮಯ ಆಹಾರಗಳ ರುಚಿಯನ್ನೂ ಶುಚಿಯನ್ನೂ ಪರಿಚಯಿಸಿದವು. ಇಂತಹ ಇನ್ನೂ ಅನೇಕ ಆಲೋಚನೆಗಳು ಕನಸುಗಳು ನನಸುಗಳಾಗಿ ರೂಪ ಪಡೆಯುತ್ತಿದ್ದಂತೆಯೇ, ಇನ್ನೂ ಅನೇಕ ಕಾರ್ಯ ಯೋಜನೆಗಳು ತಲೆಯಲ್ಲಿ ಮೂಡಿ ಬಂದಿದ್ದವು.

ಆರಂಭದ ಆತಂಕ ಕಳೆದು ಆದಾಯದ ಅವಕಾಶಗಳು ಸೃಷ್ಟಿಯಾದಂತೆ ಸಂಸ್ಥೆಯ ಆರ್ಥಿಕ ಸ್ಥಿತಿಯೂ ಉತ್ತಮವಾಯಿತು. ಮೊದಲು ಬಂದ ಕಿವಿಗಳಿಗಿಂತ ನಂತರ ಬಂದ ಕೋಡುಗಳು ಮೇಲೆ ಎಂಬಂತೆ ಮೊದಲ ಸಂಕಲ್ಪಕ್ಕಿಂತ ನಂತರದ ನಿರೀಕ್ಷೆಗಳು ಬದಲಾದವು. ಹಣದ ಗುಣವೇ ಹಾಗೆಂದು ಕಾಣುತ್ತದೆ! ಮೂಲ ಉದ್ದೇಶವನ್ನು ಮರೆಸಿ ಮರ ಹತ್ತಿಸುತ್ತದೆ. ಸಣ್ಣ ಸಣ್ಣ ಲಾಭಗಳಲ್ಲಿಯೂ ಆಕರ್ಷಣೆ ಹುಟ್ಟಿಸುತ್ತದೆ. ಯಾಕೋ ಕುಳಿತಿದ್ದ ಕುರ್ಚಿ ಅಸಹ್ಯವೆನಿಸಿತು. ಅಧ್ಯಕ್ಷನಾಗಿದ್ದ ನಾನು ಆ ಸಂದರ್ಭದಲ್ಲಿ ಆತ್ಮಸಾಕ್ಷಿಗೆ ಮನಗೊಟ್ಟು 2007ರ ಸೆಪ್ಟೆಂಬರ್‌ನಲ್ಲಿ ಆ ಸ್ಥಾನವನ್ನೂ, ಅವಕಾಶವನ್ನೂ ಬಿಟ್ಟುಕೊಟ್ಟೆ. ಅಲ್ಲಿರುವವರು ಅದನ್ನು ಅವರ ನಿರ್ಣಯದಂತೆ ಮುನ್ನಡೆಸಿದ್ದಾರೆ. ಆ ಸಂಸ್ಥೆ ಚೆನ್ನಾಗಿಯೇ ಕಾರ್ಯನಿರ್ವಹಿಸಲಿ ಎನ್ನುವುದಷ್ಟೇ ನನ್ನ ಬಯಕೆ.

ಅದಕ್ಕೆ, ಆ ತೆರನ ಮತ್ತೊಂದು ಪ್ರಯತ್ನ ಬೇಡ ಎಂದು ಎಂಟು ವರ್ಷಗಳ ಕಾಲ ಮೌನವಾಗಿದ್ದೆ. ಆದರೆ ರೈತರ ಹಿತ ಕಾಯುವಲ್ಲಿ ಸ್ಪರ್ಧಾತ್ಮಕ ಮಾರುಕಟ್ಟೆ ಅತ್ಯಂತ ಆವಶ್ಯಕವಾಗಿತ್ತು. ಯಾವ ವ್ಯವಸ್ಥೆಯಲ್ಲೂ ಏಕಸ್ವಾಮ್ಯ ಒಳಿತಲ್ಲ. ಈ ದೃಷ್ಟಿಯಿಂದ ಮಾರುಕಟ್ಟೆಯ ಮುಖ್ಯ ಪಾಲುದಾರನಾಗುವುದಕ್ಕಿಂತ ರೈತರ ಹಿತ ಕಾಯುವ ಒತ್ತಡ ಕೇಂದ್ರವಾಗಿ ಕದಂಬ ಅಗ್ರೊ ಪ್ರೊಡ್ಯೂಸರ್ ಕಂಪನಿಯನ್ನು 2015ರಲ್ಲಿ ಆರಂಭಿಸಿದೆ. ಖರೀದಿಯ ಪ್ರಮಾಣ ಕಡಿಮೆಯಾದರೂ ನಾವಿದ್ದೇವೆ ಎಂಬ ಕಾರಣದಿಂದ ಮಾರುಕಟ್ಟೆಯ ದರ ಒಂದು ಹತೋಟಿಯಲ್ಲಿರುತ್ತದೆ. ಅದಕ್ಕೆಂದೇ ಮುಂದಡಿಯಿಟ್ಟಿದ್ದೇವೆ.

ಕೃಷಿಕರ, ಕೃಷಿ ಕಾರ್ಮಿಕರ ಬದುಕಿನ ಮೌಲ್ಯವರ್ಧನೆಯ ಅನೇಕ ಕನಸುಗಳು ಕಣ್ಣ ಮುಂದೆ ಬರುತ್ತಿವೆ. ವಿಶೇಷವಾಗಿ ನೂತನ ವೈಜ್ಞಾನಿಕ ಮತ್ತು ತಾಂತ್ರಿಕ ಶೋಧಗಳ ಹಿನ್ನೆಲೆಯಲ್ಲಿ ಕೃಷಿಗೆ ಹೊಸ ದಿಸೆಯನ್ನು ನೀಡುವ ಸಾಧ್ಯತೆಗಳೊಂದಿಗೆ ಮತ್ತೊಮ್ಮೆ ಹುಡುಕಾಟ ಪ್ರಾರಂಭಿಸಿದ್ದೇನೆ. ಗಮ್ಯವಂತೂ ಸ್ಪಷ್ಟವಾಗಿದೆ. ಯೋಜನೆಗಳು ರೂಪುಗೊಳ್ಳುತ್ತಿವೆ.
ಜೊತೆಯಲ್ಲಿ ಸ್ವಭಾವಜನ್ಯ ಛಲ ಇದ್ದೇ ಇದೆ.

## ನ ದೈನ್ಯಂ, ನ ಪಲಾಯನಂ...



# ಸೌಹಾರ್ದ–ಸಹಕಾರ



ಮನುಷ್ಯ ಸಮಾಜವೇ ಒಂದು ಸಹಕಾರ. ಕೂಡಿ ಬದುಕುವ ಹಂಬಲ ಮತ್ತು ಪರಸ್ಪರ ನೆರವುಗಳೇ ಮನುಷ್ಯತ್ವಕ್ಕೆ ಪ್ರಮಾಣಗಳು. ಕುಟುಂಬ, ಸಮಾಜ ಎಲ್ಲವೂ ಸಹಕಾರದಿಂದಲೇ ಸಾಧ್ಯವಾಗಿವೆ. ಈ ಲೋಕದ ಬದುಕು ಪರಸ್ಪರ ಅವಲಂಬಿಯಾದದ್ದು. ಪೂರ್ಣ ಸ್ವತಂತ್ರವಾಗಿ, ಯಾರ ಸಹಾಯವೂ ಇಲ್ಲದೆ ಬದುಕುತ್ತೇನೆ ಎನ್ನುವುದು ಸಾಧ್ಯವೇ ಇಲ್ಲ. ಹಣ ಕೊಟ್ಟರೆ ಎಲ್ಲವೂ ಸಿಗುತ್ತದೆ, ನನಗೆ ಯಾರ ಹಂಗಿಲ್ಲ ಎನ್ನುವವರೂ ಇದ್ದಾರೆ. ನಮಗೆ ಅಗತ್ಯವಾದ ವಸ್ತು, ಸೇವೆಗಳನ್ನು ಒದಗಿಸುವವರ ಸಹಕಾರವಿಲ್ಲದಿದ್ದರೆ ಹಣವೂ ಪ್ರಯೋಜನಕ್ಕೆ ಬರುವುದಿಲ್ಲ. ಹಾಗೆ ನೋಡಿದರೆ ಹಣವೆನ್ನುವುದೂ ಪರಸ್ಪರ ನಂಬಿಗೆಯ ಒಪ್ಪಂದ!

ಕದಂಬದ ಉಳಿದೆಲ್ಲ ವಿಭಾಗಗಳು ಸಾರ್ವಜನಿಕರ ಸಹಕಾರದಿಂದಲೇ ನಡೆಯುತ್ತಿವೆ. ಈ ಸಹಕಾರದ ನೆಲೆಯಲಿಯಲ್ಲಿಯೇ ಆರ್ಥಿಕ ವ್ಯವಹಾರವನ್ನೂ ಜೋಡಿಸಬೇಕೆಂಬ ಹಂಬಲವಿತ್ತು. ಅಂತೆಯೇ ಹೊಸ ಸಂಕಲ್ಪದೊಂದಿಗೆ, ಹೊಸ ಕಲ್ಪನೆಗಳೊಂದಿಗೆ ಮತ್ತೊಮ್ಮೆ ಆರಂಭವಾದದ್ದು ಹೊಸ "ಕದಂಬ ಸಹಕಾರಿ ಸಂಸ್ಥೆ". ಅನೇಕ ಕಲ್ಪನೆಗಳಿಗೆ ರೂಪುಕೊಡಬಹುದಾದ ಅವಕಾಶಗಳು ಅದಕ್ಕಿರುವಾಗಲೇ ನಾನು ಈ ಹಿಂದಿನ ಸಂಸ್ಥೆಯಿಂದ ಹೊರಬಂದಿದ್ದೆ. ಹಳೆಯ ಅನುಭವಗಳೊಂದಿಗೆ ಹೊಸತನದ ದಾರಿಯಲ್ಲಿ ಮುಂದಡಿಯಿಟ್ಟಿದ್ದೇನೆ.

ಸಹಕಾರಿ ಕ್ಷೇತ್ರದ ಅಪಾರ ಸಾಧ್ಯತೆಗಳು, ಉನ್ನತ ತಂತ್ರಜ್ಞಾನದ ಅಳವಡಿಕೆಯೊಂದಿಗೆ ಪಾರದರ್ಶಕವಾಗಿ ಮಾಡಬಹುದಾದ ಹಣಕಾಸಿನ ವ್ಯವಹಾರದ ಅನುಕೂಲಗಳು ಹಾಗೂ ಈ ಕ್ಷೇತ್ರದಲ್ಲಿರುವ ವಿಪುಲ ಅವಕಾಶಗಳನ್ನು ಗಮನಿಸಿದಾಗ ಇನ್ನೊಮ್ಮೆ ಆರ್ಥಿಕ ವ್ಯವಹಾರದ ಸಹಕಾರಿ ಸಂಸ್ಥೆಯೊಂದನ್ನು ಕದಂಬದ ಹೆಸರಿನಲ್ಲಿಯೇ ಆರಂಭಿಸುವ ಯೋಚನೆ ಬಂತು. 2015ರಲ್ಲಿ ಕದಂಬ ಸೌಹಾರ್ದ ಸಹಕಾರಿ (ನಿ) ಸಂಸ್ಥೆಯನ್ನು ಹೊಸದಾಗಿ ಆರಂಭಿಸಿದೆವು.

'ಠೇವಣಿಗೆ ಆಕರ್ಷಕ ಬಡ್ಡಿ ನೀಡುವುದು, ಕಡಿಮೆ ಬಡ್ಡಿಯಲ್ಲಿ ಸಾಲ ನೀಡುವುದು' ಎಲ್ಲ ಸಹಕಾರಿಗಳೂ ಹೇಳುವ ಮಾತು. ಆದರೆ, ಕದಂಬ ಸೌಹಾರ್ದ ಸಹಕಾರಿಯ ಹೆಚ್ಚುಗಾರಿಕೆಯಿರುವುದು ಅದರ ಸೇವೆಯ ಗುಣಮಟ್ಟದಲ್ಲಿ. ಅಷ್ಟೇ ಅಲ್ಲ, ತಂತ್ರಜ್ಞಾನದ ಬಳಕೆಯಲ್ಲಿ ಮತ್ತು ಸೇವಾ ವೈವಿಧ್ಯಗಳಲ್ಲಿ. ಸಾಲದ ಸಹಾಯ ಕೇಳಿ ಬಂದವರ ಸಮಸ್ಯೆ ಸಂಕಟಗಳನ್ನೂ ಕೇಳುವ ತಾಳ್ಮೆ ಮೊದಲ ಅಗತ್ಯವಾದರೆ, ಹಣಕಾಸಿನ ನಿರ್ವಹಣೆಯಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆಗಳು ನಮ್ಮ ಬದ್ಧತೆಗಳಾಗಿರಬೇಕು. ಪ್ರಾಮಾಣಿಕತೆ ಗ್ರಾಹಕರ ವಿಶ್ವಾಸ ಗಳಿಸಿದರೆ, ಪಾರದರ್ಶಕತೆ ಆ ವಿಶ್ವಾಸವನ್ನು ಕಾಪಿಡುತ್ತದೆ. ನಿಯಮಗಳನ್ನು ಮುರಿಯದೆಯೇ ಸದಸ್ಯರ/ಗ್ರಾಹಕರ ಅಗತ್ಯಕ್ಕೆ ಸ್ಪಂದಿಸುವುದೇ ಸಹಕಾರದ ವಿಶೇಷ. ಸಂಜೆ ಆರು ಗಂಟೆಗೆ ಕಚೇರಿ ಮುಗಿಯಬೇಕು ಆದರೆ ಸದಸ್ಯರೊಬ್ಬರು ಏಳು ಗಂಟೆಗೆ ಬರುತ್ತೇನೆ ಎಂದಾಗ ಅವರಿಗಾಗಿ ಕಾಯಲಾಗುತ್ತದೆ. ಕಚೇರಿಗೇ ಬಂದು ಹಣ ಕೊಡಬೇಕು, ಅದು ಕ್ರಮ. ಆದರೆ ಗ್ರಾಹಕರೊಬ್ಬರು ನಮ್ಮ ಸಿಬ್ಬಂದಿಗೆ ಹೇಳುತ್ತಾರೆ

'ಹೇಗೂ ನೀವು ಹೋಗುವ ಹಾದಿಯಲ್ಲೇ ನಮ್ಮ ಮನೆಯಿದೆ, ಹೋಗುವಾಗ ನಮ್ಮ ಮನೆಗೆ ಬಂದು ತೆಗೆದುಕೊಂಡು ಹೋಗಿ' ಎಂದು. ಈ ವಿಶ್ವಾಸವನ್ನು ಅಲ್ಲಗಳೆಯಲಾದೀತೆ! ಈ ಮನುಷ್ಯ ಸಂಬಂಧ, ಸಂಕೋಚಗಳೇ ಸಹಕಾರವನ್ನು ಗಟ್ಟಿಗೊಳಿಸುತ್ತವೆ.

# ವ್ಯವಹಾರದ ವೇಗಕ್ಕೆ ವಿದ್ಯುನ್ಮಾನದ ಸ್ಪರ್ಶ



ದೊಡ್ಡದು ಮಾತ್ರ ಬದುಕುತ್ತದೆ ಎನ್ನುವುದು ಅರ್ಥಲೋಕದ ಇತ್ತೀಚಿನ ಮಾತು. ಹಾಗಾಗಿ ಬೇರೆ ಬೇರೆ ಬ್ಯಾಂಕುಗಳನ್ನು ಸೇರಿಸಿ ಒಂದು ದೊಡ್ಡ ಬ್ಯಾಂಕ್ ಮಾಡಲಾಗುತ್ತಿದೆ. ವ್ಯವಹಾರದ ಮೊತ್ತ, ವ್ಯಾಪಾರದ ಕ್ರಮ ಎಲ್ಲವೂ ದೊಡ್ಡದಿರಬೇಕು ಎನ್ನವುದು ನಿರೀಕ್ಷೆ. ಸ್ವಸಹಾಯ ಸಂಘದ ನೆಲೆಯಲ್ಲಿ ನಿಂತಾಗ ಸಣ್ಣದು ಸುಂದರ ಎಂದು ನಾವಂದುಕೊಂಡರೆ, ಬ್ಯಾಂಕಿನ ಬೃಹತ್ ಜಾಲವನ್ನು ಕಂಡಾಗ ದೊಡ್ಡದು ದಾಪುಗಾಲಿಡುತ್ತದೆ ಎನಿಸುತ್ತದೆ! ವ್ಯವಹಾರದ ಮೊತ್ತದ ಆಧಾರದಲ್ಲಿ ಸೇವೆಯ ಗುಣಮಟ್ಟವನ್ನು ಅಳೆಯಲಾಗದು. ಕದಂಬ ಸೌಹಾರ್ದ ಸಹಕಾರಿ ಎಲ್ಲ ವ್ಯವಹಾರವನ್ನೂ ಕಂಪ್ಯೂಟರೀಕರಣಗೊಳಿಸಿದೆ.

ಕದಂಬ ಸೌಹಾರ್ದ ಸಹಕಾರಿ ಸಂಘ ತನ್ನ ತಾಂತ್ರಿಕ ಪರಿಣತಿಯಿಂದಾಗಿ ದೇಶದಲ್ಲಿಯೇ ಅನನ್ಯ ಆರ್ಥಿಕ ಸಂಸ್ಥೆ ಎನ್ನಿಸಿದೆ. ಗ್ರಾಹಕರ ಎಲ್ಲ ಅಗತ್ಯಗಳಿಗೂ ಸ್ಪಂದಿಸುವ ಸೇವೆ ನೀಡುತ್ತಿದೆ. ಮೊಬೈಲ್ ಬ್ಯಾಂಕಿಂಗ್‌ನಿಂದ ವಿದೇಶಿ ವಿನಿಮಯದವರೆಗೆ ಎಲ್ಲವೂ ಇಲ್ಲಿ ಲಭ್ಯ. ಪ್ರಧಾನ ಕಚೇರಿ ಶಿರಸಿಯಲ್ಲಿ. ಉತರಕನ್ನಡ ಜಿಲ್ಲೆಯ ಹೊನ್ನಾವರ, ಕುಮಟಾ, ಶಿರಾಲಿ, ಕುಮಟಾ, ಗೋಕರ್ಣಗಳಲ್ಲಿ ಅಲ್ಲದೇ ಬೆಂಗಳೂರು, ಮಂಗಳೂರು, ಮೈಸೂರುಗಳಲ್ಲಿಯೂ ಶಾಖೆಗಳನ್ನು ಹೊಂದಿದ್ದು ಡಿಜಿಟಲ್ ಸೇವೆಯಲ್ಲಿ ಅಗ್ರಗಣ್ಯ ಆರ್ಥಿಕ ಸಂಸ್ಥೆ ಎನ್ನಿಸಿದೆ. ಕೇವಲ ಎಂಟು ವರ್ಷಗಳಲ್ಲಿ ವಾರ್ಷಿಕ ವ್ಯವಹಾರದ ಮೊತ್ತ ರೂ.1350 ಕೋಟಿಗೂ ಮಿಕ್ಕಿದೆ.

## ಸಂಪೂರ್ಣ ಗ್ರಾಹಕ ಸ್ನೇಹಿ,
## ಅಧಿಕ ದಕ್ಷತೆ ಹಾಗೂ ಅತ್ಯಂತ ಪಾರದರ್ಶಕ

ದೇಶದಲ್ಲೇ ಮೊಟ್ಟ ಮೊದಲಬಾರಿಗೆ ವಿಶಿಷ್ಟ ಗಣಕಯಂತ್ರ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು ಎಲ್ಲ ಸೇವೆಗಳನ್ನೂ ಆನ್‌ಲೈನ್‌ನಲ್ಲಿ ನೀಡಲಾಗುತ್ತಿದೆ. ಎಲ್ಲ ವ್ಯವಹಾರಗಳನ್ನೂ ಗಣಕಯಂತ್ರಗಳ ಮೂಲಕವೇ ಮಾಡುತಿದ್ದ ಕದಂಬದ ಕುರಿತ ಎಲ್ಲ ವಿವರಗಳೂ ಆನ್‌ಲೈನ್ ವೇದಿಕೆಯಲ್ಲಿ ಸಾರ್ವಜನಿಕರಿಗೆ ಲಭ್ಯ. ವ್ಯವಹಾರದಿಂದ ವಿದ್ಯಾಭ್ಯಾಸದವರೆಗೆ ಎಲ್ಲರೀತಿಯ ಸಾಲಗಳು, 'ಮೈ ಮನಿ' ಎಂಬ ಸಮುದಾಯ ಬ್ಯಾಂಕಿಂಗ್‌ನ ಯೋಜನೆಯನ್ನು ರೂಪಿಸಿರುವ್ವ ಮೊಟ್ಟ ಮೊದಲ ಸಂಸ್ಥೆ. ತಾಂತ್ರಿಕ ಪಟುತ್ವ ಪಾರದರ್ಶಕತೆಗೆ ಸಾಧನವಾಗಿ ಒದಗಿದೆ. ಅಷ್ಟೇ ಅಲ್ಲ ವ್ಯವಹಾರದ ವೇಗವನ್ನು ಹತ್ತು ಪಟ್ಟು ನೂರು ಪಟ್ಟು ವರ್ಧಿಸಿದೆ.



# ಖಾತೆ ಕದಂಬದಲ್ಲಿ–ವ್ಯವಹಾರ ಬೆರಳು ತುದಿಯಲ್ಲಿ

ದೊಡ್ಡ ಬ್ಯಾಂಕುಗಳು ಮಾತ್ರ ಆಧುನಿಕ ಸೌಲಭ್ಯಗಳನ್ನು ನೀಡಲು ಸಾಧ್ಯ, ಚಿಕ್ಕ ಬ್ಯಾಂಕುಗಳಿಗೆ ಅದು ಬಹಳ ಭಾರ ಎನ್ನುವ ಅನಿಸಿಕೆ ಸಾರ್ವತ್ರಿಕವಾಗಿದೆ. ಈ ಪರಿಕಲ್ಪನೆಯನ್ನು ಒಪ್ಪದ ನಾವು ಕದಂಬ ಸೌಹಾರ್ದ ಸಹಕಾರಿಯಲ್ಲಿ ಹಣಕಾಸಿನ ವ್ಯವಹಾರದ ಎಲ್ಲ ಸಾಧ್ಯತೆಗಳನ್ನೂ ಅಳವಡಿಸಲು ಪ್ರಯತ್ನಿಸಿದ್ದೇವೆ. ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆ ನೀಡಿದ್ದೇವೆ. ನಮ್ಮಲ್ಲಿ ಖಾತೆ ತೆರೆದರೆ ಮೊಬೈಲ್ ಮೂಲಕ ಯಾವುದೇ ಹಣಕಾಸಿನ ವ್ಯವಹಾರ ಮಾಡಬಹುದು. ಬಸ್ಸು, ರೈಲಿನ ಟಿಕೆಟ್ ಕಾದಿರಿಸಬಹುದು.

ಮೊಬೈಲ್, ಟೀವಿ ರಿಚಾರ್ಜ್ ಮಾಡಿಸಬಹುದು. ಅಷ್ಟೇ ಅಲ್ಲ ತುರ್ತು ಸಂದಾಯ ವ್ಯವಸ್ಥೆ (ಐಎಂಪಿಎಸ್) ಸೌಲಭ್ಯವನ್ನೂ ನೀಡಲಾಗಿದೆ. ನಮ್ಮ ದೇಶದಲ್ಲಿ, ಸಹಕಾರ ಕ್ಷೇತ್ರದಲ್ಲಿ ಈ ಪ್ರಮಾಣದಲ್ಲಿ ಇ–ಸೌಲಭ್ಯ ಆರಂಭಿಸಿದ ಮೊದಲಿಗರು ನಾವು ಎಂಬ ಹೆಮ್ಮೆ ನಮಗಿದೆ. ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸೀಮಿತವಾಗಿದ್ದ ಸೇವಾ ಸೌಲಭ್ಯಗಳು ಇಂದು ಸಹಕಾರಿ ಕ್ಷೇತ್ರಕ್ಕೂ ಕಾಲಿಡುವಂತಾಗಿವೆ.

**RTGS, NEFT, Payment Banking** ಈ ರೀತಿಯ ಸೌಲಭ್ಯಗಳು ನಮ್ಮಲ್ಲಿ ಲಭ್ಯ.
**ABPS (Adhar Based Payment System)** ಆಧಾರ ಸಂಖ್ಯೆನ್ನಾಧರಿಸಿ ಹೆಬ್ಬೆರಳೊತ್ತಿ ಹಣ ಪಾವತಿಸುವ ಸೌಲಭ್ಯವನ್ನೂ ನೀಡಲಾಗಿದ್ದು, ಇದು ವ್ಯವಹಾರಕ್ಕೆ ಅತ್ಯಂತ ಸುರಕ್ಷಿತ ಮತ್ತು ಸುಲಭದ ವಿಧಾನವಾಗಿದೆ. ಹೋಬಳಿಯಂತಹ ಕೇಂದ್ರಗಳಲ್ಲಿ ಕದಂಬ ಸೌಹಾರ್ದ ಸಹಕಾರಿಯ ಕೇಂದ್ರಗಳನ್ನು ತೆರೆದು ಗ್ರಾಮೀಣರಿಗೂ ಈ ಎಲ್ಲ ಸೌಲಭ್ಯಗಳನ್ನು ಒದಗಿಸುವ ಯೋಜನೆ ಇದೆ.

'ಮೈಕ್ರೋ ಏಟಿಎಮ್' ಸೇವೆ ಕದಂಬದ ವಿಶೇಷಗಳಲ್ಲೊಂದು. ಸಣ್ಣ ಹಳ್ಳಿಗಳು, ಸಣ್ಣ ವ್ಯಾಪಾರ, ಮಾರುಕಟ್ಟೆ ಸ್ಥಳಗಳಿಗೆ ಇಂತಹ 'ಮೈಕ್ರೋ ಏಟಿಎಂ' ಸ್ಥಾಪಿಸಲು ಕದಂಬದೊಂದಿಗೆ ಸೇವಾ ಪಾಲುದಾರರಾಗಬಹುದು.



## ಹಸಿರು ಪರಿಸರ

ನಿತ್ಯ ಹೊಸತನದ ವಿದ್ಯೆ ಪ್ರಕೃತಿಗೆ ಸಹಜವಾದದ್ದು. ನಮಗೂ ಆ ಹಂಬಲ ಸಹಜ. ಆದರೆ ನಮ್ಮ ಹೊಸತನದ ಪ್ರಯತ್ನದಲ್ಲಿ ಪರಿಸರ ಸ್ನೇಹಿ ಆದದ್ದು ಕಡಿಮೆ. ದಟ್ಟ ಹಸಿರಿನ ಸಹ್ಯಾದ್ರಿಯ ಸೆರಗಿನಲ್ಲಿರುವ ಪ್ರದೇಶದಲ್ಲೂ ಪರಿಸರದ ಕಾಳಜಿ ಅಗತ್ಯವಾಗಿದೆ ಎಂದರೆ ನಮ್ಮ ಪರಿಸರ ಪ್ರದೂಷಣದ ಪ್ರಮಾಣ ಎಂಥದ್ದಿರಬಹುದು! ಈಗೀಗ ಕಸದ ಪ್ರಮಾಣವನ್ನು ಟನ್ನುಗಳ ಅಳತೆಯಲ್ಲಿ ಹೇಳಲಾಗುತ್ತಿದೆ. ಉರುವಲಿಗಾಗಿಯೇ ಬರಿದಾದ ಕಾಡು ಎಷ್ಟಿರಬಹುದು? ಆಲೋಚಿಸಿದರೆ ಇಷ್ಟು ಕಾಡು ಉಳಿದದ್ದೇ ಹೆಚ್ಚು ಎನಿಸುತ್ತದೆ. ಮರ ಕಡಿದಾಗಲೆಲ್ಲ ಹೊಸ ಮರಗಳನ್ನು ಬೆಳೆಸಬೇಕೆಂದು ಹೇಳುತ್ತೇವೆ. ಆದರೆ ಕಡಿದದ್ದು ಸಾವಿರ ಮರ, ನೆಟ್ಟಿದ್ದು ಒಂದು ಸಸಿ!

ಒಲೆಗೆ ಸೌದೆ ಬಳಸುವುದು ಅನಿವಾರ್ಯ. ಎಷ್ಟು ಸೌದೆ ಬಳಸುವುದು ಎನ್ನುವ ಪ್ರಶ್ನೆ ಮೊದಲು ನಮ್ಮನ್ನು ಕಾಡಲೇ ಇಲ್ಲ. ಒಲೆಯ ವಿನ್ಯಾಸ, ಸುಡುವ ಸೌದೆಯ ಪ್ರಮಾಣವನ್ನು ನಿರ್ಧರಿಸುತ್ತದೆ ಎನ್ನುವ ವಿಷಯ ತಿಳಿಯುವಾಗಲೇ ಸಾಕಷ್ಟು ತಡವಾಗಿತ್ತು. ಆಗಲೂ ಅದನ್ನು ಎಲ್ಲರಿಗೆ ತಿಳಿಸುವ ಪ್ರಯತ್ನ ಮಾಡಿದೆವು. ಹಳ್ಳಿಯ ಬಡವರ ನಡುವೆಯೇ ಕದಂಬದ ಹೆಚ್ಚಿನ ಕೆಲಸಗಳು ನಡೆಯುತ್ತಿದ್ದುದರಿಂದ ಅದು ಅತಿ ಅಗತ್ಯದ ಕೆಲಸವಾಗಿತ್ತು. ಕಡಿಮೆ ಕಟ್ಟಿಗೆ ಉಪಯೋಗಿಸುವ ಸೌದೆ ಸ್ಟೌ ಬಳಕೆಯನ್ನು ವಿವರಿಸಿದೆವು. ಅಲ್ಲಲ್ಲಿ ಪ್ರಾತ್ಯಕ್ಷಿಕೆ ನೀಡಿದೆವು. ಸೌದೆ ಸ್ಟೌ ಬಳಕೆಯಿಂದ ಕಟ್ಟಿಗೆಯಲ್ಲಿ ಉಳಿತಾಯ, ಸಣ್ಣ ಸಣ್ಣ ಕಟ್ಟಿಗೆಯ ತುಂಡುಗಳೂ ಬಳಕೆಗೆ ಬರುತ್ತವೆ. ಹೊಗೆ ನಿಯಂತ್ರಣವಾಗುತ್ತದೆ. ಅಡುಗೆಯ ರುಚಿಯೂ ಹೆಚ್ಚುತ್ತದೆ. ಹೊಗೆ ಇಲ್ಲದ ಮನೆ ಆರೋಗ್ಯಕ್ಕೆ ಪೂರಕ. ಹೀಗೆ "ಸಾಧನ ಒಂದು ಸೌಕರ್ಯ ಹಲವು" ಎನ್ನುವುದನ್ನು ತಿಳಿಸಿ ಹೇಳಿದಾಗ ಹೆಚ್ಚಿನವರು ಅದನ್ನು ಅಳವಡಿಸಿಕೊಂಡರು. ಮೋದಿ ಸರಕಾರದ ಉಜ್ವಲಾ ಯೋಜನೆ ಹೊಗೆಯಿಲ್ಲದ ಅಡುಗೆಗೆ ಅವಕಾಶ ನೀಡುತ್ತಿದೆ. ಆದರೆ, ಉಜ್ವಲಾ ಯೋಜನೆ ಎಲ್ಲ ಬಡವರ ಅಡುಗೆ ಮನೆಯನ್ನು ತಲುಪುವವರೆಗೂ ಸೌದೆ ಸ್ಟೌ ಉರಿಯುತ್ತಿರುತ್ತದೆ.!!

## ಕೊಳೆಯಲಾರದ್ದು ಮಣ್ಣಿಗೆ ಕ್ಯಾನ್ಸರ್ ಆಗುತ್ತದೆ


ಮಣ್ಣಿನ ಮತ್ತು ನೀರಿನ ಕುರಿತಂತೆ ಕಾಳಜಿವಹಿಸಲು ತೊಡಗಿದಾಗ ಅನೇಕ ಸಂಗತಿಗಳು ನಮ್ಮ ಗಮನಕ್ಕೆ ಬಂದವು. ನಮ್ಮ ಅನುಕೂಲಕ್ಕಾಗಿ ವ್ಯಾಪಕವಾಗಿ ಬಳಸುತ್ತಿರುವ ಪ್ಲಾಸ್ಟಿಕ್ ಕೊಳೆಯಲಾರದ ಕಸ. ಇದಕ್ಕೆ ನಿರ್ವಹಣೆಗಿಂತ ನಿಯಂತ್ರಣವೇ ಹೆಚ್ಚು ಸೂಕ್ತವಾದದ್ದು. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ಅನಿವಾರ್ಯತೆಯನ್ನು ಹೇಳುತ್ತ ಅದಕ್ಕಾಗಿ ಅನುಸರಿಸಬಹುದಾದ ಉಪಾಯಗಳನ್ನೂ ಹೇಳಿದೆವು. ಅರಿವೆಯ ಚೀಲದ ಬಳಕೆ ಮತ್ತೆ ಆರಂಭವಾದಾಗ ಕರಕುಶಲ ವಸ್ತುಗಳಲ್ಲಿ ಒಂದಾದ ಚೀಲಗಳ ತಯಾರಿಕೆಗೆ ಒತ್ತು ಬಂತು. ಕೈಯಲ್ಲಿ ಹಿಡಿದುಕೊಂಡು ಹೋಗುವ ಚೀಲ ವಸ್ತುಗಳನ್ನು ಇಟ್ಟುಕೊಳ್ಳುವ ಸಾಧನ ಮಾತ್ರವಾಗದೆ ಅದಕ್ಕೊಂದು ಸೌಂದರ್ಯದ ಮೌಲ್ಯವೂ ಪ್ರಾಪ್ತವಾಯಿತು. ತಿನ್ನುವ ಚಾಕಲೇಟ್‌ಗೆ ಸುತ್ತಿರುವುದು ಪ್ಲಾಸ್ಟಿಕ್, ಕುಡಿಯುವ ತಂಪು ಪಾನೀಯಗಳನ್ನು ಇಟ್ಟಿರುವುದೇ ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ. ಕೃಷಿಗೆ ಬಳಸುವ ರಾಸಾಯನಿಕ ಗೊಬ್ಬರಗಳು, ಔಷಧಗಳು ಪ್ಲಾಸ್ಟಿಕ್ ಹೊದಿಕೆಯಲ್ಲಿಯೇ ಇರುತ್ತವೆ. ಬಡವರಿಗೆ ಪ್ಲಾಸ್ಟಿಕ್ ಕೊಡ ತಂಬಿಗೆಗಳು ಕರಡಿಗೆ ಮುಂತಾದವು ಅನುಕೂಲದ ವಸ್ತುಗಳಾಗಿವೆ. ಇಲ್ಲೆಲ್ಲ ನಿಷೇಧಕ್ಕಿಂತ ನಿಯಂತ್ರಣಕ್ಕೆ ಒತ್ತುಕೊಡಲಾಯಿತು. ಹಾಗಾಗಿ ಗೊಬ್ಬರದ ಚೀಲ ಅನೇಕರ ಮನೆಯಲ್ಲಿ ಚಾಪೆಯಾಗಿದೆ, ಔಷಧದ ಕ್ಯಾನು ಒಣಗಿದ ಧಾನ್ಯವನ್ನು ಒಪ್ಪವಾಗಿಟ್ಟಿದೆ. ಆದರೂ ಪ್ಲಾಸ್ಟಿಕ್ ಮಣ್ಣಿಗೆ ವಿಷವೇ ಆಗಿದೆ. ಸೇದುವ ಸಿಗರೇಟ್ ಪ್ಯಾಕಿನ ಮೇಲೆ "ಸಿಗರೇಟು ಸೇವನೆ ಆರೋಗ್ಯಕ್ಕೆ ಹಾನಿಕರ" ಎನ್ನುವ ಎಚ್ಚರಿಕೆಯ ಬರಹವಿರುವಂತೆ ಪ್ಲಾಸ್ಟಿಕ್ ವಸ್ತುಗಳ ಮೇಲೆ "ಕೊಳೆಯಲಾರದ ಪ್ಲಾಸ್ಟಿಕ್ ಭೂಮಿಗೆ ಕ್ಯಾನ್ಸರ್" ಎನ್ನುವ ಬರಹ ಬೇಕಲ್ಲವೆ!

## ಎಲ್ಲರ ಆಸ್ತಿ ಯಾರದೂ ಅಲ್ಲ

ಮರಗಿಡ ನಿರ್ವಹಣೆ ಎನ್ನುವುದೊಂದು ಮಲೆನಾಡಿನವರಿಗೆ ಹೇಳಿಕೊಡುವ ವಿಷಯವೇ ಅಲ್ಲ. ತುಳಿಯುವ ಗರಿಕೆಯಿಂದಾರಂಭಿಸಿ ಪ್ರತಿ ಹುಲ್ಲು, ಬಳ್ಳಿ, ಗಿಡ ಮರಗಳ ನೂರು ಉಪಯೋಗಗಳನ್ನು ಬಲ್ಲವರು. ಮನೆಯ ಹಿತ್ತಿಲನ್ನು ಹಸಿರಿನಿಂದ ತುಂಬಿದವರು. ಅಂಗಳದ ಅಂಚಿನಲ್ಲೂ ಹತ್ತಾರು ಗಿಡ ಹಚ್ಚಿದವರು. ತೋಟ ಬೆಟ್ಟಗಳನ್ನು ಚೆನ್ನಾಗಿಯೇ ಇಟ್ಟುಕೊಂಡವರು. ಇಂಥವರಿಗೆ ಕಾಡಿನ ಬಗ್ಗೆ ಕಥೆ ಹೇಳಬೇಕೆ! ವನ ಸಂಪತ್ತಿನ ರಕ್ಷಣೆಗೆ ಜಾಗೃತಿ ಮೂಡಿಸಬೇಕೆ ಎಂಬ ಪ್ರಶ್ನೆ ಸಹಜ.

ತೋಟ ಬೆಟ್ಟಗಳು ನಮ್ಮದು, ಕಾಡು ಸರಕಾರದ್ದು ಎಂದಾದಾಗ ಇಡೀ ಪರಿಸರದ ಮೇಲಿದ್ದ ಸಾಮಾಜಿಕ ಮಾಲಿಕತ್ವ ಕಳೆದುಹೋಯಿತು. ದೇವರ ಕಾಡುಗಳನ್ನು ಸಾಕಿಕೊಂಡು ಬಂದ ಪರಿಸರ ಪ್ರೇಮಿಗಳಿಗೆ, ರಸ್ತೆಯಂಚಿನ ಮರವನ್ನು ಯಾರೋ ಕಡಿಯುತ್ತಿದ್ದಾಗ ಯಾಕೆ ಕಡಿಯುತ್ತೀಯೆ ಎಂದು ಕೇಳುವ ಅಧಿಕಾರ ತಪ್ಪಿಹೋಯಿತು.

ಇದು ಸರಕಾರದ್ದು ನಾನು ಕಡಿಯುತ್ತೇನೆ, ಕೇಳಲಿಕ್ಕೆ ನೀನ್ಯಾರು ಎನ್ನುವ ಉತ್ತರ ಸಜ್ಜನರ ಸಾಮಾಜಿಕ ಕಾಳಜಿಯನ್ನು ಕಳೆದಿದೆ. ಆದ್ದರಿಂದ ಸರಕಾರದ ಆಸ್ತಿ ಎಲ್ಲರ ಆಸ್ತಿ ಎನ್ನುವುದನ್ನು ಮತ್ತೊಮ್ಮೆ ರೂಢಿಸುವ ಅಗತ್ಯವಿದೆ. ಈ ದೃಷ್ಟಿಯಿಂದ ಮರಗಿಡ ನಿರ್ವಹಣೆಯ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.



# ಮಳೆಯೇ ನೀರಿನ ಮೂಲ

ನೀರು ಎಂದ ತಕ್ಷಣ ನಮಗೆ ಬೋರು, ಬಾವಿ, ಹೊಳೆ, ಕೆರೆಗಳೆಲ್ಲ ನೆನಪಾಗುತ್ತವೆ. ಆದರೆ ಅವೆಲ್ಲ ತುಂಬುವುದು ಮಳೆನೀರಿನಿಂದಲೇ. ಭೂಮಿಯ ಮೇಲೆ ನೀರು ಸಿಗಲಿಲ್ಲವೆಂದರೆ ಬೋರ್‌ವೆಲ್ ತೋಡುವುದೊಂದೇ ದಾರಿ ಎಂದುಕೊಳ್ಳುತ್ತೇವೆ.
ಅಂತರ್ಜಲವನ್ನು ಬರಿದು ಮಾಡಿದರೆ ಭವಿಷ್ಯ ಬೆಳಗುವುದಿಲ್ಲ. ಆದ್ದರಿಂದ ಮಳೆಯೇ ನೀರಿನ ಮೂಲ ಎನ್ನುವುದನ್ನು ಮತ್ತೆ ಮತ್ತೆ ಹೇಳಬೇಕಾದ ಅನಿವಾರ್ಯತೆ ಬಂದಿದೆ. ಭೂಮಿಗೂ ಮಳೆಗೂ ಇರುವ ಸಂಬಂಧವನ್ನು ತಿಳಿಸುವ ಸಲುವಾಗಿ 'ಬಾನು ಬುವಿಯನ್ನು ಬೆಸೆಯುವ ಕಾರ್ಯಕ್ರಮ'ಗಳನ್ನು ಏರ್ಪಡಿಸಿದೆವು.

ಮಳೆ ನೀರನ್ನಾಧರಿಸಿ ಕೆರೆಗಳ ನಿರ್ವಹಣೆ ಮಾಡುವುದು, ಚಾವಣಿ ನೀರಿನ ಸಂಗ್ರಹ, ಇಂಗು ಗುಂಡಿಗಳ ರಚನೆ, ತೆರೆದ ಬಾವಿಗಳನ್ನೂ ಬೋರ್‌ವೆಲ್‌ಗಳನ್ನೂ ಮರುಪೂರಣ ಮಾಡುವ ಸಾಧ್ಯತೆಗಳ ಬಗ್ಗೆ ಕರಪತ್ರಗಳ ಮೂಲಕ ತಿಳಿಸಿದೆವು. ತಜ್ಞರೊಡನೆ ಸಂವಾದ ಏರ್ಪಡಿಸಿ ಹೊಸ ತಾಂತ್ರಿಕತೆಯ ಕುರಿತು ಜಾಗೃತಿ ಮೂಡಿಸಿದೆವು. ಪರಿಸರ ಸಂರಕ್ಷಣೆಯ ಕಥೆಯನ್ನಾಧರಿಸಿದ ಯಕ್ಷಗಾನ ಪ್ರದರ್ಶನಗಳನ್ನು ಏರ್ಪಡಿಸಿದೆವು. ಸಿದ್ದಾಪುರ, ಶಿರಸಿ ತಾಲೂಕುಗಳಲ್ಲಿ ಕದಂಬ ಪ್ರೇರಿತ ಸ್ವಸಹಾಯ ಸಂಘಗಳ ಮೂಲಕ ಜಲಾನಯನ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸಿದೆವು.

ವರ್ಷದಲ್ಲಿ ನೂರಿಂಚು ಮಳೆ ಬೀಳುವ ಪ್ರದೇಶದಲ್ಲೂ ಬೇಸಿಗೆಯಲ್ಲಿ ಕುಡಿಯುವ ನೀರಿನ ಕೊರತೆಯಾಗುತ್ತದೆ ಎನ್ನುವುದನ್ನು ಕಣ್ಣಾರೆ ಕಂಡ ನಮಗೆ ನೀರಿನ ಬಗೆಗಿನ ಜಾಗೃತಿಯೇ ಭವಿಷ್ಯದ ಕಾಳಜಿ ಎನ್ನಿಸಿದೆ.
'ಮೂರನೆಯ ಮಹಾಯುದ್ಧವಾಗುವುದಾದರೆ ನೀರಿಗಾಗಿಯೇ ಆಗುತ್ತದೆ' ಎಂಬ ಹೇಳಿಕೆ ಪ್ರಸಿದ್ಧವಿದೆ. ನೀರಿಲ್ಲದಿದ್ದರೆ ಮನೆ ಮನೆಯಲ್ಲೂ ಪ್ರತಿದಿನವೂ ಯುದ್ಧದ ಪರಿಸ್ಥಿತಿ ಇರುತ್ತದೆ. ನೀರು ಕೇವಲ H2O ಅಲ್ಲ, ಅದು "ಜೀವಜಲ".





## ನೋವಿಗೊಂದು ನೆರವು

ಮನುಷ್ಯ ಸಮಾಜದಲ್ಲಿ ಸೇವೆ ಎನ್ನುವ ವಿಷಯವೇ ಕ್ಲೀಷೆ ಎಂದವರಿದ್ದಾರೆ. ಒಬ್ಬನು ತನಗೆ 'ಬೇರೆಯವರ ಸೇವೆ ಮಾಡುವ ಅವಕಾಶ ಬೇಕು ಎಂದರೆ ಆ ಬೇರೆಯವರು ಇವನಿಗಾಗಿ ಅಸಹಾಯಕರಾಗಬೇಕು ಎಂದು ಬಯಸಿದ ಹಾಗೆ' ಎನ್ನುವ ವಿತಂಡವಾದವಿದೆ. ವಾಸ್ತವ ನಮ್ಮೆದುರಿದೆ. ದೈವ ಸೃಷ್ಟಿಯಲ್ಲಿ ಅನೇಕರಿಗೆ ದೈಹಿಕ ಅಸಹಾಯಕತೆ, ಮಾನಸಿಕ ಸಮಸ್ಯೆಗಳಿವೆ. ಇನ್ನನೇಕರಿಗೆ ಅನಿರೀಕ್ಷಿತ ಆಘಾತಗಳು ಬದುಕುವ ಸಾಮರ್ಥ್ಯವನ್ನೇ ಕಸಿದುಕೊಳ್ಳುತ್ತವೆ. ಆಗೆಲ್ಲ ಸಂಬಂಧಿಕರು, ಸುತ್ತಲಿನ ಸಮಾಜ ಸಹೃದಯಿಯಾಗಿ ಸ್ಪಂದಿಸದಿದ್ದರೆ ಹೇಗೆ! ನೋವಿನಲ್ಲಿರುವವರಿಗೆ ನೆರವಾಗುವುದು ಮಾನವೀಯತೆ. ಆದರೆ ಅಸಹಾಯಕನಾದವನೊಬ್ಬ ಸಮಾಜದ ಕರುಣೆಗಾಗಿ ಕಾಯುತ್ತಿರಬೇಕು ಎನ್ನುವುದೂ ಅಭಿಮಾನಕ್ಕೆ ಹೊಂದುವ ಮಾತಲ್ಲ. ಆ ಎಲ್ಲ ಅನಿರೀಕ್ಷಿತಗಳನ್ನು ಎದುರಿಸುವುದಕ್ಕೂ ಒಂದು ಯೋಜನೆ ಇದ್ದರೆ..? ಅಸಹಾಯಕ ಸಂದರ್ಭದಲ್ಲೂ ಅಭಿಮಾನದಿಂದ ಬದುಕಬಹುದು. ಆ ನಿಟ್ಟಿನಲ್ಲಿ ಕದಂಬ ವಿವಿಧ ಯೋಜನೆಗಳನ್ನೂ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿತು.

ಜನ ಪ್ರತಿನಿಧಿಯೊಬ್ಬ ಸಂವೇದನಶೀಲನಾಗಿದ್ದರೆ ಎಲ್ಲರ ನೋವೂ ಅವನದೇ ಆಗುತ್ತವೆ. ಬಡ ಕೃಷಿಕರೊಬ್ಬರು ಒಂದು ದಿನ ಮುಂಜಾನೆಯೇ ನನ್ನ ಮನೆಯೆದುರು ಕಣ್ಣೀರನ್ನು ಕೈಯಲ್ಲಿ ಹಿಡಿದು ನಿಂತಿದ್ದರು. ಅವರ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕೊನೆ ಗೌಡನು (ಅಡಕೆಯ ಮರದ ಮೇಲೆ ಕೆಲಸ ಮಾಡುವವ) ಮರದ ಮೇಲಿನಿಂದ ಬಿದ್ದು ಸೊಂಟ ಮುರಿದುಕೊಂಡಿದ್ದ. ಅವನಿಗೆ ಚಿಕಿತ್ಸೆ ಕೊಡಿಸುವಷ್ಟು ಸಾಮರ್ಥ್ಯ ಅವರಲ್ಲಿರಲಿಲ್ಲ. ನಾನೇನಾದರೂ ಸಹಾಯ ಮಾಡಬಹುದೆಂದು ನಿರೀಕ್ಷಿಸಿ ನನ್ನ ಮನೆಗೆ ಬಂದಿದ್ದರು. ಅವರ ಮಾನವೀಯ ಕಾಳಜಿ, ಆರ್ಥಿಕ ಅಸಹಾಯಕತೆ ಮನ ಕಲಕಿತು. ಹೀಗೆ ಬಂದವರಿಗೆಲ್ಲ ಕೈಯಿಂದ ಒಂದಷ್ಟು ಕೊಟ್ಟು ಸಾಗಹಾಕುವ ಅಥವಾ ಸರಕಾರದಿಂದ ಏನನ್ನಾದರೂ ಕೊಡಿಸುವ ಎಂದು ಆಸೆ ತೋರಿಸಿ ಕಳಿಸುವ ರಾಜಕಾರಣದ ಶೈಲಿ ನನ್ನದಲ್ಲ. ಶತಮಾನಗಳಿಂದ ಅಸಂಘಟಿತ ಕಾರ್ಮಿಕ ವಲಯ ಎದುರಿಸುತ್ತ ಬಂದಿರುವ ಈ ರೀತಿಯ ಸಮಸ್ಯೆಗೆ ಒಂದು ಶಾಶ್ವತ ಪರಿಹಾರದ ದಾರಿ ಹುಡುಕಲೇಬೇಕೆಂದು ಆಲೋಚಿಸಿದಾಗ ಹೊಳೆದದ್ದು ಅಪಘಾತ ವಿಮೆ, ಆರೋಗ್ಯ ವಿಮೆ ಯೋಜನೆಗಳು. ಇದೀಗ ಕೇಂದ್ರ ಸರಕಾರ ಈ ಎಲ್ಲ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ.

# ಕದಂಬ ಜೀವನ ಸುರಕ್ಷೆ



ಕೃಷಿ ಕಾರ್ಯಕ್ಕೆ ಹತ್ತಾರು ರೀತಿಯ ಕೌಶಲಗಳು ಬೇಕು. ಉತ್ತುವ, ಬಿತ್ತುವ, ಕುಂಟೆ ಹೊಡೆಯುವ, ಕಡಿಯುವ, ಕತ್ತರಿಸುವ, ಅಗೆಯುವ, ಹುಗಿಯುವ.. ಒಂದೇ ಎರಡೇ ಎಲ್ಲ ಕೌಶಲಗಳೂ ಇದ್ದಾಗ ಕೃಷಿಕ/ಕೃಷಿ ಕಾರ್ಮಿಕನಾಗಬಹುದು. ಅಂತೆಯೇ ಎಲ್ಲ ರೀತಿಯ ಆಯುಧಗಳ ಬಳಕೆ ಕೂಡ ಇಲ್ಲಿ ಅತಿ ಅಗತ್ಯ. ಕತ್ತಿ, ಕೊಡಲಿ, ಗುದ್ದಲಿ, ಪಿಕಾಸಿ, ಹಾರೆ, ಮಚ್ಚು, ನೇಗಿಲು ಹೀಗೆ ಪಟ್ಟಿ ಬೆಳೆಯುತ್ತದೆ. ಇವೆಲ್ಲದರ ಬಳಕೆಯಲ್ಲಿ ಪರಿಣತರಾದವರಿಗೂ ಆಕಸ್ಮಿಕ ಅಪಘಾತಗಳಾಗುವುದಿದೆ. ಕೃಷಿಯ ಅವಿಭಾಜ್ಯ ಅಂಗವಾದ ಪಶುಸಂಗೋಪನೆ. ಅಲ್ಲಿಯೂ ಜಾನುವಾರುಗಳ ಸಂಗಡ ವ್ಯವಹರಿಸುವಾಗ ಅಪಾಯದ ಸಂದರ್ಭಗಳು ಎದುರಾಗಬಹುದು. ಇವೆಲ್ಲವುಗಳಿಗಿಂತ ಹೆಚ್ಚು ಅವಧಾನವನ್ನು ಬಯಸುವ ಕೆಲಸ ಮರ ಹತ್ತುವುದು. ಅಡಿಕೆ ಕೃಷಿಯಲ್ಲಿ ಕೊನೆ ಕೊಯ್ಯುವ, ಮಳೆಗಾಲದಲ್ಲಿ ಔಷಧವನ್ನು ಸಿಂಪಡಿಸುವ ಕೆಲಸ ಅತ್ಯಂತ ಅಪಾಯದ ಸಾಹಸವೇ ಸರಿ.

ಆದರೆ ಅನೇಕರು ಅತ್ಯಂತ ಸಹಜವಾಗಿ ಪರಂಪರೆಯಿಂದ ಈ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಈ ಕುಶಲ ಕರ್ಮಿಗಳಲ್ಲಿ ಹೆಚ್ಚಿನವರು ದಿನಗೂಲಿಯವರು. ಸಣ್ಣ ಆಪತ್ತು ಬಂದರೂ ಸಹಿಸಿಕೊಳ್ಳುವುದು ಅವರಿಗೆ ಕಷ್ಟ. ಒಂದು ದಿನ ಅನಾರೋಗ್ಯದಿಂದ ಮಲಗಿದರೂ ದಿನದ ಊಟಕ್ಕೇ ಕಷ್ಟ ಎನ್ನುವ ಸ್ಥಿತಿ. ಕೃಷಿಕರಿಗೂ ಅಪಾಯದ, ಆಘಾತದ ಆತಂಕ ಇದ್ದೇ ಇದೆ. ಅಂಥವರ ಬದುಕಿಗೆ ಭರವಸೆಯಾಗಿ ಆರಂಭವಾದ ವಿಮಾ ಸೌಲಭ್ಯವೇ “ಕದಂಬ ಜೀವನ ಸುರಕ್ಷೆ” ಯೋಜನೆ.

ಮರ ಕಸುಬಿನವರಿಗೆ ರೂ. 1,00,000ದಿಂದ 3,00,000 ಲಕ್ಷದವರೆಗಿನ ವಿಮಾ ಸೌಲಭ್ಯ ಒದಗಿಸುವ ಯೋಜನೆಯಲ್ಲಿ ವಿಮೆಯ ವಾರ್ಷಿಕ ಕಂತು ರೂ. 387/– ಇತರ ಕೃಷಿ ಕಾರ್ಮಿಕರಿಗೆ ರೂ. 25,000ದಿಂದ 1,00,000ದವರೆಗಿನ ವಿಮಾಸೌಲಭ್ಯಕ್ಕೆ ವಾರ್ಷಿಕ ಕಂತು ರೂ. 141/– ಗರಿಷ್ಠ 65 ವರ್ಷದವರೆಗಿನವರಿಗೂ ವಿಮಾ ಪಾಲಿಸಿ ನೀಡಿದ್ದು ಇನ್ನೊಂದು ವಿಶೇಷ. ಈ ಯೋಜನೆಯನ್ನು ಜಾರಿಗೊಳಿಸುವಲ್ಲಿ ನಮಗೆ ನೆರವಾದದ್ದು 'ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ'.

2007ರಲ್ಲಿ ಆರಂಭಿಸಿದ ಈ ಯೋಜನೆಯಲ್ಲಿ ತೊಡಗಿಸಿಕೊಂಡವರು ಅನೇಕರು. ಆರಂಭದ ವರ್ಷದಲ್ಲೇ 710 ಕೃಷಿ ಕಾರ್ಮಿಕರು, 447 ಮರ ಕಸಬುದಾರರು ವಿಮಾ ಪಾಲಿಸಿ ಹೊಂದಿದ್ದರು. 2008ರಿಂದಲೇ ಅಪಾಯವನ್ನು ಎದುರಿಸಿದವರಿಗೆ ವಿಮಾ ಪರಿಹಾರವನ್ನೂ ನೀಡುತ್ತ ಬಂದೆವು.

ಅಪಘಾತದ ಗಂಭೀರತೆ, ಅನಾನುಕೂಲದ ಪ್ರಮಾಣಗಳನ್ನು ಗಮನಿಸಿ ನೀಡಿದ ಪರಿಹಾರದ ಮೊತ್ತ ರೂ. 2000ದಿಂದ 36000ದ ವರೆಗೂ ಇದ್ದವು. 'ಆರೋಗ್ಯಕ್ಕೆ ವಿಮೆ, ಅಪಘಾತಕ್ಕೆ ಅನುಕಂಪ' ಎನ್ನುವ ನೆಲೆಯಲ್ಲಿ ಕೆಲಸ ಮಾಡಿದ ಮಾನವೀಯ ಅನುಭೂತಿ ಕದಂಬಕ್ಕೆ.

ಈಗ ಶ್ರೀ ನರೇಂದ್ರ ಮೋದಿಯರ ನೇತೃತ್ವದ ಸರಕಾರ ಜೀವನ ಸುರಕ್ಷೆಗೆ ಬೇಕಾಗಿ ಎಲ್ಲ ನಾಗರಿಕರಿಗೂ ಅನ್ವಯವಾಗುವಂತೆ ವಿಮಾ ಯೋಜನೆಗಳನ್ನು ಜಾರಿ ಮಾಡಿದೆ. ಸರಕಾರಗಳು ಈ ದಿಸೆಯಲ್ಲಿ ಆಲೋಚಿಸುವ ಮೊದಲೇ ಕದಂಬ ಇಂತಹ ಯೋಜನೆಯನ್ನು ಜಾರಿ ಮಾಡಿತ್ತು ಎನ್ನುವುದು ಈಗ ಇತಿಹಾಸ.



# ನೆರೆಯಲ್ಲಿ ನೆರವು

ಮಳೆ ಭೂಮಿಗೆ ವರ! ಆದರೆ ಒಮ್ಮೊಮ್ಮೆ ಮುನಿಸಿಕೊಂಡರೆ ಅದು ಶಾಪವೂ ಆಗುತ್ತದೆ. ಮಲೆನಾಡು ಕರಾವಳಿಗಳಲ್ಲಿ ಮಳೆಗಾಲ ಏನು ಹೊಸ ಸಮಸ್ಯೆ ತಂದೊಡ್ಡುತ್ತದೆ ಎಂದು ಹೇಳುವುದೇ ಕಷ್ಟ. ಕಾರವಾರದ ಸಮೀಪ ಕಡವಾಡದಲ್ಲಿ ಭಾರಿ ಮಳೆಗೆ ಗುಡ್ಡವೇ ಕುಸಿದು ಬಿತ್ತು. ರಾತ್ರಿ ಬೆಚ್ಚನ ಮನೆಯಲ್ಲಿ ಮಲಗಿದ್ದವರು ಎಚ್ಚರಾಗುವುದರೊಳಗೆ ಮಣ್ಣೊಳಗೆ ಸಮಾಧಿಯಾಗಿದ್ದರು. ಬದುಕಿದ್ದವರು ಎಲ್ಲವನ್ನೂ ಕಳೆದುಕೊಂಡಿದ್ದರು. ನಿಲ್ಲುವುದಕ್ಕೆ ನೆಲೆಯಿಲ್ಲದೆ ಸುರಿಯುವ ಮಳೆಯಲ್ಲಿ ನಿಂತಿದ್ದರು. ನಿಲ್ಲದ ಮಳೆಯಲ್ಲಿ ಅವರ ಕಣ್ಣೀರು ಕಾಣುತ್ತಿರಲಿಲ್ಲ.

ಅವರ ಸಂಕಷ್ಟದಲ್ಲಿ ಸಹಾಯಕ್ಕೊದಗಿದವರೆಲ್ಲ ಕಣ್ಣೊರೆಸಿಕೊಳ್ಳುತ್ತಿದ್ದರು. ಸಂತ್ರಸ್ತರಿಗೆ ಕೈಲಾದ ಸಹಾಯ ಮಾಡಬೇಕೆಂದು ಬಯಸಿ ಕದಂಬ ಮುಂದಾಯಿತು. ತಕ್ಷಣಕ್ಕೆ ಬೇಕಾದ ಬಟ್ಟೆ ಆಹಾರ ಔಷಧಗಳನ್ನು ಒದಗಿಸುವಲ್ಲಿ ಪ್ರಯತ್ನಿಸಿತು. ಸುತ್ತಮುತ್ತಲಿನ ಊರುಗಳಿಂದ ಸಂಘದ ಸ್ವಯಂಸೇವಕರು, ಕಾರ್ಯಕರ್ತರು ಮುಂದಾಗಿ ಬಂದರು. ಅಕ್ಕಪಕ್ಕದ ಮಹಿಳೆಯರು ತಮ್ಮ ಮನೆಗೆಲಸ ಬಿಟ್ಟು ಸಂತ್ರಸ್ತರ ನೆರವಿಗೆ ಧಾವಿಸಿ ಬಂದರು. ಇಂತಹ ಸಂದರ್ಭದಲ್ಲಿ ಸರಕಾರ ಸಮಾಜ ಎಲ್ಲರೂ ಸಹಕರಿಸಿದರೂ ಸಾಲದು ಎನ್ನುವ ಸ್ಥಿತಿ ಇರುತ್ತದೆ. ಆದರೆ, ಸರಕಾರಕ್ಕೆ ಸುದ್ದಿ ತಲುಪಿ ಎದ್ದು ಬರುವಾಗ ಸಾಕಷ್ಟು ತಡವಾಗಿತ್ತು!

ವಸ್ತುಗಳನ್ನು ನೀಡುವುದರ ಸಂಗಡ ಸಂತ್ರಸ್ತರ ಪಕ್ಕದಲ್ಲಿ ನಿಂತು 'ನಿಮ್ಮೊಂದಿಗೆ ನಾವಿದ್ದೇವೆ' ಎನ್ನುವ ಪ್ರೀತಿಯ ಒಂದು ಮಾತು ಅವರ ಧೈರ್ಯವನ್ನು ಹೆಚ್ಚಿಸುತ್ತದೆ. ಇಷ್ಟು ದೊಡ್ಡ ಸಮಾಜದಲ್ಲಿ ಯಾವೊಬ್ಬ ವ್ಯಕ್ತಿಗೂ 'ಕಷ್ಟದಲ್ಲಿ ನಾನು ಒಂಟಿ' ಎನ್ನಿಸದಂತೆ ನಡೆದುಕೊಳ್ಳುವುದೇ ಸಾಮಾಜಿಕ ಔದಾರ್ಯಕ್ಕೆ ಪ್ರಮಾಣ.

ಅಂದಿನ ದಿನಗಳಲ್ಲಿ ತುಂಗಭದ್ರೆಯೂ ಮೈದುಂಬಿ ಮಂತ್ರಾಲಯವನ್ನು ಮುಳುಗಿಸಿತ್ತು. ನಿತ್ಯ ಪೂಜೆಯೂ ಅಸಾಧ್ಯ ಎನ್ನುವಷ್ಟು ಆರ್ಭಟಿಸಿತು. ಭಕ್ತ ಲೋಕ ಆತಂಕಕ್ಕೀಡಾದಾಗ ಶ್ರದ್ಧೆ ಕೈಹಿಡಿಯಿತು. ತುಂಗೆ ಶಾಂತವಾದರೂ ನೆರೆಗೆ ಸಿಕ್ಕವರ ಕಷ್ಟ ದೊಡ್ಡದಿತ್ತು. ಆ ಸಂದರ್ಭಕ್ಕೆ ದೇಶದ ಬೇರೆ ಬೇರೆ ಕಡೆಗಳಿಂದ ನೆರವು ಹರಿದು ಬಂತು. ಅದರಲ್ಲಿ ಕದಂಬದ ಅಳಿಲು ಸೇವೆಯೂ ಇತ್ತು. ಒಂದಷ್ಟು ಬಟ್ಟೆ, ಅಕ್ಕಿ, ಆಹಾರ ಪದಾರ್ಥಗಳನ್ನು ಕಟ್ಟಿಕೊಂಡು ಕದಂಬದ ತಂಡ ಮಂತ್ರಾಲಯವನ್ನೂ ಸೇರಿ ಶ್ರದ್ಧೆಯ ಸೇವೆ ಸಲ್ಲಿಸಿತು.



# ಮರದ ನೆರಳಿನ ಅಮರ ವಿದ್ಯೆ

ಕೃಷಿ ಕೇವಲ ಕಸುಬಲ್ಲ ಅದು ನಮ್ಮ ಸಂಸ್ಕೃತಿ. ಕೃಷಿ ಜೀವದಾಯಕ ವಿದ್ಯೆ. ಕೃಷಿ ಮತ್ತು ಕೃಷಿ ಅವಲಂಬಿತ ಉದ್ಯೋಗಗಳೇ ನಮ್ಮನ್ನು ಬದುಕಿಸಿದ್ದು. ನಮ್ಮೆಲ್ಲ ಹಬ್ಬಗಳೂ ಕೃಷಿಯ ಚಟುವಟಿಕೆಗಳನ್ನೂ ಸುಗ್ಗಿಯನ್ನೂ ಅವಲಂಬಿಸಿವೆ. ನಮ್ಮ ಹಾಡುಗಳು, ಗಾದೆಗಳು ಎಲ್ಲದರಲ್ಲಿ ಕೃಷಿಯ ವರ್ಣನೆ, ಸುಗ್ಗಿಯ ಸೂಚನೆಗಳೇ ಇವೆ. ಬಣ್ಣಗಳ ಹೆಸರು ಹೇಳುವಾಗಲೂ ಬೆಳೆಯುತ್ತಿರುವ ಬೆಳೆಗಳದೇ ಹೋಲಿಕೆ. ಅಡಕೆಯ ಬಣ್ಣ, ತೊಗರಿನ ಕೆಂಪು, ಬಾಳೆ ಹಸಿರು, ಹಂಬಾಳೆಯ ಬಣ್ಣ, ಕಲ್ಲಂಗಡಿಯ ಕೆಂಪು ಎನ್ನುವುದಿದೆ. ಅಂದಾಜಿನ ಅಳತೆಯನ್ನು ಹೇಳುವಾಗ ಒಂದಡಕೆಯಷ್ಟು, ಒಂದು ಯಾಲಕ್ಕಿಯಷ್ಟು, ಕರಿಮೆಣಸಿನಷ್ಟು, ಗುಲಗುಂಜಿಯಷ್ಟು, ಅಕ್ಕಿ ಕಾಳಿನಷ್ಟು, ಹೆಸರು ಬೇಳೆಯಷ್ಟು ಎಂದು ಸೂಚಿಸುವುದಿದೆ. ದೀಪಾವಳಿಯ ಸಂಭ್ರಮದಲ್ಲಿ ಬಣ್ಣಕ್ಕೆ ಶೇಡಿ ಕೆಮ್ಮಣ್ಣುಗಳಾದರೆ, ಅಲಂಕಾರಕ್ಕೆ ಬಾಳೆಯ ಗಿಡಗಳು, ಚಿಗುರಿ ನಿಂತ ಕಬ್ಬು, ಅಡಕೆಯ ಸಿಂಗಾರ, ಅಂಬಾಡಿ ಎಲೆಗಳು. ಒಟ್ಟಿನಲ್ಲಿ ನಮ್ಮ ಆಹಾರ, ಔಷಧ, ಅಲಂಕಾರ, ಆಸ್ತಿ, ಎಲ್ಲದಕ್ಕೂ ಕೃಷಿಯೇ ಮೂಲ.



ಕೃಷಿ ಒಂದು ಅಧ್ಯಾತ್ಮ ವಿದ್ಯೆ. ಬೀಜವೊಂದನ್ನು ಸಂರಕ್ಷಿಸಿ ಅದಕ್ಕೆ ವಿಕಾಸದ ಅವಕಾಶ ನೀಡಿ, ಅದು ಗಿಡವಾಗಿ ಮರವಾಗಿ ಹೆಮ್ಮರವಾಗುವ ಬಗೆಯನ್ನು ಬೆರಗಿನಿಂದ ನೋಡುವ ರೈತ, ಅದರ ನೆರಳಿನಲ್ಲಿ ಕುಳಿತು ಆಯಾಸ ನೀಗುತ್ತಾನೆ. ಅದೇ ಮರದ ಹಣ್ಣನ್ನು ತಿಂದು ತೃಪ್ತನಾಗುತ್ತಾನೆ. ಇದನ್ನು ಪರಸ್ಪರ ಅವಲಂಬನೆ, ಆಸರೆ ಎಂದರೆ ಅರ್ಥ ಸಂಕೋಚವಾಗುತ್ತದೆ. ಬೀಜದೊಳಗಿರುವ ಮರವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಅಧ್ಯಾತ್ಮದ ಬೆರಗು. ಮತ್ತದೇ ಮರದ ಮಾಗಿದ ಫಲದ ತಿರುಳಿಗಂಟಿದ ಬೀಜಗಳಲ್ಲಿ ನೂರು ಮರಗಳ ಕನಸು!





ಭತ್ತ, ಗೋಧಿ ಮುಂತಾದ ಧಾನ್ಯಗಳನ್ನು ಪಡೆಯುವಾಗಲೂ ಗಿಡದ ಪೂರ್ಣ ವಿಕಾಸಕ್ಕೆ ಅವಕಾಶ ಕೊಟ್ಟು, ಅದು ಬೆಳೆದು ಬಾಗಿ ಒಣಗಿ ನಿಂತಾಗ ಕೊಯ್ಯುವುದು ಕ್ರಮ. ಗಿಡದ ಟೊಂಗೆ ಮುರಿಯುವಾಗಲೂ ಹಿಂಸೆಗೆ ಅವಕಾಶವಿಲ್ಲ. ಮುರಿದಲ್ಲಿ ಅದು ಚಿಗುರುತ್ತದೆ ಎನ್ನುವ ಭರವಸೆ. ಹೊಸ ಮನೆಗೆ ಕೋಳಿನ ಎಳೆ(ಗಳ) ಹುಡುಕುವಾಗ ಒಂದು ಪರಂಪರಾಗತ ಕ್ರಮವಿದೆ. ಚೆನ್ನಾಗಿ ಬೆಳೆದು ನಿಂತ ಒಳ್ಳೆಯ ಜಾತಿಯ ಮರದ ಎರಡು ಕೊಂಬೆಗಳಲ್ಲಿ ಒಂದು ಕೊಂಬೆಯನ್ನು ಕಡಿದು ತಂದು ಕೋಳಿನ ಎಳೆ ಮಾಡುತ್ತಾರೆ. ಆ ಮರ ಸಾಯದೆ ಇನ್ನೊಂದು ಕೊಂಬೆಯಲ್ಲಿ ಚಿಗುರಿ ಬೆಳೆದಾಗಲೇ ಮನೆ ಕಟ್ಟಿದವನಿಗೆ ಸಮಾಧಾನ. ಇಂತಹದೊಂದು ಉಪಕಾರ ಸ್ಮರಣೆ ಕಾಡಿನ ಬಳಕೆದಾರರಿಗಿದೆ. ಒಂದೇ ಒಪ್ಪತ್ತು ಬದುಕುವ ಮಧ್ಯಾಹ್ನ ಮಲ್ಲಿಗೆಯನ್ನೂ ತಿಂಗಳ ಕಾಲ ನಗುವ ಸೀತಾಳಿ ದಂಡೆಯನ್ನೂ ನೋಡುವಾಗ; ಕಣ್ಣಿಗೆ, ಅಧ್ಯಾತ್ಮದ ಸಾದೃಶ್ಯ ಅನಾವರಣ ಬೇರೆ ಬೇಕೆ? ಬೇಸಾಯವೆಂದರೆ ಹುಟ್ಟು ಸಾವಿನ ನಿರಂತರ ಪರಿಕ್ರಮ. ನಮ್ಮ ಮೈ ಮನಸ್ಸು ಬುದ್ಧಿ ಚಿತ್ತಗಳನ್ನೆಲ್ಲ ವ್ಯಾಪಿಸಿರುವುದು ಅನ್ನ. ಆ ಅನ್ನವನ್ನು ಬೆಳೆಯುತ್ತ ಕೊನೆಯಲ್ಲಿ ಬೆಳೆ ತೆಗೆದ ಮಣ್ಣಿನೊಂದಿಗೇ ಒಂದಾಗುವುದೇ ಶೂನ್ಯಸಿದ್ಧಾಂತದ ಪರಿಕ್ರಮ. ಅದು ಅಧ್ಯಾತ್ಮವಲ್ಲದೆ ಮತ್ತೇನು?



ನಮ್ಮ ಕೃಷಿಗೆ ಒಂದು ಸಿದ್ಧ ಪರಂಪರೆಯಿದೆ. ಮಳೆ ಬೆಳೆಗಳ ಪಟ್ಟಿಯೇ ಇದೆ. ಆದರೆ, ಇತ್ತೀಚೆಗೆ ಅಡಕೆಗೆ ಕೊಟ್ಟೆ ಕಟ್ಟುವ ಬದಲು ಬೋರ್ಡೋ ಮಿಶ್ರಣವನ್ನು ಇಲ್ಲವೇ ಬಯೋಫೈಟ್ ಸಿಂಪಡಿಸುವ ಕ್ರಮ ಬಂದಿದೆ. ಭತ್ತದ ಗದ್ದೆಯಲ್ಲಿ ಕೀಟ ನಿಯಂತ್ರಣಕ್ಕೆ ಮುಕ್ಕಡಕನ ರೆಂಬೆಯನ್ನು ಹುಗಿಯುವುದು, ಅರಮಾದಲ ಮುಳ್ಳನ್ನು ಎಳೆಯುವುದರ ಬದಲಾಗಿ ರಾಸಾಯನಿಕಗಳ ಸಿಂಪರಣೆ ಬಳಕೆಗೆ ಬಂದಿದೆ. ಸಾಂಪ್ರದಾಯಿಕ ತಳಿಗಳನ್ನು ಬಿಟ್ಟು ಸಂಶೋಧಿತ ಆಧುನಿಕ ತಳಿಗಳನ್ನು ಬಿತ್ತಿ ಬೆಳೆಯುತ್ತಿದ್ದಾರೆ. ಕೃಷಿ ಪ್ರಯೋಗಾಲಯಗಳಲ್ಲಿ, ಕೃಷಿ ತಜ್ಞರನ್ನು ಬಿಟ್ಟರೆ ಬೇರೆಯವರು ಅದರಲ್ಲಿ ಮಾಡುವುದೇನಿದೆ ಎನ್ನುವ ಅನಿಸಿಕೆ ಸಹಜವಾಗಿದೆ. ಅದರೆ ನಮ್ಮ ಬದುಕೇ ಆಗಿರುವ ಕೃಷಿಯ ಕುರಿತು ನಮ್ಮ ತಿಳಿವಳಿಕೆ ಎಷ್ಟು, ನಮ್ಮ ಪ್ರಯೋಗಶೀಲತೆ ಎಷ್ಟು ಎಂಬ ಪ್ರಶ್ನೆ ನನ್ನನ್ನು ಎಂದಿನಿಂದಲೂ ಕಾಡುತ್ತಿದೆ. ಪ್ರತಿ ರೈತನೂ ಕೃಷಿ ವಿಜ್ಞಾನಿಯೇ. ಪ್ರತಿ ಕೃಷಿ ಕಾರ್ಮಿಕನೂ ಒಬ್ಬ ಕುಶಲ ಕರ್ಮಿಯೇ. ಆದರೆ ಅವರಿಗೆ ಆ ಸಂಮಾನವಿಲ್ಲ, ಸ್ವತಃ ಅವರಿಗೆ ಅದರ ಅರಿವಿಲ್ಲ. ಆದ್ದರಿಂದಲೇ ನಾವಲ್ಲಿ ಹೆಜ್ಜೆ ಇಟ್ಟೆವು. ಕದಂಬ, ಕೃಷಿಗೆ ಪೂರಕವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿತು.

## ಸುರಕ್ಷಿತ ಅನ್ನ, ಸ್ವಾವಲಂಬಿ ರೈತ, ಸುಸ್ಥಿರ ಕೃಷಿ

ಜೀವದಾಯಕ ಕೃಷಿಯನ್ನು ಲಾಭದಾಯಕ ಕೃಷಿಯಾಗಿಸುವ ಪ್ರಯತ್ನದಲ್ಲಿ ‘ವಿಷ ಬೇಸಾಯ’ ರೂಢವಾಗುತ್ತಿದೆ. ತಿನ್ನುವ ಅನ್ನದಲ್ಲಿ ವಿಷವಿರಬಾರದು ಎನ್ನುವುದರ ಬದಲು ‘ವಿಷ’ ಎಷ್ಟು ಪ್ರಮಾಣದಲ್ಲಿದ್ದರೆ ಅಪಾಯವಿಲ್ಲ ಎಂಬ ವಿಶ್ಲೇಷಣೆ ನಡೆದಿದೆ! ಎಲ್ಲ ರೀತಿಯ ಕೃಷಿಯೂ ಲಾಭದಾಯಕವಾಗಬೇಕು ಎಂದುಕೊಂಡರೂ ಲಾಭದ ಕೃಷಿ ಮತ್ತು ನಷ್ಟದ ಕೃಷಿ ಎಂಬೆರಡು ವಿಭಾಗಗಳು ನಿರ್ಮಾಣವಾಗಿವೆ. ಆಹಾರ ಧಾನ್ಯ ಕಷ್ಟದ ಬೆಳೆ. ಕಬ್ಬು ಅಡಕೆ ತಂಬಾಕು ಇತ್ಯಾದಿ ಬೆಳೆಗಳು ಎಣ್ಣೆಕಾಳುಗಳು ಕಾಸಿನ ಬೆಳೆಗಳು. ಅಂದರೆ ಅನ್ನದ ಬೆಳೆ ಕಷ್ಟದ್ದು ಎನ್ನುವಂತಾಗಿದೆ!

ಎಷ್ಟೇ ಲಾಭದಾಯಕವಾದರೂ ವಿಷ ಕೃಷಿಯನ್ನು ಒಪ್ಪಲಾಗದು. ಸುರಕ್ಷಿತ ಅನ್ನ ಕೃಷಿಯ ಆದ್ಯತೆಯಾಗಬೇಕು. ಅಂತೆಯೇ ರೈತನೆಂದರೆ ಯಾವಾಗಲೂ ಸರಕಾರದ ಮತ್ತು ಮಾರುಕಟ್ಟೆಯ ದಯೆಯಲ್ಲಿ, ಅನುಕಂಪದಲ್ಲಿ ಬದುಕಬೇಕಾದವನು ಎನ್ನುವುದೂ ತಪ್ಪಬೇಕು. ಬೀಜ, ಗೊಬ್ಬರ, ಔಷಧಗಳ ಜೊತೆಯಲ್ಲಿ ಕೃಷಿ ತಂತ್ರಜ್ಞಾನವೂ ಸೇರಿದಂತೆ ಎಲ್ಲದರಲ್ಲೂ ರೈತ ಸ್ವತಂತ್ರನಾಗಬೇಕು. ಕಂಪನಿಯಿಂದ ತಂದ ಭತ್ತದ ಬೀಜದಿಂದ ಬೆಳೆ ತೆಗೆಯಬಹುದು. ಆದರೆ ಆ ಬೆಳೆ ಪುನಃ ಬೀಜಕ್ಕೆ ಬರುವುದಿಲ್ಲ ಎನ್ನುವುದು ಎಂದಿಗೂ ಒಪ್ಪಲಾಗದ ಅವಮಾನಕರ ಅವಲಂಬನೆ. ರೈತನ ಪಾರಂಪರಿಕ ಜ್ಞಾನ ಮತ್ತು ಆಧುನಿಕ ತಂತ್ರಜ್ಞಾನಗಳು ಒಟ್ಟಿಗೇ ಹೋಗಬೇಕು. ಒಂದು ಇನ್ನೊಂದಕ್ಕೆ ಪರ್ಯಾಯವಲ್ಲ, ಪೂರಕವಾಗಬೇಕು. ಅನ್ನ ಬೆಳೆಯುವ ರೈತರು, ಹೊನ್ನು ಬೆಳೆಯುವ ರೈತರು ಎನ್ನುವ ತಾರತಮ್ಯ ತಪ್ಪಬೇಕು. ಜೊತೆಯಲ್ಲಿ, ಕೃಷಿ ಸುಸ್ಥಿರವಾಗಲೇಬೇಕು. ಮಣ್ಣಿನ ಫಲವತ್ತತೆ ಕಡಿಮೆಯಾಗಬಾರದು. ಅಂತರ್ಜಲ ಕುಸಿಯಬಾರದು. ಕೃಷಿ ದುಬಾರಿಯೂ ಆಗಬಾರದು. ಪ್ರಕೃತಿಗೆ ಹತ್ತಿರವಾದ ಕೃಷಿ ನಿಜಕ್ಕೂ ಸುಸ್ಥಿರ. ಕೃಷಿಯ ಕುರಿತು ಕದಂಬ ಚಿಂತಿಸುವುದು ಹೀಗೆ.

## ಕೃಷಿ ಕಷ್ಟವಲ್ಲ, ಮುಂದಿನ ತಲೆಮಾರಿನ ಉದ್ಯಮ



ಕೃಷಿ ಕಷ್ಟದ ಕಾಯಕ, ಅನಿವಾರ್ಯವಾಗಿ ಮಾಡುತ್ತಿದ್ದೇವೆ ಎನ್ನುವ ಅನಿಸಿಕೆ ದೂರವಾಗುವ ದಿನಗಳು ಬರುತ್ತಿವೆ. ಪರಿಸರಸ್ನೇಹಿಯಾದ ಹಸಿರು ನ್ಯಾನೋ ತಂತ್ರಜ್ಞಾನ ಕೃಷಿಯನ್ನು ಉದ್ಯಮದೆತ್ತರಕ್ಕೆ ಬೆಳೆಸುವ ಭರವಸೆಯನ್ನು ನೀಡುತ್ತಿದೆ. ಮುಂದಿನ ತಲೆಮಾರು ಕೃಷಿಯನ್ನು ಮಾಡುತ್ತದೆಯೇ!? ಎನ್ನುವ ಪ್ರಶ್ನೆಯನ್ನೂ ಆತಂಕವನ್ನೂ ಹುಟ್ಟುಹಾಕಿರುವ ಸಂದರ್ಭದಲ್ಲಿಯೇ ಈ ಹೊಸ ಭರವಸೆ ಕೃಷಿಗೆ ಉದ್ಯಮದ ಶಿಸ್ತನ್ನೂ ಮರ್ಯಾದೆಯನ್ನೂ ಕಲ್ಪಿಸುತ್ತಿದೆ. ಕೃಷಿ ಕೇವಲ ಉದ್ಯೋಗ ಸೃಷ್ಟಿಯ ಕ್ಷೇತ್ರವಲ್ಲ, ಮುಂದಿನ ತಲೆಮಾರಿನ ಆಹಾರದಾಯೀ ಉದ್ಯಮವಾಗಲಿದೆ.

## ಹೊಸತನದ ಹೊಣೆಗಾರಿಕೆಗೆ ಹಂಗಿಲ್ಲದ ಪ್ರಯೋಗ

ಹೊಣೆಗಾರಿಕೆಯಿಲ್ಲದ ಹೊಸ ಚಿಂತನೆ ಅಪಾಯಕಾರಿ. ಹೊಸತರ ಅನ್ವೇಷಣೆಯಿಲ್ಲದಿದ್ದರೆ ಅದು ಕನಸಿಲ್ಲದ ಕಸುಬಾಗುತ್ತದೆ. ಕೃಷಿಯಲ್ಲಿ ಹೊಸತನಕ್ಕೆ ನಾನೇ ಪ್ರಯೋಗಶೀಲನಾಗಬೇಕೆಂದೆಣಿಸಿ ಕೃಷಿಕನಾದೆ. “ಬೇರೆಯವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡಿದರು” ಎಂಬ ಗಾದೆ ಇದೆ. ಹಾಗಾಗಬಾರದೆಂದು ನಾನೇ ಮೊದಲು ಬಾವಿಗಿಳಿದು ಆಳ ನೋಡಿ ನಂತರ ಉಳಿದವರಿಗೆ ಹೇಳುವ ನಿರ್ಧಾರ ಮಾಡಿದೆ. ಅದರಲ್ಲೂ ಜನ ಪ್ರತಿನಿಧಿಯೊಬ್ಬ ಈ ವಿಷಯದಲ್ಲಿ ವಿಶೇಷ ಕಾಳಜಿ ವಹಿಸಬೇಕಾಗುತ್ತದೆ! ತೋಟಗಾರಿಕೆಯ ಎಲ್ಲ ಸಾಹಸಕ್ಕೂ ನನ್ನ ಭೂಮಿಯೇ ಪ್ರಯೋಗ ಶಾಲೆಯಾಯಿತು. ಹೋದಲ್ಲಿ ಬಂದಲ್ಲಿ ಕೃಷಿಯ ಹೊಸ ಸಾಧ್ಯತೆಗಳತ್ತ ಲಕ್ಷ್ಯವಹಿಸುವುದು ನನಗೆ ಸ್ವಭಾವವೇ ಆಗಿದೆ. ಏಕೆಂದರೆ ಕೃಷಿ ಅಧ್ಯಾತ್ಮದ ಮೊದಲ ಪಾಠಶಾಲೆ.



# ಭತ್ತಕ್ಕೂ ಒಂದು ಭರವಸೆ

ಕರಾವಳಿ ಮತ್ತು ಮಲೆನಾಡುಗಳೆರಡೂ ಅನ್ನವನ್ನೇ ಅವಲಂಬಿಸಿದ ಪ್ರದೇಶಗಳು. ಆದರೆ ಭತ್ತದ ಬೆಳೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಕೆಲವು ಕಡೆ ಭತ್ತದ ಗದ್ದೆಗಳು ಅಡಿಕೆ ತೋಟಗಳಾಗಿವೆ. ಕೆಲಸಗಾರರನ್ನವಲಂಬಿಸಿ ಭತ್ತ ಬೆಳೆದರೆ ನಷ್ಟವಾಗುತ್ತದೆಂದು ಗದ್ದೆಯನ್ನು ಹಾಳುಕೆಡವಿದ್ದೂ ಇದೆ. ಹಾಗೆಂದು ಉಣ್ಣದಿರಲಾದೀತೆ! ಎಲ್ಲಿಯೋ ಬೆಳೆದ ಅಕ್ಕಿಯನ್ನು ತರಿಸಿ ಊಟಮಾಡುವ ಸ್ಥಿತಿ ನಿರ್ಮಾಣವಾಗಿದೆ. ಯಾರು ಸಣ್ಣ ಹಿಡುವಳಿದಾರರೋ, ಸ್ವಂತದ ಪರಿಶ್ರಮದಿಂದ ಉತ್ತಿ ಬಿತ್ತಿ ಮಾಡುತ್ತಾರೋ ಅವರು, ಕಷ್ಟವೋ ನಷ್ಟವೋ ಭತ್ತ ಬೆಳೆಯುತ್ತಿದ್ದಾರೆ. ಭತ್ತದ ಬೆಳೆಯ ಮುಖ್ಯ ಸಮಸ್ಯೆ ಎಂದರೆ ಬೀಜ, ಗೊಬ್ಬರ, ಔಷಧಗಳು ದುಬಾರಿಯಾಗಿರುವುದು. ವಾತಾವರಣವನ್ನು ಎದುರಿಸಬಲ್ಲ ಹಳೆಯ ತಳಿಗಳು ಉಳಿದಿಲ್ಲ, ಇದ್ದರೂ ಅವುಗಳ ಇಳುವರಿ ತುಂಬಾ ಕಡಿಮೆ. ಹೊಸ ಜಾತಿಯ ಬೀಜಗಳು ಮಾರುಕಟ್ಟೆಯ ಸ್ವತ್ತು. ಸಣ್ಣ ರೈತನ ಕೈಗೆಟುಕಲಾರವು. ಇದು ಅನ್ನದ ಸಮಸ್ಯೆ.



ಹೊನ್ನಾವರ ತಾಲೂಕು ಮಂಕಿ ಹೋಬಳಿಯ ನಗರಮನೆಯ ವಸಂತ ಸುರೇಶ ಕೌಶಿಕ ಅವರು ತಮ್ಮ ಸಣ್ಣ ಗದ್ದೆಯಲ್ಲಿ ಭತ್ತ ಬೆಳೆಯುತ್ತಿದ್ದರು. ಆದರೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುವ ಉತ್ಪಾದನಾ ವೆಚ್ಚಕ್ಕೆ ಹೆದರಿ ಭತ್ತ ಬೆಳೆಯುವುದನ್ನೇ ಬಿಡುವ ಆಲೋಚನೆಯಲ್ಲಿದ್ದರು. ಆಗ ಅವರಿಗೆ ಕದಂಬದ ವೆಂಕಟೇಶ ಭೇಟಿಯಾದರು. ಸೂಕ್ಷ್ಮಜೀವಾಣು ತಂತ್ರಜ್ಞಾನದ ಬಗ್ಗೆ ಹೇಳಿದರು. ಕದಂಬ ನಿರಂತರವಾಗಿ ಸಂಗಡ ಇರುತ್ತದೆ ಎಂದು ವಿಶ್ವಾಸ ತುಂಬಿದರು. ವಸಂತ ಅವರು ಒಪ್ಪಿ ಹೊಸ ತಂತ್ರಜ್ಞಾನವನ್ನು ಸ್ವೀಕರಿಸಿದರು. ಅವರ ಉತ್ಪಾದನಾ ವೆಚ್ಚ ಕಡಿಮೆಯಾದದ್ದಲ್ಲದೆ ಬೆಳೆಯೂ ಹೆಚ್ಚಾಗಿತ್ತು. ವಸಂತ ಅವರ ಪ್ರಯೋಗವನ್ನು ನೋಡಿ ಪ್ರೇರಣೆ ಪಡೆದು ತಮ್ಮ ಅಡಿಕೆ ತೆಂಗಿನ ಕೃಷಿಗೂ ಸೂಕ್ಷ್ಮಾಣುಜೀವಿ ತಂತ್ರಜ್ಞಾನವನ್ನು ಬಳಸಿಕೊಂಡವರು ಯೆಳ್ಳಿಮಕ್ಕಿಯ ಉದಯ ನಾಯ್ಕರು. ಕೃಷಿಗೆ ಬೇಕಾದಷ್ಟು ಕೊಟ್ಟಿಗೆ ಗೊಬ್ಬರ ಕೊಡುವುದು ಸಾಧ್ಯವಿಲ್ಲವೆಂದು ಚಿಂತಿಸುತ್ತಿದ್ದ ಉದಯ ನಾಯ್ಕರಿಗೆ ಹೊಸ ತಂತ್ರಜ್ಞಾನ ಹಿತ ನೀಡಿದೆ. ಈಗಲೂ ಕದಂಬದ ವೆಂಕಟೇಶ ಮತ್ತು ತಜ್ಞರಾದ ಡಾ. ಕಿರಣ ಹೆಗಡೆಯವರ ಮಾರ್ಗದರ್ಶನದಲ್ಲಿ ಕೃಷಿಯನ್ನು ಮುಂದುವರಿಸಿದ್ದಾರೆ. ಗುಜರಾತ ರಾಜ್ಯದಲ್ಲಿ ಇದು ಬಹಳ ವ್ಯಾಪಕವಾಗಿ ಅನುಷ್ಠಾನಗೊಂಡಿದೆ.



# ಕೃಷಿಗೆ ಕಾಮಧೇನುವಾದ ಸೂಕ್ಷ್ಮಾಣುಜೀವಿ ತಂತ್ರಜ್ಞಾನ

ರಾಸಾಯನಿಕ ಕೃಷಿಯಿಂದ ದೂರ ಸರಿದ, ಸಹಜ ಕೃಷಿಗೆ ಹತ್ತಿರವಾದ ಪ್ರಯೋಗಗಳತ್ತ ಗಮನಿಸುತ್ತಿದ್ದೆ. ಅಮೇರಿಕದಲ್ಲಿ ಸಂಶೋಧನೆ ಮಾಡಿ ಪೇಟೆಂಟ್ ಪಡೆದ ಅನಿವಾಸಿ ಭಾರತೀಯರೊಬ್ಬರ ಸಾಧನೆಯೊಂದು ಕಣ್ಣಿಗೆ ಬಿತ್ತು. ಮಣ್ಣಿನ ಫಲವತ್ತತೆಗೆ ಪೈರಿನ ಗುಣಮಟ್ಟಕ್ಕೆ ಸೂಕ್ಷ್ಮಾಣುಜೀವ ತಂತ್ರಜ್ಞಾನದಲ್ಲಿ(Microbial technology) ಮಾಡಿದ ಸಂಶೋಧನೆ ತುಂಬ ಒಳ್ಳೆಯ ಫಲ ನೀಡಿದೆ ಅನ್ನುವುದು ತಿಳಿಯಿತು. ಅತ್ಯಂತ ಕಡಿಮೆ ಪ್ರಮಾಣದ ಜೀವ ರಸಾಯನಗಳನ್ನು ಬಳಸಿ ಸಸ್ಯಗಳಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದು, ಉತ್ಪಾದನೆಯ ಪರಿಮಾಣವನ್ನೂ, ಗುಣಮಟ್ಟವನ್ನೂ, ಹೆಚ್ಚಿಸುವುದು ಸಾಧ್ಯ ಎನ್ನುವ ಸಿದ್ಧಾಂತ ಈ ಮೂಲಕ ಕಾರ್ಯಸಾಧ್ಯವಾಗಿದೆ. ಈ ತಂತ್ರಜ್ಞಾನವನ್ನು ಭಾರತದಲ್ಲಿ ಬಳಸಲು ಉತ್ಸಾಹದಿಂದ ಬಂದ ಅವರಿಗೆ ನಮ್ಮ ಆಡಳಿತ ವ್ಯವಸ್ಥೆಯ ಋಣಾತ್ಮಕ ಜಡತ್ವದೊಡನೆ ಹೊಂದಿಕೊಳ್ಳುವುದು ಕಷ್ಟವಾಯಿತು! ಅವರು ಕೈಸೋತು ತಮ್ಮ ಪ್ರಯತ್ನವನ್ನು ಕೈಬಿಡುವ ನಿರ್ಧಾರ ಮಾಡಿದಾಗ ಅವರ ಕೈಹಿಡಿದು ನಿಲ್ಲಿಸಿದ್ದು ಕದಂಬ. ನಿಸರ್ಗ ಸ್ನೇಹಿ ಸಸ್ಯೋಪಚಾರದ ಸೂಕ್ಷ್ಮಾಣು ಜೀವಿ ತಂತ್ರಜ್ಞಾನವನ್ನು ಬಳಸುವ ಖಾಸಗಿ ಯತ್ನಕ್ಕೆ ಕೈಹಾಕಿದೆ. ಮೊದಲು ನನ್ನ ಪ್ರಯೋಗಭೂಮಿಯಲ್ಲಿ ಬಳಸಿ ಭರವಸೆಹೊಂದಿ ಉಳಿದವರಿಗೆ ಸಲಹೆ ನೀಡಿದೆ. ಕದಂಬದಿಂದ ನಡೆಯುತ್ತಿರುವ ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ಈಗ ಸೂಕ್ಷ್ಮಾಣುಜೀವಿ ತಂತ್ರಜ್ಞಾನದ ನಿರಂತರ ಬಳಕೆಯಿದೆ. ಇದರಿಂದಾಗಿ ರೈತರ ಮಣ್ಣಿನ ಗುಣಮಟ್ಟ ಸುಧಾರಿಸಿದೆ, ರಾಸಾಯನಿಕಗಳ ಬಳಕೆ ಬಹಳ ಕಡಿಮೆಯಾಗಿದೆ. ಉತ್ಪಾದನಾ ವೆಚ್ಚ ಗಣನೀಯವಾಗಿ ಕಡಿಮೆಯಾಗಿದೆ. ಎಕರೆಯೊಂದಕ್ಕೆ 1500ಕೆಜಿ ಕೊಟ್ಟಿಗೆ ಗೊಬ್ಬರ ಬಳಸುವಲ್ಲಿ 60ಕೆಜಿ ಸೂಕ್ಷ್ಮಾಣುಜೀವಿ ಉತ್ಪನ್ನ ಬಳಸಿದರೆ ಸಾಕಾಗುತ್ತದೆ.



ವಿಷ ಕೃಷಿಯ ಬದಲು ಪೀಯೂಷ ಕೃಷಿ ಸಾಧ್ಯವಾಗಿದೆ. ಈ ತಂತ್ರಜ್ಞಾನ ಮಣ್ಣಿನ ಆರೋಗ್ಯದ ಕುರಿತ ಸಮಗ್ರ ದೃಷ್ಟಿಯ ಚಿಂತನೆಯಾಗಿದೆ, ಪ್ರಯೋಗ ಬದ್ಧ ಸಂಶೋಧನೆಯಾಗಿದೆ. ಮಣ್ಣಿನ ಸಹಜ ಸಾಮರ್ಥ್ಯವನ್ನು ಕಾಪಾಡುವ ಮತ್ತು ಹೆಚ್ಚಿಸುವ ವಿಧಾನವಾಗಿದೆ. ಮಣ್ಣಿಗೆ ಪೂರಕವಾದ, ಗುಣವರ್ಧಕವಾದ ಐವತ್ತಕ್ಕೂ ಹೆಚ್ಚು ಸೂಕ್ಷ್ಮಾಣುಗಳನ್ನು ಬೆಸೆದು (Consortia), ಅವುಗಳನ್ನು ಹೆಚ್ಚು ಶಕ್ತಿಯುತವಾಗಿ ದುಡಿಸುವ ವಿಧಾನವಾಗಿದೆ. ಇದರಿಂದಾಗುವ ಲಾಭಗಳೆಂದರೆ; ರಾಸಾಯನಿಕಗಳ ಬಳಕೆಯಲ್ಲಿ ಗಣನೀಯ ಇಳಿಕೆ, ನಿಸರ್ಗಸ್ನೇಹಿ ರೋಗ ನಿಯಂತ್ರಣ ಪದ್ಧತಿ, ಮಣ್ಣಿನ ಪೋಷಕಾಂಶಗಳ ಸಹಜವಾದ ಆಂತರಿಕ ವೃದ್ಧಿಯಿಂದಾಗಿ ಗೊಬ್ಬರದ ಬಳಕೆಯ ಪ್ರಮಾಣದಲ್ಲಿ ಇಳಿಕೆ. ಸಮೃದ್ಧ ಫಸಲು, ಸಸ್ಯಕ್ಕೂ ಹಾಗೂ ಫಲಕ್ಕೂ ನಿಸರ್ಗದ ಋತುಮಾನಗಳ ಏರಿಳಿತಗಳನ್ನು ತಾಳಿಕೊಳ್ಳುವ ಗುಣ. ಮಾರುಕಟ್ಟೆಯಲ್ಲಿ ಯೋಗ್ಯ ಬೆಲೆ. ಸಾವಯವದತ್ತ ನಿಧಾನ ನಡಿಗೆ. ಮಣ್ಣಿನ ಗುಣಮಟ್ಟದ ವೃದ್ಧಿ, ಕಡಿಮೆಯಾದ ಉತ್ಪಾದನಾ ವೆಚ್ಚ, ಇವುಗಳಿಂದಾಗಿ ರೈತರಲ್ಲಿ ಆತ್ಮ ವಿಶ್ವಾಸ ಹೆಚ್ಚಾಗಿದೆ. ಇನ್ನಷ್ಟು ಶೋಧನೆಗೆ ಮತ್ತು ಸಾಧನೆಗೆ ಪ್ರೇರಣೆ ನೀಡಿದೆ.

# ಉತ್ತರ ಕನ್ನಡ ತೋಟಗಾರಿಕೆ ಜಿಲ್ಲೆ



ಉತ್ತರಕನ್ನಡ ಜಿಲ್ಲೆಯಲ್ಲಿ ಏಕದಳ ದ್ವಿದಳ ಧಾನ್ಯಗಳನ್ನು ಬೆಳೆಯುವವರು ಸಾಕಷ್ಟಿದ್ದಾರೆ. ಆದರೆ ಜಿಲ್ಲೆ ಹೆಸರಾಗಿರುವುದು ತೋಟಗಾರಿಕಾ ಬೆಳೆಗಳಿಂದಾಗಿ. ಕಾಡಿನ ಮರಗಳನ್ನೆಲ್ಲ ಬಳಸಿ ಬೆಳೆದಿದ್ದ ಕಾಳು ಮೆಣಸಿನ ಬಳ್ಳಿಯಿಂದಾಗಿ, ಅದರ ಅತ್ಯುತ್ತಮ ಕಾಳುಗಳಿಂದಾಗಿ ಸಾಂಬಾರು ಪದಾರ್ಥಗಳ ಜಿಲ್ಲೆ ಎನಿಸಿತ್ತು. ಗೇರುಸೊಪ್ಪೆಯ ರಾಣಿಯನ್ನು ಕಾಳುಮೆಣಸಿನ ರಾಣಿ ಎಂದೇ ಕರೆಯಲಾಗುತ್ತಿತ್ತು. ಕಾಳುಮೆಣಸಿಗೆ ಆಧಾರವಾಗಿ ಅಡಕೆ ಮರಗಳನ್ನು ಬೆಳೆಸಿದರು. ಮುಂದೆ ಕಾಳು ಮೆಣಸಿಗೆ ರೋಗ ಬಂತು, ಅದರ ಬೆಳೆ ಕಡಿಮೆಯಾಯಿತು, ಅಡಕೆಯೇ ಪ್ರಧಾನ ಬೆಳೆಯಾಯಿತು! ಕಾಳುಮೆಣಸು, ಯಾಲಕ್ಕಿ, ಬಾಳೆ ಇವೆಲ್ಲ ಪೂರಕ ಬೆಳೆಗಳಾದವು. ನಂತರ ಕೋಕೊ ಅಡಿಕೆ ತೋಟದಲ್ಲಿ ಸೇರಿಕೊಂಡಿತು. ವೆನಿಲ್ಲಾ ಕೂಡ ಕೆಲವು ಕಾಲ ತೋಟಗಳಲ್ಲಿ ಹಬ್ಬಿ ಹೂಬಿಟ್ಟಿತು. ಅಂಕೋಲಾದ ಇಶಾಡ ಮಾವು, ಭಟ್ಕಳದ ಮಲ್ಲಿಗೆ, ಅರೆಮಲೆನಾಡಿನ ಅನಾನಸ್ ಎಲ್ಲ ಕಡೆಯೂ ಬೆಳೆಯುವ ಗೋಡಂಬಿ, ತೆಂಗು, ಔಷಧೀಯ ಸಸ್ಯಗಳೂ ಸೇರಿದಂತೆ ಉತ್ತರ ಕನ್ನಡದ ಕಿರು ಅರಣ್ಯ ಉತ್ಪನ್ನಗಳನ್ನೆಲ್ಲ ಗಣನೆಗೆ ತೆಗೆದುಕೊಂಡರೆ ಜಿಲ್ಲೆಯ ಸಸ್ಯ ಸಂಪತ್ತು ಅಗಣಿತ ಎನಿಸುತ್ತದೆ. ರಾಷ್ಟ್ರೀಯ ತೋಟಗಾರಿಕಾ ಮಂಡಳಿಯ ಪಟ್ಟಿಯಲ್ಲಿ 2005ರಲ್ಲಿ ಉತ್ತರಕನ್ನಡ ಜಿಲ್ಲೆಯ ಹೆಸರು ಸೇರಿದಾಗಿನಿಂದ ತೋಟಗಾರಿಕಾ ಕೃಷಿಗೆ ಜಿಲ್ಲೆಯಲ್ಲಿ ಹೆಚ್ಚಿನ ಒತ್ತು ಬಂದಿದೆ. ಜಿಲ್ಲೆಯ ವೈವಿಧ್ಯಮಯ ಜೀವಾವಾಸವನ್ನೂ, ಸಾಂಬಾರು ಪದಾರ್ಥಗಳ ವೈಪುಲ್ಯವನ್ನೂ, ತೋಟಗಾರಿಕೆ ನೀಡುವ ಉದ್ಯೋಗ-ಉತ್ಪನ್ನಗಳ ಪರಿಮಾಣವನ್ನೂ ಗಮನಿಸಿ ಉತ್ತರಕನ್ನಡವನ್ನು ತೋಟಗಾರಿಕಾ ಜಿಲ್ಲೆ ಎಂದು ಘೋಷಿಸುವ ದಿನಕ್ಕಾಗಿ ಜಿಲ್ಲೆ ಕಾಯುತ್ತಿದೆ.

## ಅಡಕೆಗೆ ಹೊಂದುವ ಅಡಕಗಳು

ಅಡಕೆಯೊಂದನ್ನೇ ನಂಬಿದ ಕೃಷಿ ಸುಸ್ಥಿರವಾದದ್ದಲ್ಲ ಎಂಬುದು ನನ್ನ ಬಲವಾದ ನಂಬಿಕೆ. ಅಡಕೆಗೆ ಪರ್ಯಾಯ ಬೆಳೆಗಳನ್ನೂ ಪೂರಕ ಬೆಳೆಗಳನ್ನೂ ಹುಡುಕಿಕೊಳ್ಳದಿದ್ದರೆ ನಮಗೆ ಉತ್ತಮ ಭವಿಷ್ಯ ದಕ್ಕುವುದಿಲ್ಲ. ಮೊದಲು ನಮ್ಮ ತೋಟಗಳಲ್ಲಿ ಕಾಳು ಮೆಣಸು, ಯಾಲಕ್ಕಿ, ಬಾಳೆಗಳೆಲ್ಲ ಇದ್ದವು. ಮೆಣಸಿಗೆ ರೋಗ ಬಂತು, ಯಾಲಕ್ಕಿಯ ಬೆಲೆ ಕಡಿಮೆಯಾಯಿತು, ಬಾಳೆಗೆ ಮಂಗನ ಕಾಟ ಹೀಗಾಗಿ ಈಗೀಗ ಅನೇಕರ ತೋಟದಲ್ಲಿ ಅಡಕೆಯೊಂದೇ ಉಳಿದಿದೆ. ಏಕ ಬೆಳೆಯನ್ನವಲಂಬಿಸಿದ ಕೃಷಿ ಸುಸ್ಥಿರವಲ್ಲ. ಆದ್ದರಿಂದ ನಾವು ಅಡಕೆಗೆ ಹೊಂದುವ ಬೆಳೆಗಳನ್ನು ಹುಡುಕಿಕೊಳ್ಳಲೇ ಬೇಕು. ಈ ನನ್ನ ಹುಡುಕಾಟ ಬಹಳ ದಿನಗಳದ್ದು. ಎಲ್ಲಿಯೇ ಹೋದರೂ ನಮ್ಮ ಮಲೆನಾಡಿಗೆ, ನಮ್ಮ ಕರಾವಳಿಗೆ, ನಮ್ಮ ಅರೆ ಮಲೆನಾಡಿಗೆ ಹೊಂದುವ ಯಾವುದಾದರೂ ಬೆಳೆ ಸಿಗುತ್ತದೆಯೇ ಎನ್ನುವುದೇ ನನ್ನ ನಿತ್ಯದ ಧ್ಯಾನ. ಹಾಗೆ ನನಗನ್ನಿಸಿದ ಬೆಳೆಗಳೆಂದರೆ ಕೋಕೊ, ಅಗರ್‌ವುಡ್, ಕಾಳುಮೆಣಸು, ವೆನಿಲ್ಲಾ ಇತ್ಯಾದಿ. ಈ ಹುಡುಕಾಟ ಇನ್ನೂ ಮುಗಿದಿಲ್ಲ. ನೂರಾರು ವೈವಿಧ್ಯಗಳಿಗೆ ಅವಕಾಶ ನೀಡುವ ಮಣ್ಣಿನ ಮಡಿಲಿನ ಮಾತೃ ಶಕ್ತಿಗೂ ಕೊನೆಯಿಲ್ಲ. ನಮಗೆ ಅದರ ಅರಿವಾದಾಗ ಏಕ ಬೆಳೆಯ ಮೋಹ ಕಡಿಮೆಯಾಗುತ್ತದೆ, ವಸುಂಧರೆಯ ಅಪಮೌಲ್ಯೀಕರಣ ನಿಲ್ಲುತ್ತದೆ.



ಆದರೆ ಇಷ್ಟೆಲ್ಲ ಬೆಳೆಗಳನ್ನು ಒಂದೇ ತೋಟದಲ್ಲಿ ಬೆಳೆದರೆ ನಮ್ಮ ಪಹಣಿ ಪತ್ರಿಕೆಯಲ್ಲಿ ಹೇಗೆ ಹಚ್ಚುವುದೆಂಬುದೇ ಸರಕಾರಕ್ಕೆ ತಿಳಿಯುವುದಿಲ್ಲ ಎನ್ನುವ ಸ್ಥಿತಿ ಬಂತು. ಒಂದು ಎಕರೆ ಅಡಿಕೆ, ಒಂದು ಎಕರೆ ಕಾಳು ಮೆಣಸು, ಒಂದು ಎಕರೆ ಅಗರ್‌ವುಡ್ ಎಂದೆಲ್ಲ ಬರೆದರೆ ಒಂದೇ ಎಕರೆ ಜಮೀನು ನಾಲ್ಕೈದು ಎಕರೆಯಾಗುತ್ತದೆ ಎನ್ನುವ ಬ್ರಿಟಿಷ್ ಲೆಕ್ಕಾಚಾರವನ್ನು ನಾವಿನ್ನೂ ಮುಗಿಸಿಲ್ಲವಾದ್ದರಿಂದ ಈ ಕಷ್ಟ. ಇಷ್ಟೆಲ್ಲ ಬೆಳೆದ ಮೇಲೆ ಇವೆಲ್ಲಕ್ಕೂ ಸೇರಿ ಬೆಳೆ ಸಾಲ ಕೊಡುವುದು ಹೇಗೆ ಎಂಬುದೇ ದೊಡ್ಡ ಪ್ರಶ್ನೆ. ಇದಕ್ಕೆ, ನಮ್ಮ ಶಾನುಭೋಗರು ಕಂಡುಕೊಂಡ ಒಳಹಾದಿ ಎಂದರೆ ಒಂದು ಎಕರೆಯಲ್ಲಿ ಹತ್ತು ಗುಂಟೆ ಅಡಿಕೆ, ಹತ್ತು ಗುಂಟೆ ಕಾಳು ಮೆಣಸು, ಹತ್ತು ಗುಂಟೆ ಬಾಳೆ ಹೀಗೆ ಹಂಚಿ ಬರೆಯುವುದು! ಈಗ ಈ ವ್ಯವಸ್ಥೆಗೆ ಮುಕ್ತಿ ಸಿಕ್ಕಿದೆ. ತಡವಾಗಿಯಾದರೂ ರೈತನ ಮಣ್ಣಿಗೆ ಮೌಲ್ಯ ಪ್ರಾಪ್ತವಾಗಿದೆ. ಕೃಷಿಕರ ಮುಂದೆ ಹತ್ತಾರು ಬೆಳೆಗಳು ಸಾಲು ಹಚ್ಚಿ ನಿಂತಿವೆ. ಬೆಳೆಸುವ ನಮ್ಮ ಸಾಮರ್ಥ್ಯಕ್ಕೆ ಸವಾಲೆಸೆದಿವೆ.

## ದೀಕ್ಷಿತರ ದಿವ್ಯ ಕೃಷಿ

ಶಿರಸಿ ತಾಲೂಕು ಸಾಲ್ಕಣಿಯ ಶ್ರೀ ಮಂಗಲಮೂರ್ತಿ ದೀಕ್ಷಿತರು ಅಪರೂಪದ ಕೃಷಿಕರು. ಹನ್ನೆರಡು ಎಕರೆ ಬೆಟ್ಟದಂತಹ ಪ್ರದೇಶದಲ್ಲಿ ನಂದನವನ ನಿರ್ಮಿಸಿದ್ದಾರೆ. ಮೇಲ್ನೋಟಕ್ಕೆ ಬಾಳೆಯ ತೋಟದಂತೆ ಕಾಣುವ ಅವರ ತೋಟವನ್ನು ಹೊಕ್ಕರೆ ಪ್ರಪಂಚದ ಅನೇಕ ವಿಶೇಷಗಳು ನೋಡುವುದಕ್ಕೆ ಸಿಗುತ್ತವೆ. ಆಸ್ಟ್ರೇಲಿಯದ ನೀಲಗಿರಿ, ಕರಿ ಬಣ್ಣದ ಮಾವು (Black Mango), ಲಕ್ಷ್ಮಣ ಫಲ, ಹನುಮಾನ ಫಲ, ಮೂರು ನಮೂನೆಯ ಅಂಜೂರ, ಐದು ಬಣ್ಣದ ಜಂಬು ನೀರಲ, ಕಿವಿ, ಪೀಯರ್ಸ್, ದೂರಿಯನ್ ಹಣ್ಣಿನ ಗಿಡಗಳು, ಪಾನ್ ಮಸಾಲೆ ಗಿಡ ಇಂತಹ ಅಪರೂಪದ ಗಿಡಗಳ ಜೊತೆಯಲ್ಲಿ ಉಪ್ಪಿನಕಾಯಿಗೆ ಬಳಸುವ 52 ಜಾತಿಯ ಮಾವಿನ ತಳಿ, ಮಾವಿನ ಹಣ್ಣಿನ 8 ಜಾತಿಗಳು, ಹಲಸಿನಲ್ಲಿ 22 ಬಗೆ, ಕಾಳು ಮೆಣಸಿನ 44 ವೈವಿಧ್ಯ, ತೆಂಗಿನ 8 ವಿಧಗಳು, ಕಿತ್ತಳೆ ಮೂಸಂಬಿ ಮಾದಲ ಮುರುಗಲು ಫಲಗಳ ವೈವಿಧ್ಯಗಳು, ವಿವಿಧ ಚಿಕ್ಕು, ಬದಾಮ, ಪಿಸ್ತಾ, ರಾಂಗುಟಾನ್, ಲಿಚಿ, ದ್ರಾಕ್ಷಿ ಹೀಗೆ ನೂರಾರು ರುಚಿಗಳನ್ನು ಸಾಕಿದ್ದಾರೆ ದೀಕ್ಷಿತರು. ಅವರ ತೋಟಕ್ಕಿರುವ ಶೈಕ್ಷಣಿಕ ಮಹತ್ವವೂ ದೊಡ್ಡದು.



ಮೆಕ್ಯಾನಿಕಲ್ ಇಂಜನೀಯರಿಂಗ್ ನಲ್ಲಿ ಡಿಪ್ಲೋಮಾ ಮಾಡಿಕೊಂಡಿರುವ ದೀಕ್ಷಿತರು (9480790799) ಸರಕಾರದ ಯಾವ ಸಹಾಯವನ್ನೂ ಬಯಸದೆ ಕಳೆದೆರಡು ದಶಕಗಳಿಂದ ಕೃಷಿ ಮಾಡುತ್ತ ಬಂದಿದ್ದಾರೆ. ದೇಶದ ಎಲ್ಲ ಮೂಲೆಗಳಲ್ಲಿರುವ ಫಲ ವೈವಿಧ್ಯಗಳ ನಿರಂತರ ಶೋಧ ಅವರ ಸ್ವಭಾವ. ಒಂದೇ ಬೀಜಕ್ಕೆ ಸಾವಿರ ರೂಪಾಯಿ ತೆತ್ತು ಆನ್‌ಲೈನ್‌ನಲ್ಲಿ ತರಿಸಿಕೊಳ್ಳುವಷ್ಟು ತುಡಿತ ಅವರದ್ದು. ತೋಟಗಾರಿಕೆಯ ಹುಚ್ಚು ಹಚ್ಚಿಕೊಂಡಿರುವ ಅವರ ಆಸಕ್ತಿ, ಶ್ರದ್ಧೆ ದಿವ್ಯವಾದದ್ದು. ಅವರ ತೋಟವೆಂದರೆ ನಿತ್ಯ ನೂತನ ಸಸ್ಯ ಸಂಗ್ರಹಾಲಯ. ವ್ಯಾವಹಾರಿಕ ಲಾಭದ ದೃಷ್ಟಿಯನ್ನು ಮೀರಿ ಸೃಷ್ಟಿಯ ವೈವಿಧ್ಯಗಳನ್ನು ಪ್ರೀತಿಸುವ, ಬೆಳೆಸುವ ಇಂಥ ಕೃಷಿಕರೇ ನಾಡಿನ ನಿಜವಾದ ಅನ್ನದ ನಿಧಿಗಳು. ಅಲ್ಲವೇ..?





## ಉತ್ತರ ಕನ್ನಡ ಸಾವಯವ ಜಿಲ್ಲೆ

ಉತ್ತರಕನ್ನಡ ಜಿಲ್ಲೆ ನಿಸರ್ಗ ಸೌಂದರ್ಯಕ್ಕೆ ಹೆಸರಾದಂತೆ ನೈಸರ್ಗಿಕ ಬದುಕಿಗೂ ಹೆಸರಾಗಿದೆ. ಇಂದಿಗೂ ಇಲ್ಲಿನ ಹೆಚ್ಚಿನ ಕೃಷಿ ಸಾವಯವವೇ ಆಗಿದೆ. ಇಲ್ಲಿನ ಗುಡ್ಡ ಬೆಟ್ಟಗಳೆಲ್ಲ ಅನ್ನದ ಬಟ್ಟಲುಗಳೇ ಆದ್ದರಿಂದ ಸಾವಯವ ಸಹಜವೇ ಆಗಿದೆ. ಹೆಚ್ಚಿನ ಕೃಷಿಕರು ಅವಲಂಬಿಸಿರುವ ಅಡಕೆ, ಮಾರುಕಟ್ಟೆಗೆ ಬರುವವರೆಗೂ ಸಾವಯವವೇ. ನಂತರ ಬೆರೆಸುವ ಬಣ್ಣ ರಾಸಾಯನಿಕವಾದರೆ ಅದರಲ್ಲಿ ಕೃಷಿಕರ ಬಾಧ್ಯತೆ ಏನೂ ಇಲ್ಲ. ಭತ್ತದ ಬೆಳೆಗೆ ಕೆಲವರು ರಾಸಾಯನಿಕ ಸಿಂಪರಣೆ ಮಾಡುತ್ತಾರೆ. ಕೆಲವರು ಸಾವಯವ ರೀತಿಯಲ್ಲೇ ಬೆಳೆಯುತ್ತಾರೆ. ಇನ್ನುಳಿದಂತೆ ದ್ವಿದಳ ಧಾನ್ಯ ಬೆಳೆಯುವವರಲ್ಲಿ ಹೆಚ್ಚಿನವರು ರಾಸಾಯನಿಕ ಬಳಸುವುದಿಲ್ಲ. ಬಾಳೆಯಿಂದಾರಂಭಿಸಿ ಹೆಚ್ಚಿನ ತೋಟಗಾರಿಕಾ ಬೆಳೆಗಳು ಉತ್ತರಕನ್ನಡದಲ್ಲಿ ಸಾವಯವ ಉತ್ಪನ್ನಗಳು. ಈ ಸಂದರ್ಭದಲ್ಲಿ ಜಿಲ್ಲೆಯ ಕೃಷಿಯನ್ನು ಸಂಪೂರ್ಣ ಸಾವಯವವಾಗಿಸುವ ಗುರಿ ಕದಂಬಕ್ಕಿದೆ. ಅದಕ್ಕಾಗಿ ಸೂಪರ್‌ಫುಡ್‌ಗಳನ್ನೂ, ಸೂಕ್ಷ್ಮಾಣುಜೀವಿ ತಂತ್ರಜ್ಞಾನವನ್ನೂ ಇನ್ನಷ್ಟು ಪರಿಚಯಿಸುವ ಪ್ರಯತ್ನ ನಡೆಯುತ್ತಿದೆ. ಜೊತೆಯಲ್ಲಿ, ಎಲ್ಲ ಕೃಷಿಕರಲ್ಲೂ ಮಣ್ಣಿನ ಆರೋಗ್ಯದ ಬಗ್ಗೆ, ಬೆಳೆಯ ಗುಣಮಟ್ಟದ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಿದೆ.

ಉತ್ತರ ಕನ್ನಡದ ವಿಶೇಷವೆಂದರೆ ಇಲ್ಲಿಯ ಸಾವಯವ ವೈವಿಧ್ಯ. ಮೀನು, ಜೇನು, ಇಶಾಡ ಮಾವು, ಭಟ್ಕಳದ ಮಲ್ಲಿಗೆ, ಕುಮಟಾದ ನೀರುಳ್ಳಿ, ಹೊನ್ನಾವರದ ರಾಣಿಎಲೆ, ಲಾವಂಚ, ಮುರುಗಲು, ಗೇರು, ಉಪ್ಪಾಗೆ, ಹಲಸು, ಕಾಳುಮೆಣಸು, ಕೆಸುವಿನ ಬೆಳೆ, ಹೀಗೆ ಅಡಕೆಯನ್ನು ಹೊರತುಪಡಿಸಿಯೂ ಬೇರೆ ಬೇರೆ ಬೆಳೆಗಳ ಆಧಾರದಲ್ಲಿ ತೋಟಗಾರಿಕೆಯ ವಿಕಾಸಕ್ಕೆ ಅವಕಾಶಮಾಡಿಕೊಡಬಹುದು. ಇವುಗಳ ಸಂಗಡ ಬಾಳೆ, ವೆನಿಲ್ಲಾ, ಶ್ರೀಗಂಧ, ಬಜೆಬೇರು, ಗೌರಿಹೂವು, ಪಾಮರೋಸ್, ಸಿಟ್ರೋನೆಲ್ಲಾ ಮುಂತಾದ ಬೆಳೆಗಳನ್ನೂ ಸಾವಯವ ಪದ್ಧತಿಯಲ್ಲಿ ಬೆಳೆದು ಬಹುಬೆಳೆಯ ಸಾವಯವ ಜಿಲ್ಲೆಯನ್ನಾಗಿ ಪರಿವರ್ತಿಸುವ ಸುವರ್ಣಾವಕಾಶ ನಮ್ಮ ಮುಂದಿದೆ.

# ಪೂರ್ಣತೆಯತ್ತ ಪೂರಕ ಕೃಷಿ

ಒಂದೋ ಅಡಕೆ ಬೆಳೆಯಬೇಕು ಇಲ್ಲವೇ ಭತ್ತ ಬೆಳೆಯಬೇಕು ಅಂದರೇ ಕೃಷಿಕರು ಎಂದಂದುಕೊಂಡಿದ್ದೆವು. ಹೂವು, ಹುಲ್ಲು, ತರಕಾರಿಗಳನ್ನು ಬೆಳೆದವರು ಕೃಷಿಯ ಮುಖ್ಯ ವಾಹಿನಿಯಲ್ಲಿದ್ದವರಲ್ಲ ಎನ್ನುವ ಧೋರಣೆ ಇತ್ತು. ಆದರೆ, ಇಂದು ಪೂರಕ ಕೃಷಿಯೂ ಪೂರ್ಣ ಪ್ರಮಾಣದ ಉದ್ಯೋಗವಾಗಿ, ಉದ್ಯಮವಾಗಿ ವಿಕಾಸಗೊಂಡಿದೆ. ರಫ್ತು ಮಾರುಕಟ್ಟೆಯಲ್ಲಿ ತನ್ನ ಸ್ಥಳ ಕಂಡುಕೊಂಡಿದೆ. ಕಿರಿದಾದ ಭೂಮಿಯಲ್ಲಿ ಹಿರಿದಾದ ಫಸಲನ್ನು ನೀಡಿ ಅನೇಕರ ಬದುಕಿಗೆ ಬಣ್ಣ ತುಂಬಿದೆ.



## ಪುಷ್ಪ ಕೃಷಿ

ಭಟ್ಕಳದ ಮಲ್ಲಿಗೆ ವಿಶೇಷ ಪರಿಮಳದ ಮಲ್ಲಿಗೆ. ವಿದೇಶಗಳಲ್ಲೂ ಅದಕ್ಕೆ ತುಂಬಾ ಬೇಡಿಕೆ. ಹತ್ತಿರದ ಕೆಲವು ದೇವಾಲಯಗಳಿಗೆ ಭಟ್ಕಳದ ಮಲ್ಲಿಗೆಯ ಪರಿಮಳ ಬೇಕೇ ಬೇಕು. ಜಿಲ್ಲೆಯಲ್ಲಿ ಪುಷ್ಪ ಕೃಷಿಯ ಅಸೀಮ ಸಾಧ್ಯತೆಗಳಿದ್ದು ಅನೇಕರು ಪ್ರಯತ್ನಿಸುತ್ತಿದ್ದಾರೆ. ಮನೆಯಂಗಳದಲ್ಲಿ ಹಸಿರುಮನೆ (Green House) ಮಾಡಿಕೊಂಡು ಕೃಷಿಗೆ ತೊಡಗಿದವರೂ ಇದ್ದಾರೆ. ಅನುಕೂಲ ಹವಾಮಾನ, ವ್ಯಾವಹಾರಿಕ ಅವಕಾಶಗಳಿದ್ದರೂ ಹೂವುಗಳ ಮೇಲೆ ಎರಗುವ ಕೀಟಗಳ ಬೇಟೆಗೆ ರಾಸಾಯನಿಕ ಸಿಂಪರಣೆ ಅನಿವಾರ್ಯ. ಹಾಗಾಗಿ ಉತ್ಪಾದನಾ ವೆಚ್ಚ ಹೆಚ್ಚಾಯಿತು, ಹೂವುಗಳ ಆಯುಷ್ಯ ಕಡಿಮೆಯಾಯಿತು. ಇದನ್ನೆಲ್ಲ ಗಮನಿಸಿದ ಕದಂಬ ಕೆಲವು ಪುಷ್ಪ ಕೃಷಿಕರಿಗೆ ಸೂಕ್ಷ್ಮಾಣುಜೀವಿ ತಂತ್ರಜ್ಞಾನದ ಉಪಯೋಗಕ್ಕಾಗಿ ಮಾರ್ಗದರ್ಶನ ನೀಡಿತು. ಮುಂಡಗೋಡ ತಾಲೂಕು ಕಾತೂರಿನ ಶ್ರೀ ಶಶಿಧರ ಗಣೇಶ ಆರೇಕೊಪ್ಪ ಹೇಳುತ್ತಾರೆ “ನಾನು ಮಲ್ಲಿಗೆ ಹೂವಿನ ಕೃಷಿ ಮಾಡುತ್ತ ಬಂದವನು. ಕೀಟಗಳಿಂದ ಹೂವನ್ನು ರಕ್ಷಿಸುವುದು ಕಷ್ಟವಾಗುತ್ತಿತ್ತು. ರಾಸಾಯನಿಕಗಳ ಸಿಂಪರಣೆಯಿಂದ ಖರ್ಚು ಹೆಚ್ಚಾಗುತ್ತಿತ್ತು. ಅಲ್ಲದೆ, ದೇವರಿಗೆ ಸಲ್ಲುವ ಹೂವಿನಲ್ಲಿ, ಮುಡಿಗೇರುವ ಮಾಲೆಯಲ್ಲಿ ವಿಷವನ್ನು ತುಂಬುತ್ತಿದ್ದೇನೆ ಎನ್ನುವ ಕೊರಗಿತ್ತು. ಸೂಕ್ಷ್ಮಾಣುಜೀವಿ ತಂತ್ರಜ್ಞಾನದ ಬಳಕೆಯಿಂದ ನನಗೆ ಅನುಕೂಲವಾಯ್ತು. ಖರ್ಚು ಕಡಿಮೆಯಾಯ್ತು. ಇದೀಗ ನಾನು ಬೆಳೆಯುವ ಹೂವು ಸಾವಯವ ಕೃಷಿಯಿಂದ ಬಂದುದೇ. ಅದೇ ದೊಡ್ಡ ಸಮಾಧಾನ, ಸಂತೃಪ್ತಿ.

# ತರಕಾರಿ

ಪ್ರತಿದಿನ ಗೋಕರ್ಣದ ಬೀದಿಯಲ್ಲಿ ಮುಂಜಾನೆಯಾಗುತ್ತಿದ್ದಂತೆ ಹಾಲಕ್ಕಿ ಹೆಣ್ಣುಮಕ್ಕಳು ತರಕಾರಿ ಬುಟ್ಟಿಗಳೊಂದಿಗೆ ಹಾಜರಾಗುತ್ತಾರೆ. ನಿದ್ದೆಯಿಂದೆದ್ದ ಬೆಳಗಿನಂತೆ ತಾಜಾ ಆಗಿರುವ ತರಕಾರಿಗಳು ಎಳೆ ಬೆಳಕಿನ ಕಿರಣದಂತೆ ಹೊಳೆಯುತ್ತಿರುತ್ತವೆ. ಬದನೆಕಾಯಿ, ಬಸಳೆ, ನುಗ್ಗೆಕಾಯಿ, ಹರಿವೆಸೊಪ್ಪು, ಬೆಂಡೆಕಾಯಿ, ಬೀನ್ಸ್‌ಗಳು, ಮೊಗೆಕಾಯಿ ಮುಂತಾದವು ಕರಾವಳಿಯ ಮರಳಿನಲ್ಲಿ ಬೆಳೆದ ಸಾವಯವ ಉತ್ಪನ್ನಗಳು. ಈ ಆರೋಗ್ಯಕರ ತರಕಾರಿಗಳ ರುಚಿಯನ್ನು ಬಲ್ಲವರು ಬೇರೆ ತರಕಾರಿಗಳನ್ನು ಮೆಚ್ಚಲಾರರು. ಆದರೆ, ಕರಾವಳಿಯುದ್ದಕ್ಕೂ ಈ ರೀತಿ ತರಕಾರಿಗಳನ್ನು ಬೆಳೆಯುವವರ ಬದುಕಿಗೆ ಇಷ್ಟು ರುಚಿಯಾಗಲಿ, ತಾಜಾತನವಾಗಲಿ ಇಲ್ಲ ಎನ್ನುವುದು ಕೂಡ ಅಷ್ಟೇ ವಾಸ್ತವ. ಅವರೆಲ್ಲರ ಬದುಕನಲ್ಲಿಯೂ ಭರವಸೆಯ ಬೆಳಕು ಮೂಡಬೇಕಾದರೆ ತರಕಾರಿಗಳಿಗೆ ಯೋಗ್ಯ ಮಾರುಕಟ್ಟೆ ಸಿಗಬೇಕು, ಈ ವಿಷರಹಿತ ತರಕಾರಿ ಬೆಳೆಯ ಆರೈಕೆಗೆ ಬೇಕಾದ ಸಂಗತಿಗಳು ಕೂಡ ಅತಿ ಸುಲಭ ದರದಲ್ಲಿ ಸಿಗಬೇಕು. ಈ ವಿಷಯದಲ್ಲಿಯೂ ಸೂಕ್ಷ್ಮಾಣುಜೀವಿ ತಂತ್ರಜ್ಞಾನವನ್ನು ಬಳಸಲು ಕದಂಬ ಉತ್ಸುಕವಾಯಿತು. ಆಯ್ದ ಕೃಷಿಕರನ್ನು ಒಪ್ಪಿಸಿ ಹೊಸತನದ ಉಪಕ್ರಮಕ್ಕೆ ಬೇಕಾದ ಮಾರ್ಗದರ್ಶನ ನೀಡಿದೆವು. ಪರಿಣಾಮ ಇಂದು ಲಾಭದಾಯಕವಾಗಿದೆ. ತರಕಾರಿಗಳ ಸುಸ್ಥಿರ ಬೇಸಾಯದ ಸಾಧ್ಯತೆಗಳು ತೆರೆದುಕೊಂಡಿವೆ. ಉತ್ತರ ಕನ್ನಡ ಜಿಲ್ಲೆ, ತರಕಾರಿ ಬೆಳೆಯಲ್ಲಿ ಉತ್ತಮ ಸಾಧನೆ ಮಾಡುವ ಅವಕಾಶ ಹೇರಳವಾಗಿದೆ. ಸುವರ್ಣ ಗಡ್ಡೆ, ಕೆಸುವಿನ ಗಡ್ಡೆ–ಸೊಪ್ಪು, ಹಲಸು, ಬೇರು ಹಲಸು, ಮೊಗೆಕಾಯಿ ಮುಂತಾದ ನೆಲಮೂಲದ ವೈವಿಧ್ಯಗಳನ್ನು ಹೊರಪ್ರದೇಶಗಳಿಗೆ ಪರಿಚಯಿಸುವ ಪ್ರಯತ್ನವಾಗಬೇಕು. ಇದರಿಂದ ತಳಸ್ತರದ ಕಾಯಕ ಯೋಗಿಗಳಿಗೆ ಹೊಸ ಉದ್ಯಮವೊಂದು ತೆರೆದುಕೊಳ್ಳುತ್ತದೆ, ಅಭಿಮಾನದ ಬದುಕಿಗೆ ಹಾದಿಯಾಗುತ್ತದೆ.





## ದೊರಕಿದ ಜಿ.ಐ ಟ್ಯಾಗ್

ವಿಷರಹಿತವಾದ ಪರಂಪರೆಯ ಕೃಷಿಯನ್ನು ಗುರುತಿಸಿರುವ ವ್ಯವಸ್ಥೆ; ಪ್ರಾದೇಶಿಕ ಅನನ್ಯತೆ, ಮಧ್ಯವರ್ತಿಗಳಿಲ್ಲದ ವ್ಯವಹಾರ, ಗುಣಮಟ್ಟದ ಅಧಿಕೃತತೆಗಳನ್ನು ಗಮನಿಸಿ ಕಾನೂನಿನ ಮಾನ್ಯತೆಯೊಂದಿಗೆ ಜಿ.ಐ ಟ್ಯಾಗ್ (ಜಿಯೋಗ್ರಾಫಿಕಲ್ ಇಂಡಿಕೇಶನ್) ನೀಡಿದೆ. ಇದು, ಬೆಳೆಯ ಗುಣವಿಶೇಷಕ್ಕೂ, ಬೆಳೆಗಾರನ ಪರಿಶ್ರಮಕ್ಕೂ ಸಂದ ಮಾರುಕಟ್ಟೆಯ ಭರವಸೆಯಾಗಿದೆ. ಗ್ರಾಹಕರಿಗೆ ಈ ತರಕಾರಿಗಳ ನಿಯಮಿತ ಲಭ್ಯತೆಗಾಗಿ ನಬಾರ್ಡ್ ಸಹಾಯದಲ್ಲಿ ಎ.ಪಿ.ಎಂ.ಸಿ.ಯಲ್ಲಿ ಮಾರುಕಟ್ಟೆ ನಿರ್ಮಾಣವಾಗಿದೆ.

# ಆರೋಗ್ಯ ಸಾಧಕ, ಸೌಂದರ್ಯ ವರ್ಧಕ ಹಣ್ಣು ಡ್ರ್ಯಾಗನ್ ಫ್ರೂಟ್

ಬಿಸಿಲಿಗೆ ಮೈಬಿಟ್ಟು ಬೆಳೆದು, ಬಣ್ಣದ ಹಣ್ಣು ನೀಡುವ ಡ್ರಾಗನ್‌ಫ್ರುಟ್ ನೋಡಲು ಅನಾನಸ್‌ನ ಪರಿವಾರದ ಹಣ್ಣಿನಂತೆ ಭಾಸವಾಗುತ್ತದೆ. ಗುಲಾಬಿ ಬಣ್ಣದ ಹೊಳಪಿನ ಮೈಯುಳ್ಳ ಈ ಹಣ್ಣು ಆಹಾರವೂ ಹೌದು, ಔಷಧವೂ ಹೌದು. ಕಳ್ಳಿ (Cactus) ಕುಟುಂಬಕ್ಕೆ ಸೇರಿದ ಡ್ರಾಗನ್‌ಫ್ರುಟ್ ಉಷ್ಣವಲಯದಲ್ಲಿ ಹುಲುಸಾಗಿ ಬೆಳೆಯುತ್ತದೆ. ಕಡಿಮೆ ಪ್ರಮಾಣದಲ್ಲಿ ಮಣ್ಣು ನೀರುಗಳನ್ನು ಬಯಸುವ ಇದು ಬಿಸಿಲಿನ ಶಕ್ತಿಯನ್ನೇ ಫಲವಾಗಿ ನೀಡುತ್ತದೆ. ಉತ್ತರ ಕನ್ನಡದ ಅರೆಮಲೆನಾಡು ಬಯಲುಸೀಮೆಯ ಪ್ರದೇಶಗಳಲ್ಲಿ ಉತ್ತಮವಾಗಿ ಬೆಳೆಯಬಹುದಾದ ಹಣ್ಣು. ಉಳಿದ ಪ್ರದೇಶಗಳಲ್ಲೂ ಅನಾನಸ್ ಬೆಳೆದ ಹಾಗೆ ಬೆಳೆಯಬಹುದು. ಹುಳಿ ಮತ್ತು ಸಿಹಿ ರುಚಿಗಳಲ್ಲಿ ಲಭ್ಯವಿರುವ ಡ್ರಾಗನ್‌ಫ್ರುಟ್ ನೈರುತ್ಯ ಏಶಿಯಾ, ಫ್ಲೋರಿಡಾ, ಆಸ್ಟ್ರೇಲಿಯಾಗಳಲ್ಲಿ ಪ್ರಸಿದ್ಧ. ಸಿಹಿ ರುಚಿಯ ಹಣ್ಣು ಕಲ್ಲಂಗಡಿಯ ರುಚಿಗೆ ಹತ್ತಿರವಾದದ್ದು. ಕಡಿಮೆ ಕೊಬ್ಬು, ಹೆಚ್ಚು ನಾರಿನಂಶ ಹೊಂದಿರುವ ಈ ಹಣ್ಣುಗಳ ನಿಯಮಿತ ಸೇವನೆಯಿಂದ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ಖನಿಜಾಂಶಗಳು, ವಿಟಮಿನ್ ಸಿ, ಪೊಟ್ಯಾಸಿಯಂ ಮುಂತಾದ ಅಂಶಗಳನ್ನು ಹೇರಳವಾಗಿ ಹೊಂದಿರುವ ಡ್ರಾಗನ್‌ಫ್ರುಟ್ ವಿವಿಧ ಬಣ್ಣದ ಗುಳದಿಂದ ತುಂಬಿರುತ್ತದೆ. ಹೃದಯಕ್ಕೆ ಪೂರಕವಾದ ಆಹಾರವಿದು. ಸುಕ್ಕಾಗದಂತೆ ಚರ್ಮದ ಆರೋಗ್ಯವನ್ನು ಕಾಪಾಡುತ್ತದೆ. ಆದ್ದರಿಂದ ಸೌಂದರ್ಯದ ಕಾಳಜಿಗೂ ಪೂರಕ. ಬಿಸಿಲನ್ನೇ ಉಂಡು ಬೆಳೆಯುವ ಕಳ್ಳಿಯಾದ್ದರಿಂದ ಚಾವಣಿಯಲ್ಲಿಯೂ ಬೆಳೆಯಬಹುದು. ಈ ಹಣ್ಣಿನ ವ್ಯಾಪಕ ಪರಿಚಯ ಮತ್ತು ಬೇಸಾಯದ ಕ್ರಮ ಇನ್ನೂ ನಮಗೆ ಆಗಬೇಕಿದೆ. ಕದಂಬ ಈ ವಿಷಯದಲ್ಲಿ ಹೆಚ್ಚಿನ ಪ್ರಯತ್ನಕ್ಕೆ ಕೈ ಹಾಕಿದ್ದು ಜಿಲ್ಲೆಗೆ ಹೊಸದೊಂದು ಯಶಸ್ವೀ ಕೃಷಿಯನ್ನು ಪರಿಚಯಿಸುವ ಹಂಬಲದಲ್ಲಿದೆ. ನೀರಿನ ಅಗತ್ಯ ಅಲ್ಪವಾಗಿರುವ, ಕಾರ್ಮಿಕರ ಅವಲಂಬನೆ ಕಡಿಮೆಯಾಗಿರುವ, ಸುಲಭದಲ್ಲಿ ಸಾವಯವ ಕೃಷಿಗೆ ಒಗ್ಗುವ ಬೆಳೆಯನ್ನು ರೈತರಿಗೆ ಪರಿಚಯಿಸುವ ಆಶಯ ಕದಂಬದ್ದು. ಉತ್ತರಕನ್ನಡ ಜಿಲ್ಲೆಯಲ್ಲಿ ಮೊತ್ತಮೊದಲ ಬಾರಿಗೆ ನನ್ನ ಮನೆಯಲ್ಲಿಯೇ ಈ ಹಣ್ಣುಗಳನ್ನು ಬೆಳೆದೆ. ಈಗಲೂ ಅದು ಮುಂದುವರಿದಿದೆ.



# ಜೇನು ಕೃಷಿ

ಯಲ್ಲಾಪುರ ತಾಲುಕಿನ ಕೆಲವು ಮರಗಳು ಇನ್ನೂರಕ್ಕೂ ಹೆಚ್ಚು ಹೆಜ್ಜೇನಿನ ಗೂಡುಗಳಿಗೆ ಆಶ್ರಯ ನೀಡುತ್ತವೆ. ಜೇನನ್ನು ಕಂಡಾಗಲೆಲ್ಲ ಜೀವನೋತ್ಸಾಹ ಗರಿಗೆದರುತ್ತದೆ. ಮರಗಳು ಸಿಗದಿದ್ದರೆ ದೊಡ್ಡ ಕಟ್ಟಡದ ಮೇಲ್ಛಾವಣಿಗೆ, ಸೇತುವೆಯ ಅಡಿಗೆ, ಅದಿಲ್ಲವಾದರೆ ಮೊಬೈಲ್ ಟಾವರ್‌ಗೆ ನೇತುಬೀಳುವ ಜೇನು ಗೂಡುಗಳನ್ನು ನೋಡಿದಾಗ ಅವುಗಳ ಬದುಕಿನಲ್ಲಿ ಆಗಿರುವ ಮಾನವ ಹಸ್ತಕ್ಷೇಪ ಕಣ್ಣಿಗೆ ರಾಚುತ್ತದೆ. ರಾಮಾ ಸಿದ್ದಿ ಆ ಹೆಜ್ಜೇನನ್ನು ಕೊಯ್ಯುವಾಗಲೂ ಇಡಿ ಹುಟ್ಟನ್ನು ಹಾಳುಮಾಡದೆ ತುಪ್ಪವಿರುವ ಭಾಗವನ್ನು ಮಾತ್ರ ತೆಗೆದುಕೊಂಡು ಜೇನಿಗೆ ಅದರ ಮನೆಯನ್ನು ಉಳಿಸಿಕೊಟ್ಟು ಮತ್ತೆ ಮತ್ತೆ ಜೇನು ತುಪ್ಪ ಪಡೆಯುತ್ತಾನೆ. ಆ ಕೌಶಲವನ್ನು ಕಂಡಾಗ ಬೆರಗಾಗುತ್ತದೆ! ಆದರೆ, ಇದೆಲ್ಲದರ ನಡುವಯೂ ಜೇನಿನ ಸಂಖ್ಯೆ ಕಡಿಮೆಯಾಗುತ್ತಿದೆ, ಜೇನು ತುಪ್ಪಕ್ಕಾಗಿ ಬೇಡಿಕೆ ಹೆಚ್ಚಾಗುತ್ತಿದೆ ಎಂಬ ಮಾತೂ ನಿಜವೇ ಆಗಿದೆ. ವಿಷ ಕೃಷಿಗೆ ಸಿಕ್ಕು ನರಳುತ್ತಿರುವ ಮೊದಲ ಬಲಿ ಜೇನು. ನೆಲದ ನಕ್ಷತ್ರಗಳಾದ ಹೂವುಗಳಿಂದ ಅಮೃತವನ್ನು ಹೀರಿ ಲೋಕಕ್ಕೆ ಮಧುವನ್ನು ನೀಡುವ, ಪರಾಗ ಸ್ಪರ್ಶದ ಮೂಲಕ ಜಗದ ಅನ್ನವನ್ನು ಹೆಚ್ಚಿಸುವ ಈ ಕರ್ಮಯೋಗಿಗಳ ಸಾಮೂಹಿಕ ಹತ್ಯೆಗೆ ಕಾರಣವಾದದ್ದು ನಮ್ಮ ದುರಾಸೆಯ ರಾಸಾಯನಿಕ ಕೃಷಿಯೇ ಅಲ್ಲವೆ?





ಜೇನು ಕೃಷಿಯ ಕುರಿತು ಜಾಗೃತಿ ಮೂಡಿಸುವ ಅಗತ್ಯವನ್ನು ಮನಗೊಂಡ ಕದಂಬ, ಜೇನು ಕೃಷಿ ಕಾರ್ಯಾಗಾರಗಳನ್ನು ಏರ್ಪಡಿಸಿತ್ತು. ನಮ್ಮ ಬದುಕಿನ ರುಚಿಯನ್ನೂ ಸಮೃದ್ಧಿಯನ್ನೂ ಹೆಚ್ಚಿಸುವ ಮಧುಕರಿಯ ಬಗ್ಗೆ ಪ್ರಾಥಮಿಕ ಸಂಗತಿಗಳೂ ನಮ್ಮ ಅನೇಕ ರೈತರಿಗೆ ತಿಳಿದಿಲ್ಲ ಎನ್ನುವುದು ನಮಗೆ ತಿಳಿಯಿತು. ನಾವು ತಿನ್ನುವ ಪ್ರತಿ ಕಾಳಿನ ಮೇಲೂ ಜೇನು ಹುಳುವಿನ ಹೆಜ್ಜೆ ಗುರುತಿದೆ ಎನ್ನುವುದು ನಮ್ಮ ಗಮನಕ್ಕೇ ಬರದಿರುವುದು ಸೋಜಿಗದ ಸಂಗತಿಯಲ್ಲವೆ? ಒಮ್ಮೆ ಜಾಗೃತಿ ಮೂಡಿಸಿದರೆ ಮತ್ತೆ ಚಿಂತಿಸ ಬೇಕಾಗಿಲ್ಲ. ಜೇನು ಸಾಕುವ ವಿಧಾನ, ಜೇನು ಸಾಕಣೆಗೆ ಇರುವ ಪ್ರೋತ್ಸಾಹ, ಜೇನಿನ ಗುಣಮಟ್ಟಗಳ ಕುರಿತು ತಿಳಿಯುವ ಆಸಕ್ತಿ ಜೇನು ಕಾರ್ಯಾಗಾರದಲ್ಲಿ ಪಾಲ್ಗೊಂಡವರೆಲ್ಲರಲ್ಲೂ ಇತ್ತು. ಜೇನು ತುಪ್ಪಕ್ಕೆ ಮಾರುಕಟ್ಟೆ ಸಹಜವಾಗಿ ಸಿಗುವುದರಿಂದ ಕದಂಬ ಖರೀದಿಯ ವ್ಯವಸ್ಥೆಗೆ ಮುಂದಾಗಲಿಲ್ಲ. ಉತ್ತರ ಕನ್ನಡ ಎಲ್ಲ ರೀತಿಯ ಜೇನುಗಳಿಗೆ ಆಶ್ರಯ ನೀಡುವ ವನಸಂಪತ್ತನ್ನು ಹೊಂದಿದೆ. ಪರೋಪಕಾರಿ ಜೇನಿನ ಕುರಿತು ನಾವು ಕೃತಜ್ಞರಾಗಿ, ಪರಸ್ಪರ ಸಹಬಾಳ್ವೆಯ ಸಹಯೋಗ ನೀಡಿದರೆ ಮಾತ್ರ ಜೇನಿನ ಸಂತತಿ ಉಳಿದು ಬೆಳೆಯುತ್ತದೆ. ಅದಿಲ್ಲವಾದಲ್ಲಿ, ಜೇನು ಕೂಡ ಮುಂದಿನ ದಿನಗಳಲ್ಲಿ ಒಂದು ಕೈಗಾರಿಕಾ ಉತ್ಪನ್ನವಾಗಿ ಕೃತಕ ಸಿಹಿ-ಸುವಾಸನೆಗಯೊಂದಿಗೆ ಮಾರುಕಟ್ಟೆಗೆ ಬರಬಹುದಾದಲ್ಲಿ, ಅದೊಂದು ಮಾನವನ ಸ್ವಾರ್ಥದ ದುರ್ದೆಶೆಯೇ ಆದೀತಲ್ಲವೇ..?

## ಸಿಹಿ ಕ್ರಾಂತಿ

(ಸ್ವೀಟ್ ರೆವುಲೇಶನ್) ಎಂದೇ ಕರೆದಿರುವ ಕೇಂದ್ರಸರಕಾರದ 'ನ್ಯಾಶನಲ್ ಹನಿ ಮಿಶನ್' ಜೇನುಕೃಷಿಗೆ ವಿಶೇಷ ಒತ್ತುನೀಡಿದೆ. ನಿರ್ದಿಷ್ಟ ಪ್ರದೇಶಗಳನ್ನು ಗುರುತಿಸಿ ಕಾರ್ಯಕ್ಕೆ ಚಾಲನೆ ನೀಡಿರುವುದರಿಂದ ಈ ಯೋಜನೆ ವ್ಯಾಪಕವಾಗಿ ಕಾರ್ಯಾನುಷ್ಠಾನಗೊಳ್ಳುತ್ತಿದೆ. ಅಪಾರ ಜೀವವೈವಿಧ್ಯದ ತಾಣವಾದ ಉತ್ತರಕನ್ನಡ ಜೇನಿನ ತೊಟ್ಟಿಲೇ ಆಗಿ ಗುರುತಿಸಿಕೊಳ್ಳುವ ಸಾಧ್ಯತೆಯನ್ನು ಹೊಂದಿದೆ.

## ಏರಿಯ ಮೇಲಿನ ಗೇರು

ಗೋಡಂಬಿ ಎಲ್ಲರಿಗೂ ಪರಿಚಿತವಾದ ಬೆಳೆ. ಆದರೂ ಅದನ್ನು ವೈಜ್ಞಾನಿಕವಾಗಿ ಬೆಳೆದ ಉದಾಹರಣೆ ಕಡಿಮೆ. ಬೇಣದ ಬೇಲಿಗುಂಟ, ಗುಡ್ಡದ ಓರೆಯಲ್ಲಿ, ಬೆಟ್ಟದ ಅಂಚಿನಲ್ಲಿ, ಹಾದಿಯ ಬದಿಯಲ್ಲಿ ಗಿಡವಾಗಿ, ಮರವಾಗಿ ಬೆಳೆದಿರುತ್ತವೆ ಎನ್ನುವುದೇ ಎಲ್ಲರ ಅನಿಸಿಕೆಯಾಗಿತ್ತು. ರುಚಿಯಲ್ಲಿ ಅದ್ವಿತೀಯ, ಪೌಷ್ಟಿಕಾಂಶದಲ್ಲಿ ಅಗ್ರಗಣ್ಯ, ಬೆಲೆಯಲ್ಲಿ ದುಬಾರಿ ಎನ್ನಿಸಿದರೂ ಗೇರಿಗೊಂದು ವ್ಯವಸ್ಥಿತ ಕೃಷಿ ಬೇಕು ಎನ್ನುವುದನ್ನೇ ನಮಗನಿಸಿರಲಿಲ್ಲ. ಎಲ್ಲಿ ಬೇಕಾದಲ್ಲಿ ಬೆಳೆದು ಫಲಕೊಡಬಲ್ಲ ಮರಗಿಡಗಳಿಗೆ ಕಾಳಜಿಯ ಆರೈಕೆ, ಉಪಚಾರ ನೀಡುವವರಾರು! ಮಲೆನಾಡು, ಕರಾವಳಿ, ಅರೆಮಲೆನಾಡುಗಳಲ್ಲೆಲ್ಲ ಉತ್ತಮವಾಗಿ ಬೆಳೆಯಬಲ್ಲ ಗೋಡಂಬಿ ಕೃಷಿಗೆ ಕಾಯಕಲ್ಪ ನೀಡುವ ಸಂಕಲ್ಪ ಮಾಡಿದಾಗ ನಮ್ಮ ನೆರವಿಗೆ ಬಂದಿದ್ದು ಕೊಚ್ಚಿಯ ಕೋಕೊ ಮತ್ತು ಗೇರು ಅಭಿವೃದ್ಧಿ ನಿಗಮ. ನಿಗಮದ ಕಡೆಯಿಂದ ವಿಶೇಷವಾಗಿ ಅಭಿವೃದ್ಧಿಪಡಿಸಿದ ತಳಿಗಳನ್ನು ಕದಂಬ, ರೈತರಿಗೆ ಪರಿಚಯಿಸಿತು. ಗೋಡಂಬಿಗೆ ಬೇಡಿಕೆಯ ಮಾರುಕಟ್ಟೆ ಇರುವುದರಿಂದ ಅದರ ಖರೀದಿಯ ವಿಚಾರದಲ್ಲಿ ಮುಂದುವರಿಯಲಿಲ್ಲ. ಕದಂಬದಿಂದ ವಿತರಿಸಲ್ಪಟ್ಟ ಗೇರು ಗಿಡಗಳ ಸಂಖ್ಯೆ 2,77,100. ಈ ಗಿಡಗಳನ್ನು 1159 ಕೃಷಿಕರು 1385 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದಾರೆ. ಈ ಕೃಷಿಕರು ಕೋಕೊ ಮತ್ತು ಗೇರು ಅಭಿವೃದ್ಧಿ ನಿಗಮದಿಂದ ಪಡೆದ ಸಬ್ಸಿಡಿ ರೂ. 2,35,75,000 (ಎರಡು ಕೋಟಿ ಮೂವತ್ತೈದು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿ) ಗೇರು ಕೃಷಿಯ ಖರ್ಚು ಅನುದಾನದಲ್ಲಿಯೇ ಬಂದಿದೆ ಎಂದರೆ ಅತಿಶಯೋಕ್ತಿಯಲ್ಲ. ಈಗ ಗೇರು ಬೀಜದ ಸಿಪ್ಪೆಯಿಂದಲೂ ಎಣ್ಣೆ ತೆಗೆದು ಅದನ್ನು ವಾಹನಗಳ ಇಂಧನವಾಗಿಸುವ ಶೋಧ ನಡೆಯುತ್ತಿರುವುದರಿಂದ, ಮಾಲಿನ್ಯವಿಲ್ಲದ ಜೈವಿಕ ಇಂಧನವಾಗುವ ಅವಕಾಶ ಕಾದಿದೆ.

## ಸುಗಂಧ ಕೃಷಿಯ ಸಮೃದ್ಧ ಅವಕಾಶ ಬಹು ಬೇಡಿಕೆಯ ಪಾಮರೋಸಾ

ಪಾಮರೋಸಾ, ನಮಗೆ ಪರಿಚಿತವಿರುವ ಗೆಜ್ಜೆ ಕರಡದ ಹಾಗೆ ಕಾಣುವ ಹುಲ್ಲು. ಅದರ ಎಣ್ಣೆಗೆ ಗುಲಾಬಿ ಪರಿಮಳವಿರುವುದರಿಂದ ಆ ಹುಲ್ಲಿಗೆ ಪಾಮರೋಸಾ ಎಂಬ ಹೆಸರು. ಸುಗಂಧ ದ್ರವ್ಯಗಳ ಹಾಗೂ ಔಷಧಗಳ ತಯಾರಿಕೆಯಲ್ಲಿ ಬಳಕೆಯಾಗುವ ಪಾಮರೋಸಾ ತೈಲಕ್ಕೆ ಬಹಳ ಬೇಡಿಕೆ ಇದೆ. ನೋವಿನೆಣ್ಣೆಗೆ ಪರಿಮಳ ಬೆರೆಸುವಾಗಲೂ ಪಾಮರೋಸಾ ಬಳಕೆಯಾಗುತ್ತದೆ. ಸ್ವಲ್ಪ ಇಳಿಜಾರಿನ ಬ್ಯಾಣದಲ್ಲಿ, ಬೀಳುಬಿದ್ದ ಭತ್ತದ ಗದ್ದೆಯಲ್ಲಿ ಈ ಹುಲ್ಲು ಬಿಸಿಲಿಗೆ ಮುಖಮಾಡಿ ಹುಲುಸಾಗಿ ಬೆಳೆಯುತ್ತದೆ. 150ರಿಂದ 200 ಸೆಂಟಿಮೀಟರ್ ಮಳೆ ಬೀಳುವ ಅರೆ ಮಲೆನಾಡಿಗೆ ಲಾಭದಾಯಕ ಬೆಳೆ. ಬೇಸಿಗೆಯಲ್ಲಿ ಆಗೀಗ ನೀರು ನೀಡಬೇಕಾಗಿ ಬಂದರೂ ಅದರ ಹೊರೆ ದೊಡ್ಡದಲ್ಲ. ರೋಗದ ಬಾಧೆಯಿಲ್ಲ. ಸರಳ ತಂತ್ರಜ್ಞಾನ. ವರ್ಷಕ್ಕೆ ಮೂರು ನಾಲ್ಕು ಬೆಳೆ ತೆಗೆಯಬಲ್ಲ ಅವಕಾಶ. ಒಮ್ಮೆ ಬಿತ್ತಿದರೆ ಆರು ವರ್ಷಗಳ ಕಾಲ ಅದರಿಂದಲೇ ಬೆಳೆ ತೆಗೆಯಬಹುದು. ಪಾಮರೋಸಾ ತೈಲ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಪಾರ ಬೇಡಿಕೆಯ ವಸ್ತುವಾಗಿದೆ. ಈ ಕೃಷಿಗೆ, ತೈಲದ ಉತ್ಪಾದನೆಗೆ ಕದಂಬ ಮಾರ್ಗದರ್ಶನ ಮಾಡುತ್ತಿದೆ. ತೈಲದ ಖರೀದಿಯನ್ನೂ ಮಾಡಿ ನಿಶ್ಚಿತ ಮಾರುಕಟ್ಟೆಯನ್ನೂ ಒದಗಿಸಿದೆ. ಕೇಂದ್ರ ಸರಕಾರದ ಸಹಯೋಗದಲ್ಲಿ ಮೈಸೂರು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿದೆ.



## ಸ್ವಾಭಾವಿಕ ಕೀಟನಾಶಕ–ಸಿಟ್ರನೆಲ್ಲಾ

ಮಜ್ಜಿಗೆ ಹುಲ್ಲು(ಲೆಮನ್ ಗ್ರಾಸ್)ನ ಜಾತಿಯ ಸಿಟ್ರನೆಲ್ಲಾ, ಕಟು ವಾಸನೆಯಿರುವ ಹುಲ್ಲು. ಸಸಿ ಕಡ್ಡಿಯ ಮೂಲಕ ನಾಟಿ ಮಾಡಿದರೆ ಮುಂದೆ ಮೂರು ವರ್ಷ ಕೂಳೆ ಬೆಳೆಯಾಗಿ ಒದಗುತ್ತದೆ. ಆರಂಭದ ಬೆಳೆಗೆ ಆರೆಂಟು ತಿಂಗಳು ಬೇಕು. ಮುಂದೆ ಪ್ರತಿ ಮೂರು ತಿಂಗಳಿಗೊಮ್ಮೆ ಕೊಯ್ಲಿಗೆ ಬರುತ್ತದೆ. ಸೊರಗು ರೋಗ, ಎಲೆಮುರುಟು ರೋಗಗಳ ಬಾಧೆ ಅಪರೂಪಕ್ಕೆ ಕಾಡುತ್ತದಾದರೂ ಪರಿಹಾರದ ಉಪಾಯಗಳಿವೆ. 150ರಿಂದ 250 ಸೆಂಟಿಮೀಟರ್ ಮಳೆ ಬೀಳುವ ಪ್ರದೇಶ ಬೆಳೆಗೆ ಸೂಕ್ತವಾದದ್ದು. ನೀರು ಬಸಿದುಹೋಗುವ ಇಳಿಜಾರಾದ ಮಣ್ಣು ಸಿಟ್ರನೆಲ್ಲಾ ಬೆಳೆಗೆ ಅನುಕೂಲ. ಇದು ಸ್ವಾಭಾವಿಕ ಕೀಟನಾಶಕವಾಗಿದ್ದು ಸೊಳ್ಳೆಬತ್ತಿ ಮತ್ತು ತಿಗಣೆ ಬತ್ತಿಯಂತಹ ಪ್ರತಿರೋಧಕಗಳ ತಯಾರಿಕೆಯಲ್ಲಿ ಸಿಟ್ರೋನೆಲ್ಲಾ ತೈಲ ಬಳಕೆಯಾಗುತ್ತದೆ. ಅತ್ಯಂತ ಕಡಿಮೆ ಖರ್ಚಿನಲ್ಲಿ ಬೆಳೆಯಬಹುದಾದ ಈ ಬೆಳೆಯಿಂದ, ಒಂದು ವರ್ಷಕ್ಕೆ ಒಂದು ಎಕರೆಗೆ ಒಂದೂವರೆ ಲಕ್ಷ ರೂಪಾಯಿ ತನಕವೂ ಆದಾಯ ಗಳಿಸಬಹುದು. ಉತ್ತರ ಕನ್ನಡದ ಹೆಚ್ಚಿನ ಭಾಗಗಳಲ್ಲಿ ಈ ಬೆಳೆಯನ್ನು ಬೆಳೆಯಬಹುದಾದ್ದರಿಂದ, ಕದಂಬ, ಸಿಟ್ರನೆಲ್ಲಾ ಬೆಳೆಯನ್ನು ಜಿಲ್ಲೆಗೆ ಪರಿಚಯಿಸುತ್ತಿದೆ. ಕೃಷಿಯ ಎಲ್ಲ ಹಂತಗಳಲ್ಲೂ ಮಾರ್ಗದರ್ಶನ ನೀಡುವುದಲ್ಲದೆ ಉತ್ಪಾದಿತ ತೈಲವನ್ನು ಖರೀದಿಸುವ ಮೂಲಕ ನಿಶ್ಚಿತ ಮಾರುಕಟ್ಟೆಯನ್ನೂ ಒದಗಿಸುತ್ತಿದೆ.

## ಶ್ರೀಗಂಧ, ಶತಾವರಿ, ಗೌರಿಹೂವು, ಬಜೆಬೇರು

ಶ್ರೀಗಂಧದ ಗಿಡಗಳನ್ನು ಬೆಳೆಯುವುದೆಂದರೆ ಸಮಸ್ಯೆಯನ್ನು ಮೈಮೇಲೆಳೆದುಕೊಂಡಂತೆ ಎನ್ನುವ ಮಾತಿತ್ತು. ಓಬೀರಾಯನ ಕಾಲದ ಕಾನೂನನ್ನು ಬದಲು ಮಾಡಿದ ಮೇಲೆ ಈಗ ಅನುಕೂಲವಾಗಿದೆ. ಈ ಸಂಬಂಧದಲ್ಲಿ ಒಂದು ವಿಚಾರ ಸಂಕೀರ್ಣವನ್ನು ಕದಂಬ ಏರ್ಪಡಿಸಿತ್ತು. ಶ್ರೀಗಂಧದ ನಾಡು ಎಂದೇ ಕರೆಸಿಕೊಂಡ ಕರ್ನಾಟಕದಲ್ಲಿ ಗಂಧವನ್ನು ಕಾನೂನು ಕಟ್ಟಿಹಾಕಿತ್ತು ಎನ್ನವುದೇ ವಿಚಿತ್ರ! "ನೀ ಮುಟ್ಟುವ ಮರ ಶ್ರೀ ಗಂಧದ ಮರ" ಎಂದು ಕುವೆಂಪು ಹಾಡಿದರು. ಆದರೆ ನಾನು ಗಂಧದ ಮರವನ್ನು ಮುಟ್ಟದೆ ಎನ್ನಲಾಗದ ಸ್ಥಿತಿಯಲ್ಲಿ ನಾವಿದ್ದೆವು. ಉತ್ತರಕನ್ನಡ, ಶಿವಮೊಗ್ಗ, ಮೈಸೂರು ಜಿಲ್ಲೆಗಳು ಗಂಧದ ಕೆತ್ತನೆಗೆ ಹೆಸರು ಮಾಡಿದ ಪ್ರದೇಶಗಳು. ಇತಿಹಾಸ ಪ್ರಸಿದ್ಧ ಯಾತ್ರಾ ಸ್ಥಳಗಳೂ ಇಲ್ಲಿವೆ. ಕೆತ್ತನೆಯ ಕೌಶಲ್ಯಕ್ಕೆ ಬಿತ್ತನೆಯ ಬೆಂಬಲವೂ ಸಿಗಲಿ ಎಂದು ವಿಚಾರ ಸಂಕಿರಣ ಮಾಡಿದೆವು. ಅನೇಕರು ಆಸಕ್ತಿ ಹೊಂದಿ ಅರಣ್ಯ ಇಲಾಖೆಯ ನರ್ಸರಿಯಿಂದ ಗಂಧದ ಗಿಡಗಳನ್ನು ಒಯ್ದು ನೆಟ್ಟಿದ್ದಾರೆ.

ಶ್ರೀಗಂಧದ ಸಂಗಡ ಶತಾವರಿ, ಬಜೆಬೇರು, ಗೌರಿಹೂವುಗಳ ಕುರಿತು ಮಾಹಿತಿ ನೀಡಿದೆವು. ಕೃಷಿಕರು ಆಸಕ್ತಿಯಿಂದ ಬೆಳೆಸಿದರೆ, ಇವೆಲ್ಲ ಕಾಸನ್ನು ತರುವ ಬೆಳೆಗಳು. ವಿಶೇಷ ಶ್ರಮವಿಲ್ಲದೆ ಬೆಟ್ಟಗಳಲ್ಲಿ ಬೆಳೆಯಬಹುದಾದ ಈ ಬೆಳೆಗಳ ಕುರಿತು ಹೆಚ್ಚಿನವರಿಗೆ ಇನ್ನೂ ತಿಳಿದಿಲ್ಲದಿರುವುದೇ ಅತ್ಯಂತ ದುಃಖದ ಸಂಗತಿ. ಈ ಎಲ್ಲ ಬೆಳೆಗಳ ಔಷಧೀಯ ಗುಣಗಳನ್ನು ಹೊಸತಲೆಮಾರಿನ ಆಯುರ್ವೇದಕ್ಕೆ ಅಡಿಪಾಯವಾಗಿ ಬಳಸಿಕೊಳ್ಳುವ ಸಾಧ್ಯತೆಯನ್ನು ಕದಂಬ ಪರಿಶೀಲಿಸುತ್ತಿದೆ. ಅದಕ್ಕೆ ಒತ್ತಾಸೆಯಾಗಿ ನಿಂತಿರುವುದು ಗ್ರೀನ್ ನ್ಯಾನೋ ತಂತ್ರಜ್ಞಾನ.



# ಪುನರುಜ್ಜೀವನದತ್ತ ವೆನಿಲಾ

ಒಂದು ಕಾಲದಲ್ಲಿ ವೆನಿಲ್ಲಾ ಎಂಬ ಮೋಹಿನಿಯ ಹಸಿರು ಬಳುಕಿಗೆ, ಪರಿಮಳದ ಮಾರುಕಟ್ಟೆಗೆ ಮನಸೋತವರು ಬಹಳ! ವೆನಿಲ್ಲಾ ಬೆಳೆಗೆ ಬಂಗಾರದ ಬೆಲೆ ಬಂದು, ಅದರ ಬಿಳಲು ಬೇರುಗಳನ್ನೂ ಕಾಯಬೇಕಾದ ಪರಿಸ್ಥಿತಿ ಬಂದಿತ್ತು. ಬೆಲೆ ಎಷ್ಟಾದರೂ ಆಗಲಿ ವೆನಿಲ್ಲಾ ಕುಡಿ ತಂದು ನಮ್ಮ ತೋಟದಲ್ಲಿ ಹಚ್ಚುತ್ತೇವೆ ಎಂದು ಹಟ ತೊಟ್ಟವರು ಮುಂದೆ ದರ ಕಡಿಮೆಯಾದಾಗ ನಿರ್ದಯೆಯಿಂದ ಕಿತ್ತೊಗೆದರು. ಕೆಲವರು ಅದನ್ನು ಉಳಿಸಿಕೊಳ್ಳೋಣವೆಂದು ಪ್ರಯತ್ನಿಸಿದರೂ ಒಂದು ರೀತಿಯ ಅಜ್ಞಾತ ಫಂಗಸ್ ಕಾಟದಿಂದ ಕೈಸೋತರು. ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನವಲಂಬಿಸಿದ ವೆನಿಲ್ಲಾ ಅಡಿಕೆ ತೋಟದ ಕೃಷಿಕರಿಗೆ ಅನುಕೂಲದ ಪೂರಕ ಬೆಳೆಯೇ ಹೌದು. ಅಂಗಳದ ತುದಿಯ ಗೂಟವನ್ನೂ ಅಪ್ಪಿ ಬೆಳೆದು ಹೂಬಿಟ್ಟು ಕಾಯಾಗುವ ಈ ಪರಿಮಳದ ಬಳ್ಳಿಯನ್ನು ಮತ್ತೆ ಚಿಗುರಿಸುವ ಪ್ರಯತ್ನಕ್ಕೆ ಕೈಹಾಕಿತು ಕದಂಬ. ತಂಪಿನ ವಾತಾವರಣದಲ್ಲಿ ವೆನಿಲ್ಲಾವನ್ನು ಕಾಡುವ ಫಂಗಸ್ ನಿಯಂತ್ರಣಕ್ಕೆ ಸೂಕ್ಷ್ಮಾಣುಜೀವಿ ತಂತ್ರಜ್ಞಾನದ ಬಳಕೆಗೆ ಮುಂದಾದೆವು. ತಾಳ್ಮೆಯುಳ್ಳ, ಪ್ರಯೋಗಶೀಲ ರೈತರಲ್ಲಿ ಕೆಲವರಿಗೆ ಹೊಸ ವೆನಿಲ್ಲಾ ಕುಡಿಗಳನ್ನು ಕೊಟ್ಟು ಕದಂಬದ ಮಾರ್ಗದರ್ಶನದಲ್ಲಿ ಬೆಳೆಯುವಂತೆ ಕೇಳಿಕೊಂಡೆವು.





"ನಾನು ಮೊದಲೂ ವೆನಿಲ್ಲಾ ಕೃಷಿ ಮಾಡಿದವನು. ಈಗ ಕದಂಬದ ಮರ್ಗದರ್ಶನದಲ್ಲಿ ಸಾವಯವ ವಿಧಾನದಲ್ಲಿ ಬೆಳೆಯುತ್ತಿದ್ದೇನೆ. ಮೈಕ್ರೊಬಿಯಲ್ ತಂತ್ರಜ್ಞಾನ ಉಪಯೋಗಕ್ಕೆ ಬಂದಿದೆ. ನನ್ನ ಸಂಬಂಧಿಕರಾದ ಜಂಬೆಕೊಪ್ಪದವರು ಬೇಡವೆಂದು ಒಗೆದ ವೆನಿಲ್ಲಾ ಬಳ್ಳಿಗಳನ್ನು ತಂದು ನೆಟ್ಟಿದ್ದೇನೆ. ಮತ್ತೆ ಶಿರಾಲಿಯಿಂದಲೂ ಒಂದಷ್ಟು ಕುಡಿ ತಂದೆ. ಈಗ ಸುಮಾರು ಐನೂರು ಬಳ್ಳಿ ಬೆಳೆಯುತ್ತಿವೆ. ಮೊದಲ ವರ್ಷ ಅಷ್ಟಾಗಿ ಭರವಸೆ ಕಾಣಲಿಲ್ಲ. ನೆಟ್ಟ ಬಳ್ಳಿ ನಟ್ಟಂತೆಯೇ ಇದೆ ಎಂದುಕೊಂಡೆ. ಮರು ವರ್ಷ ಚಿಗಿತು ಮೇಲೇಳತೊಡಗಿತು. ಮೂರನೆಯ ವರ್ಷ ಕೆಲವು ಬಳ್ಳಿಗಳಲ್ಲಿ ಹೂ ಬಿಟ್ಟು ಕಾಯಿ ಬಂದಿದೆ. ಸೂಕ್ಷ್ಮಾಣುಜೀವಿ ತಂತ್ರಜ್ಞಾನ ಸಂಪೂರ್ಣ ಸಾವಯವವಾಗಿದೆ ಅಷ್ಟೇ ಅಲ್ಲ, ತುಂಬ ಕಡಿಮೆ ಖರ್ಚಿನದ್ದೂ ಆಗಿದೆ. ಆದ್ದರಿಂದ ವೆನಿಲ್ಲಾ ಬೆಳೆಯನ್ನು ವಿಸ್ತರಿಸುವ ಯೋಜನೆ ಇದೆ. ನನ್ನ ಕೃಷಿಯಲ್ಲಿ ಬಾಳೆ, ಗೇರು, ಹೆಬ್ಬೇವು, ಮಾವು, ರಾಂಗುಟಾನ್, ಮುರುಗಲು, ಉಪ್ಪಾಗೆ, ಕಾಳುಮೆಣಸು ಹೀಗೆ ಎಲ್ಲವೂ ಇವೆ. ನರ್ಸರಿಯನ್ನೂ ಮಾಡಿದ್ದೆ. ಕೃಷಿ ಉದ್ಯೋಗವೂ ಹೌದು, ಆಸಕ್ತಿಯ ವಿಷಯವೂ ಹೌದು." ಇದು ಶಿರಸಿ ತಾಲೂಕು ಮುಂಡ್ಗೇರಿಯ ಜಿ.ವಿ. ಹೆಗಡೆಯವರ ಮಾತು. ಕೃಷಿಯಲ್ಲಿ ಉತ್ಸಾಹದೊಂದಿಗೆ ಎಲ್ಲ ಬೆಳೆಗಳನ್ನೂ ಒಳಗೊಳ್ಳುವ ಸಮಗ್ರತೆಯ ವಿವೇಕವೂ ಇದೆ. ಕೃಷಿಯ ಪ್ರಯೋಗಶೀಲತೆ ಅಂದರೆ ಇದೇ ಅಲ್ಲವೆ?

ಕದಂಬದಿಂದ ವೆನಿಲ್ಲಾ ಕುಡಿಗಳನ್ನು ಪಡೆದು ಸೂಕ್ಷ್ಮಾಣುಜೀವಿ ತಂತ್ರಜ್ಞಾನದಲ್ಲಿ ಬೆಳೆಯುತ್ತಿರುವ ಹೊಸ ಉತ್ಸಾಹಿಗಳು 26 ಜನ. ಅವರೆಲ್ಲರ ತೋಟದ ನಿರಂತರ ನಿರೀಕ್ಷಣೆ ಮಾಡುತ್ತಿದೆ ಕದಂಬ. ಮಾರುಕಟ್ಟೆಯಲ್ಲಿ ವೆನಿಲ್ಲಾ ದರ ಆಕರ್ಷಕವಾಗಿರುವುದರಿಂದ ಒಂದು ಲಾಭದಾಯಕ ಪೂರಕ ಬೆಳೆಯಾಗಿ ಇದು ಕೃಷಿಕರನ್ನು ಸಲಹುತ್ತದೆ ಎಂಬ ವಿಶ್ವಾಸ ಕದಂಬಕ್ಕೆ. ಅಲ್ಲದೆ ರಾಸಾಯನಿಕ ರಹಿತ ಸಾವಯವ ಕೃಷಿಯನ್ನು ರೂಢಿಸುವ ನಮ್ಮ ಹಂಬಲಕ್ಕೆ ಬೆಂಬಲವಾಗಿ ನಿಲ್ಲುವ ಈ ಉತ್ಸಾಹಿ ಯುವ ಕೃಷಿಕರು ಭವಿಷ್ಯದ ಭರವಸೆಯೂ ಆಗಿದ್ದಾರೆ. ಅದೇ ಕದಂಬಕ್ಕೆ ನೆಮ್ಮದಿ.



# ಕರೆತಂದ ಕೋಕೊ

ಆಧುನಿಕ ಆಹಾರಗಳಲ್ಲಿ ಆಬಾಲವೃದ್ಧರಿಗೆಲ್ಲ ಆಪ್ಯಾಯಮಾನವಾಗಿರುವ ಚೊಕೊಲೇಟ್, ಐಸ್‌ಕ್ರೀಮ್(ಹಿಮಗಡುಬು) ಮುಂತಾದವುಗಳ ಮುಖ್ಯ ಭಾಗವಾಗಿರುವ ಕೋಕೊ ಸಹಜವಾದ ಬೆಟ್ಟದ ಬೆಳೆ. ಅಡಿಕೆ ತೋಟದಲ್ಲಿ ನೆಟ್ಟರೆ ಹಸಿರನ್ನು ಹೆಚ್ಚಿಸುವ ಆದಾಯದ ಬೆಳೆ. ಕಳೆದೆರಡು ದಶಕಗಳ ಹಿಂದೆ ಸಾಕಷ್ಟು ಪ್ರಚಲಿತವಿದ್ದ ಕೋಕೊ ತನ್ನ ಬೆಲೆ ಕಳೆದುಕೊಂಡು ಯಾರಿಗೂ ಬೇಡದ ಬೆಳೆಯಾಗಿತ್ತು. ಕಿತ್ತೊಗೆದ ಕೋಕೊ ಗಿಡದ ಬೇರಿನ ಜಡಕಿಗೆ ಕಲಾತ್ಮಕ ರೂಪ ಕೊಟ್ಟು ಅಲಂಕಾರಿಕ ವಸ್ತುಗಳನ್ನು ತಯಾರು ಮಾಡಿದ್ದರು ನಮ್ಮ ಜನ. ಮಾರುಕಟ್ಟೆಯ ಭರವಸೆ ಸಿಕ್ಕರೆ ಸುಲಭವಾಗಿ ಬೆಳೆಯುವ ಪೂರಕ ಬೆಳೆ ಕೋಕೊ.  ಹೀಗೆ ಯೋಚಿಸಿದಾಗ ಚೊಕೊಲೇಟ್ ಕಂಪನಿಗಳೊಡನೆ ಒಪ್ಪಂದ ಮಡಿಕೊಂಡು ಕೋಕೊ ಗಿಡವನ್ನು ಅಡಿಕೆ–ತೆಂಗಿನತೋಟಕ್ಕೆ ಮತ್ತೆ ಕರೆತಂದೆವು.

ಕದಂಬದಿಂದ ಕೋಕೊ ಗಿಡಗಳನ್ನು ವಿತರಣೆಮಾಡಿ ದೊಡ್ಡ ಪ್ರಮಾಣದಲ್ಲಿ ಬೆಳೆಯುವಂತೆ ಪ್ರೋತ್ಸಾಹಿಸುವ ಆಂದೋಲನವನ್ನೇ ತೆಗೆದುಕೊಳ್ಳಲಾಯಿತು.  ನಾನು ನೂರಾರು ಊರುಗಳಲ್ಲಿ ಸಭೆ ಮಾಡಿ ರೈತರೊಡನೆ ಮಾತಾಡಿದ್ದೇನೆ. ಕೋಕೊ ಬೆಳೆಯ ಸಾಧ್ಯತೆಗಳು, ಅಗತ್ಯ-ಅನುಕೂಲಗಳ ಬಗ್ಗೆ ವಿವರವಾಗಿ ಸಂವಾದ ಮಾಡಿದ್ದೇನೆ. ಆರಂಭ ಮಾಡಿದಾಗ ವರ್ಷಕ್ಕೆ ಅರ್ಧ ಟನ್ ಇದ್ದ ಬೆಳೆ ಈಗ ಶಿರಸಿ ಸಿದ್ದಾಪುರ ಯಲ್ಲಾಪುರ ತಾಲೂಕುಗಳಲ್ಲಿ 500 ಟನ್ ಆಗಿದೆ. 1573 ನೋಂದಾಯಿತ ರೈತರು ಕದಂಬದಿಂದ ಪಡೆದ ಒಟ್ಟೂ ಕೋಕೊ ಗಿಡಗಳ ಸಂಖ್ಯೆ 5,27,200. ಒಂದು ಎಕರೆಗೆ ಸರಾಸರಿ200 ಗಿಡಗಳನ್ನು ಬೆಳೆಯುತ್ತಾರೆ. ರೈತರಿಗೆ ಎರಡು ಕೋಟಿ ರೂಪಾಯಿಗೂ ಮಿಕ್ಕಿ ಸಬ್ಸಿಡಿ ದೊರಕಿದೆ. ವರ್ಷವೊಂದಕ್ಕೆ ಎಕರೆಗೆ ಸರಿಸುಮಾರು 30ರಿಂದ 35 ಸಾವಿರ ರೂಪಾಯಿ ಉತ್ಪನ್ನವಿದೆ ಎಂದು ಅಂದಾಜುಮಾಡಲಾಗಿದೆ. ಸಿದ್ದಾಪುರ ತಾಲೂಕು ಬಿದ್ರಕಾನ ಗ್ರಾಮದ ಅಧ್ಯಯನಶೀಲ ಯುವ ಕೃಷಿಕ ಶ್ರೀ ಸುರೇಂದ್ರ ಹೆಗಡೆ, ಕೋಕೊ ಕೃಷಿಯಲ್ಲಿ ಪರಿಣತರು. ಅವರ ಅನುಭವದಂತೆ ಅಡಿಕೆ ಕೃಷಿಕರಿಗೆ ಕೋಕೊ ಬೆಳೆ ಹಲವು ರೀತಿಯಲ್ಲಿ ಅನುಕೂಲದ್ದು. ಕೋಕೊ ಬೆಳೆಯನ್ನು ಸ್ಥಳೀಯವಾಗಿ ಖರೀದಿಸಿ, ಪರಿಷ್ಕರಿಸಿ ಮಾರಾಟ ಮಾಡುವ ಸುರೇಂದ್ರ ಹೆಗಡೆ ಸುತ್ತಲಿನ ಉತ್ಸಾಹಿಗಳಿಗೆ ಮಾರ್ಗದರ್ಶನವನ್ನೂ ಮಾಡುತ್ತಾರೆ.

ಕೋಕೊ ಗಿಡಗಳನ್ನು ಅಡಿಕೆ ತೋಟದ ಮಧ್ಯದಲ್ಲಿ ಬೆಳೆಯುವುದರಿಂದ ಅಡಿಕೆ ಮರಗಳಿಗೆ ಸಮಸ್ಯೆಯಾಗುವುದಿಲ್ಲ. ಕೋಕೊ ಕೃಷಿಕ, ಸಿದ್ದಾಪುರದ ನ್ಯಾಯವಾದಿ ಶ್ರೀ ಜಯರಾಮ ಹೆಗಡೆ ಗೋಳಿಕೈ ಹೇಳುತ್ತಾರೆ "ನನ್ನ ತೋಟದಲ್ಲಿ ಸಾಕಷ್ಟು ಕೋಕೊ ಗಿಡಗಳಿವೆ. ನನಗೆ ಅದರ ಕಾಯಿಗಳಿಗಿಂತ ಹೆಚ್ಚಿನ ಲಾಭ ಅದರ ಸೊಪ್ಪಿನಿಂದಲೇ ಆಗುತ್ತಿದೆ. ತೋಟಕ್ಕೆ ಬೇಕಾದಷ್ಟು ಹಸಿರು ಸೊಪ್ಪನ್ನು ಕೋಕೊ ಗಿಡ ನೀಡುತ್ತಿರುವುದರಿಂದ ಅಡಿಕೆ ತೋಟಕ್ಕೆ ಬೇಕಾದಷ್ಟು ಹಸಿರು ಗೊಬ್ಬರವೂ ದೊರಕುತ್ತಿದೆ." ಈ ರೀತಿ ಸಕಾರಾತ್ಮಕವಾಗಿ ವಿಚಾರ ಮಾಡುವ ಕ್ರಮದಿಂದಲೇ ಕೃಷಿಯ ಲಾಭ ನಷ್ಟದ ಲೆಕ್ಕ ಬದಲಾಗುತ್ತದೆ. ಇಂದು ಅರ್ಧ ಕೇಜಿ ಹಸಿ ಕೋಕೊ ಬೀಜ ತಂದರೂ ಖರೀದಿಗೆ ವ್ಯವಸ್ಥೆಯಿದೆ. ತಕ್ಷಣ ಹಣ ನೀಡಲಾಗುತ್ತದೆ. ಪ್ರಾರಂಭದ ದಿನಗಳಲ್ಲಿ ರಾಷ್ಟ್ರೀಯ ತೋಟಗಾರಿಕಾ ಯೋಜನೆಯಲ್ಲಿ ಸಹಕಾರ ಸಿಕ್ಕರೆ ನಂತರದ ದಿನಗಳಲ್ಲಿ ಕೊಚ್ಚಿಯ ಕೋಕೊ ಅಭಿವೃದ್ಧಿ ನಿಗಮದಿಂದ ಸಂಪೂರ್ಣ ಸಹಕಾರ ಸಿಗುತ್ತಿದೆ. ಪ್ರತಿವರ್ಷವೂ ಕೃಷಿ ವಿಸ್ತರಣಾ ಕಾರ್ಯ ಮುಂದುವರಿಯುತ್ತಿದೆ.





# ಧನಲಕ್ಷ್ಮಿಯಾಗಬಲ್ಲ ಧೂಪದ್ರವ್ಯ – ಅಗರ್‌ವುಡ್

ಘಮ ಘಮಿಸುವ ದಿವ್ಯ ಅಗರು ಚಂದನ ಗಂಧ।
ಮಿಗುವ ದಶಾಂಗ ಧೂಪದೊಳಿಡುತ॥
ಸೊಗಸಿನ ಧೂಪದಾರತಿಗೆ ಭಕ್ತಿಯೊಳಿಟ್ಟು।
ಅಗಣಿತ ಮಹಿಮಗಾರತಿ ಎತ್ತುವ॥

ಎನ್ನುತ್ತ ಮಂಗಳಾರತಿಯ ಸಂದರ್ಭದಲ್ಲಿ ಮಾತೆಯರು ಹಾಡುತ್ತಿದ್ದ ಹಾಡು ಮನಸಿನ ಮೂಲೆಯಲ್ಲಿ ಉಳಿದಿತ್ತು. ಆದರೆ ಅಗರು, ಅಗುರು ಎಂದು ಸಂಸ್ಕೃತ ಕನ್ನಡಗಳೆರಡರಲ್ಲೂ ಕರೆಯುವ ಧೂಪದ್ರವ್ಯದ ರೂಪ ಲಕ್ಷಣಗಳ ಪರಿಚಯವೂ ನನಗಿರಲಿಲ್ಲ. ವನದುರ್ಗಿ ಸಂಸ್ಥೆಯ ಶ್ರೀ ಧರ್ಮೇಂದ್ರ ಹೆಗಡೆಯವರು ತೋಟಗಾರಿಕಾ ಬೆಳೆಗಳ ಪಟ್ಟಿಯಲ್ಲಿ ಅಗರ್‌ವುಡ್ ಹೆಸರು ಸೇರಿಸಿದಾಗ ಕುತೂಹಲದಿಂದ ಅದರ ಬಗ್ಗೆ ಕೇಳಿದೆ. ಅವರು ನೀಡಿದ ವಿವರ, ಅಂತರ್ಜಾಲದಲ್ಲಿ ನನ್ನ ಹುಡುಕಾಟದಲ್ಲಿ ಸಿಕ್ಕ ಮಾಹಿತಿಗಳು ನನಗೆ ಹೊಸ ಕನಸನ್ನೇ ಹಚ್ಚಿದವು. ಅಗರು ಬೆಳೆಯುವ ಅಕ್ಕಪಕ್ಕದ ದೇಶಗಳ ಕೃಷಿಯನ್ನು ನೋಡಿದೆ. ನಮ್ಮ ದೇಶದ ಆಸಾಮಿನಲ್ಲಿ, ಕೇರಳದಲ್ಲಿ ಯಶಸ್ವಿಯಾಗಿ ನಡೆಸಿದ ಅಗರ್‌ವುಡ್ ಕೃಷಿಯನ್ನು ಕಂಡ ಮೇಲೆ ನನ್ನ ಕನಸನ್ನು ನೆಲಕ್ಕಿಳಿಸುವ ಹಾದಿಯನ್ನು ಹಿಡಿದೆ. ಅಗರ್‌ವುಡ್ ಗಿಡಗಳನ್ನು ತಂದು ನನ್ನ ಅಡಿಕೆ ತೋಟದಲ್ಲಿ ಬೆಳೆಸಿದೆ. ಸಂಗಡ ಸಹೃದಯೀ ಕೃಷಿಕರಲ್ಲಿ ಈ ವಿಷಯವನ್ನು ಹಂಚಿಕೊಂಡೆ. ಅವರೆಲ್ಲರೂ ಉತ್ಸಾಹ ತೋರಿದ್ದರಿಂದ ಕದಂಬದಿಂದ ಅಗರ್‌ವುಡ್ ಕೃಷಿಯ ಅಭಿಯಾನವೇ ಆರಂಭವಾಯಿತು.

# ಸಾವಿನೆದುರು ಸತ್ವ ಬಿಡುವ ಸುಗಂಧ ವೃಕ್ಷ

ಏಷ್ಯಾದ ದೇಶಗಳ ಎಲ್ಲ ಭಾಷೆಗಳಲ್ಲೂ ಒಂದಲ್ಲ ಒಂದು ಹೆಸರನ್ನು ಪಡೆದಿರುವ ಅಗರು ಪ್ರಾಚೀನ ಕಾಲದಿಂದ ವ್ಯಾಪಕವಾಗಿ ಬಳಕೆಯಲ್ಲಿರುವ ಸುಗಂಧ ದ್ರವ್ಯ. ಕಾಷ್ಠ ಶಿಲ್ಪದ ಸಣ್ಣ ಕಲಾಕೃತಿಯ ಸೂಕ್ಷ್ಮ ಕೆತ್ತನೆಗಳಿಗೆ ಅಗರ್‌ವುಡ್ ಬಳಕೆಯಾಗುತ್ತದೆ. ಅಡಕೆ ಮರಗಳ ಮಧ್ಯೆ ಆಕಾಶಕ್ಕೆ ಮುಖಮಾಡಿ ವೇಗದಲ್ಲಿ ಬೆಳೆಯುವ ಅಗರು ಆರೆಂಟು ವರ್ಷಗಳಲ್ಲಿ 30ರಿಂದ 40 ಅಡಿ ಎತ್ತರಕ್ಕೇರುತ್ತದೆ. ಯಾವುದೇ ವಿಶೇಷ ಕಾಳಜಿಯನ್ನು ಬಯಸದೆ ನೇರವಾಗಿ ಬೆಳೆಯುವ ಮರದ ಗಾತ್ರವೂ ದೊಡ್ಡದಾಗಿರುತ್ತದೆ. ಅಗರು ಮರವನ್ನು ಹಾಗೇ ಬೆಳೆಯುವುದಕ್ಕೆ ಬಿಟ್ಟರೆ ಅದರಿಂದ ಸುಗಂಧ ದ್ರವ್ಯ ಸಿಗುವುದಿಲ್ಲ! ಹತ್ತು–ಹನ್ನೆರಡು ವರ್ಷಗಳ ನಂತರ ಮರಕ್ಕೆ ಸಿದ್ಧ ಪದ್ಧತಿಯಲ್ಲಿ ಚುಚ್ಚುಮದ್ದು ನೀಡಬೇಕಾಗುತ್ತದೆ. ಆ ಮದ್ದಿನ ಸೋಂಕಿನಿಂದಾಗಿ ಮರ ನಿಧಾನವಾಗಿ ಒಣಗುತ್ತದೆ. ಅದು ನಿಧಾನವಾಗಿಯೇ ಒಣಗಬೇಕು. ಚುಚ್ಚುಮದ್ದಿನ ಸೋಂಕನ್ನು ಎದುರಿಸಲು ಮರ ತನ್ನ ಸತ್ವವನ್ನೆಲ್ಲ ಅಂಟಿನ ರೂಪದಲ್ಲಿ ಸ್ರವಿಸುತ್ತದೆ. ಮರ ನಿಧಾನವಾಗಿ ಸಾಯುತ್ತಿರುವಾಗ ಮರದ ಕಾಂಡಗಳಲ್ಲಿ ಕಪ್ಪು ಬಣ್ಣದ ಸುಗಂಧ ದ್ರವ್ಯ ದ್ರವಿಸಿ ಗಟ್ಟಿಯಾಗುತ್ತದೆ. ಅಂಟು ರಾಳದಂತಹ ಈ ವಸ್ತುವೇ ಅತ್ಯಮೂಲ್ಯ ಸುಗಂಧ ದ್ರವ್ಯ ಅಗರು. ದ್ರವಿಸಿದ ಅಗರನ್ನು ಸಂಗ್ರಹಿಸಿ ಹಲವು ವಿಧ ಸುಗಂಧದ ಉತ್ಪನ್ನಗಳಲ್ಲಿ, ಔಷಧ ತಯಾರಿಕೆಯಲ್ಲಿ ಬಳಸುತ್ತಾರೆ. ಅಲ್ಲದೆ ಅಗರಿನ ಮರದ ಕಟ್ಟಿಗೆಯನ್ನು ಭಟ್ಟಿ ಇಳಿಸಿ ಅಗರಿನ ತೈಲವನ್ನು ಸಿದ್ಧಪಡಿಸುತ್ತಾರೆ. ಪ್ರಪಂಚದಾದ್ಯಂತ ಬೇಡಿಕೆಯಿರುವ ಅಗರಿನ ಬೆಲೆಯೂ ಆಕರ್ಷಕವಾದದ್ದು. ಅಗರಿನ ಗುಣಮಟ್ಟದ ಆಧಾರದಲ್ಲಿ ಒಂದು ಕೇಜಿಗೆ ರೂ.1,50,000 ದಿಂದ ರೂ.2,00,000 ದವರೆಗೆ ಬೆಲೆ ಬರುತ್ತದೆ. ಒಂದು ಗ್ರಾಮ್ ಅಗರಿನ ತೈಲಕ್ಕೆ ರೂ. 1500/– ಎಂದರೆ ಆಶ್ಚರ್ಯವಾಗುತ್ತದಲ್ಲವೆ! ಅಗರ್‌ವುಡ್‌ನ ಪ್ರಸ್ತುತ ಜಾಗತಿಕ ಮಾರುಕಟ್ಟೆ 8 ಬಿಲಿಯನ್ ಅಮೇರಿಕನ್ ಡಾಲರ್‌ಗಳಷ್ಟು! ಕೇರಳದಲ್ಲಿ, ಆಸಾಮಿನಲ್ಲಿ ಯಶಸ್ವಿಯಾಗಿರುವ ಅಗರ್‌ವುಡ್ ಕೃಷಿ ಕರ್ನಾಟಕದಲ್ಲಿಯೂ ಯಶಸ್ವಿಯಾಗುತ್ತದೆ ಎಂಬ ಭರವಸೆ ನನ್ನದು. ಕದಂಬದಿಂದ ಅಗರವುಡ್ ಸಸಿ ಪಡೆದು ಬೆಳೆಸಿದ ರೈತರ ಸಂಖ್ಯೆ 1340 ಅವರೆಲ್ಲ ಪಡೆದ ಸಸಿಗಳ ಸಂಖ್ಯೆ 1,71,000. ಈ ಎಲ್ಲ ಸಸಿಗಳನ್ನೂ ರಾಷ್ಟ್ರೀಯ ತೋಟಗಾರಿಕಾ ಮಿಶನ್ ನೀಡುವ ಸಬ್ಸಿಡಿ(ಸಹಾಯ ಧನ) ಯೋಜನೆಯಡಿ ನೀಡಲಾಗಿದೆ. ಅಗರ್‌ವುಡ್ ಬೆಳೆದ ರೈತರಿಗೂ ಸಬ್ಸಿಡಿ ಸಿಗಲಿದೆ.





ಕದಂಬದ ಪ್ರೇರಣೆಯಿಂದ ಅನೇಕರು ಅಗರವುಡ್ ಗಿಡಗಳನ್ನು ಬೆಳೆಸಿದ್ದಾರೆ. ಈಗ ಅವರ ತೋಟ ಬೆಟ್ಟಗಳಲ್ಲಿ ಅಗರವುಡ್ ಮರಗಳು ಚೆನ್ನಾಗಿ ಬೆಳೆದು ನಿಂತಿವೆ. ಆ ಮರಗಳಿಗೆ ನಿಧಾನವಾಗಿ ಒಣಗುವಂತೆ ಚುಚ್ಚುಮದ್ದನ್ನು ನೀಡಿ, ಒಣಗಿದ ಮರವನ್ನು ಕಡಿದು ಅಗರಿನ ಧೂಪ, ಕಡ್ಡಿ ಮುಂತಾಗಿ ವಿಭಾಗಿಸಿ ಮಾರಾಟಕ್ಕೆ ಸಿದ್ಧಗೊಳಿಸಲಾಗುತ್ತಿದೆ. 'ವನದುರ್ಗಿ ಅಗರವುಡ್ ಇಂಡಿಯಾ ಲಿಮಿಟೆಡ್' ಎನ್ನುವ ಕಂಪನಿ ಈ ವಿಷಯದಲ್ಲಿ ಸಂಪೂರ್ಣ ಮಾರ್ಗದರ್ಶನ ಮಾಡುತ್ತಿದೆ. ಸಿದ್ಧವಾದ ಉತ್ಪನ್ನ ಗಳ ಖರೀದಿಯನ್ನೂ ಮಾಡುತ್ತಿದೆ. ಚೆನ್ನಾಗಿ ಬೆಳೆದ ಒಂದು ಮರದಿಂದ ಹದಿನೈದರಿಂದ ಇಪ್ಪತ್ತು ಸಾವಿರ ರೂಪಾಯಿಗಳ ಆದಾಯ ಸಿಗುತ್ತದೆ ಎನ್ನುವುದು ಅನುಭವಕ್ಕೆ ಬಂದಿದೆ. ಅಗರವುಡ್ ಬೆಳೆದ ಪ್ರತಿ ತಾಲೂಕಿನಲ್ಲಿ ವನದುರ್ಗಿ ಕಂಪನಿ ಕೆಲವರನ್ನು ಇದಕ್ಕಾಗಿ ಗುರುತಿಸಿದೆ. ಅವರು ಸ್ಥಳೀಯ ಬೆಳೆಗಾರರ ನೆರವಿಗೆ ಒದಗುತ್ತಾರೆ. 2019ರಿಂದ ಮಾಡಿದ ಪ್ರಯತ್ನಗಳು ಉತ್ತಮ ಫಲಗಳನ್ನು ನೀಡಿವೆ. ಬೆಳೆಗಾರರಲ್ಲಿ ಯಾವುದೇ ಆತಂಕ ಬೇಕಿಲ್ಲ. ಫಲಾನುಭವಿಗಳಲ್ಲಿ ಕೆಲವರ ಹೆಸರು ಹೇಳಬಹುದಾದರೆ; ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕಿನ ಶ್ರೀ ಸತೀಶ ಹೆಗಡೆ ಹೆಗ್ಗುಂಬ್ಳಿ, ಸಿದ್ದಾಪುರ ತಾಲೂಕಿನ ಶ್ರೀ ಹರ್ಷವರ್ಧನ ಹೆಗಡೆ ಕ್ಯಾದಗಿ, ಯಲ್ಲಾಪುರ ತಾಲೂಕಿನ ಶ್ರೀ ಗಣಪತಿ ಮುದ್ದೇಪಾಲು.

ಯಾವುದೇ ವಿಚಾರಣೆ, ವಿವರಣೆಗಾಗಿ; 'ವನದುರ್ಗಿ ಅಗರವುಡ್ ಇಂಡಿಯಾ ಲಿಮಿಟೆಡ್'ನ ವಿಳಾಸ, ಸಂಪರ್ಕಿಸಬಹುದಾದ ಇಮೇಲ್ ವಿಳಾಸ, ಕಂಪನಿಯ ವೆಬ್‌ಸೈಟ್ ಎಲ್ಲವೂ ಈ ಕೆಳಗಿನಂತಿವೆ.


Vanadurgi Agarwood India Ltd
#- 816, 8th Floor, Front Wing,
South Block, Manipal Centre,
Opp M.G. Road, Bengaluru-560042, India
Email: contact@indianagarwood.com
www.indianagarwood.com

Mobile: 90080 83637, 99000 66400
Phone: 080 42066961

# ಕೀಟದ ಅರಗು – ಕೃಷಿಗೆ ಮೆರಗು



ನಮಗೆಲ್ಲ ಅರಗು ಎಂದ ತಕ್ಷಣ ನೆನಪಿಗೆ ಬರುವುದು ಮಹಾಭಾರತದ ಅರಗಿನ ಮನೆ, ಲಾಕ್ಷಾಗೃಹ. ಹೊತ್ತಿ ಉರಿದ ಅರಗಿನ ಮನೆಯನ್ನು ಬಿಟ್ಟರೆ ಬಂಗಾರದ ಆಭರಣಗಳಲ್ಲಿ ಬಳಸುವ ಅರಗಿನ ಪರಿಚಯ ನಮಗಿದೆ. ಎಲ್ಲರಿಗೂ ಪರಿಚಿತವಿರುವ ಅರಗೆಂದರೆ ಅಂಚೆ ಕಚೇರಿಯಲ್ಲಿ ಮುದ್ರೆಯೊತ್ತುವಾಗ ಬಳಸುವ ಅರಗು. ಸಣ್ಣ ಕೀಟಗಳ ರಸಗ್ರಂಥಿಗಳಿಂದ ಒಸರುವ ಕೆಂಬಣ್ಣದ ಅಂಟಿನಂತಹ ದ್ರವವೇ ಅರಗು. ಯುದ್ಧ ಸಾಮಗ್ರಿಗಳ ತಯಾರಿಕೆಯಲ್ಲಿ, ವಿಮಾನದ ಬಿಡಿಭಾಗಗಳಲ್ಲಿ, ಕಟ್ಟಿಗೆಯ ಪೀಠೋಪಕರಣಗಳಲ್ಲಿ, ಹಣ್ಣು ಹೂವುಗಳ ಪ್ರತಿರೂಪ ನಿರ್ಮಿಸುವಲ್ಲಿ, ಉಣ್ಣೆ ಮತ್ತು ರೇಶಿಮೆಯ ಬಟ್ಟೆಗೆ ಬಣ್ಣಹಾಕುವಲ್ಲಿ, ಚರ್ಮದ ಕಾಂತಿಗೆ ಬೇಕಾದ ಸೌಂದರ್ಯ ವರ್ಧಕಗಳ ತಯಾರಿಕೆಯಲ್ಲಿ ಬಳಸಲ್ಪಡುವ ಅರಗು ಬಹು ಉಪಯೋಗಿ ವಸ್ತು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಹು ಬೇಡಿಕೆಯ ವಸ್ತು.

ಅರಗಿನ ಕೀಟಗಳ ಮೊಟ್ಟೆಗಳು ಅಂಟಿಕೊಂಡಿರುವ ಮರದ ಕಡ್ಡಿಗಳನ್ನು (Brood Lac) ಮುರಿದು ತೆಗೆದು ಆಶ್ರಯದಾತ ಗಿಡಕ್ಕೆ ಕಟ್ಟಬೇಕು. ಕೀಟದ ಅತಿಸೂಕ್ಷ್ಮ ಮೊಟ್ಟೆಗಳು ಮರಿಗಳಾಗಿ ಆಶ್ರಯದಾತ ಗಿಡದ ರಸಹೀರಿ, ಆ ಗಿಡದ ಕೊಂಬೆಗಳ ಮೇಲೆ ಅರಗನ್ನು ಸ್ರವಿಸುತ್ತವೆ. ಹೀಗೆ ಗಿಡದ ಕೊಂಬೆಗಳಲ್ಲಿ ಅಂಟಿಕೊಂಡ ಅರಗನ್ನು ಸಂಗ್ರಹಿಸುವಾಗ ಆ ಕೊಂಬೆಗಳನ್ನು ಕತ್ತರಿಸಿ ತೆಗೆಯಬೇಕಾಗುತ್ತದೆ. ಹಾಗೆ ಕತ್ತರಿಸಿದ ಕಡ್ಡಿ (Stick Lac)ಗಳಿಂದ ಅರಗನ್ನು ಬೇರ್ಪಡಿಸಿ, ಹುಡಿಮಾಡಿ ಜರಡಿ ಹಿಡಿದು ತೊಳೆದು ತೆಗೆದಾಗ ಅರಗಿನ ತಿರುಳು (Seed Lac) ಸಿಗುತ್ತದೆ. ಅದನ್ನು ಶಾಖದಿಂದ ಉಪಚರಿಸಿದಾಗ ಪರಿಶುದ್ಧ ಅರಗು (Shell Lac) ದೊರಕುತ್ತದೆ. ಅರಗಿನಲ್ಲಿ ಕುಸುಮಿ ಮತ್ತು ರಂಗೀನಿ ಎಂದು ಎರಡು ಮುಖ್ಯವಾದ ಬಗೆಗಳಿವೆ. ನೂರರವತ್ತು ಜಾತಿಯ ಗಿಡಗಳು ಅರಗಿಗೆ ಆಶ್ರಯ ನೀಡಬಲ್ಲವು. ಆದರೆ ಎತ್ತರದ ಮರಗಳಲ್ಲಿ ಅರಗು ಅಂಟಿಕೊಂಡರೆ ಅದನ್ನು ಸಂಗ್ರಹಿಸುವುದು ಕಷ್ಟ. ಕ್ಯಾಲಿಯಾಂಡ್ರಾ, ಸೆಮಿ ಅಲಾಟಾ, ಅತ್ತಿ, ಮುತ್ತುಗ, ಬಾರೆ, ಸಾಗಡೆ ಗಿಡಗಳಲ್ಲಿ ಅರಗನ್ನು ಬೆಳೆದರೆ ಕೊಯ್ಲಿಗೆ ಸುಲಭ.

ಭಾರತದಲ್ಲಿ ಜಾರಖಂಡ ಮತ್ತು ಛತ್ತೀಸಗಢ ರಾಜ್ಯಗಳು ಅರಗು ಬೆಳೆಗೆ ಪ್ರಸಿದ್ಧ. ಭಾರತದ ಒಟ್ಟೂ ಬೆಳೆಯ ಅರ್ಧದಷ್ಟು ಜಾರಖಂಡದಲ್ಲಿಯೇ ಬೆಳೆಯುತ್ತದೆ. ಇದನ್ನು ಕಿರು ಅರಣ್ಯ ಉತ್ಪನ್ನವೆಂದು ಪರಿಗಣಿಸಲಾಗಿದೆ. ಜಾರಖಂಡದಲ್ಲಿ ವನವಾಸಿಗಳು ಅರಗಿನ ಕೃಷಿ ಮಾಡುತ್ತಿದ್ದು ಅದಕ್ಕೆ ಬೆಂಬಲ ಬೆಲೆ ನಿಗದಿಗೊಳಿಸಲಾಗಿದೆ. ಉಳಿದಂತೆ ಅರಗು ಕೃಷಿ ಮಾಡುತ್ತಿರುವ ರಾಜ್ಯಗಳೆಂದರೆ ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಒಡಿಶಾ, ಆಸಾಮ್, ಉತ್ತರ ಪ್ರದೇಶ ಮುಂತಾದವು. ಬಾಂಗ್ಲಾ ದೇಶ, ಮ್ಯಾನ್ಮಾರ್, ಥೈಲ್ಯಾಂಡ್, ಲಾವೋಸ್, ವಿಯೆಟ್ನಾಂ, ಚೀನಾಗಳಲ್ಲೂ ಅರಗನ್ನು ಉತ್ಪಾದಿಸುತ್ತಾರೆ. ಭಾರತ ಲಾಗಾಯ್ತಿನಿಂದ ಅರಗನ್ನು ರಫ್ತು ಮಾಡುತ್ತ ಬಂದಿದೆ. ಬಾಂಗ್ಲಾ ದೇಶ, ಸ್ವಿಜರ್‌ಲ್ಯಾಂಡ್, ಅಮೇರಿಕ, ಜರ್ಮನಿ, ಇರಾಕ್, ಈಜಿಪ್ಟ್ ಮುಂತಾದ ದೇಶಗಳು ಭಾರತದಿಂದ ಅರಗನ್ನು ತರಿಸಿಕೊಳ್ಳುತ್ತವೆ. ಪ್ರತಿ ವರ್ಷ ಸರಾಸರಿ 16,000 ಟನ್ ಅರಗು ಭಾರತದಿಂದ ರಫ್ತಾಗುತ್ತದೆ.

# ಕುಲಪತಿಯ ಕುಶಲೋಪರಿಯಲ್ಲಿ ಸಿಕ್ಕ ಬೆರಗು

ಎಲ್ಲಿಯೇ ಹೋದರೂ ಹೊಸದರ ಹುಡುಕಾಟ ನನಗೆ ಸ್ವಭಾವವಾಗಿದೆ. ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ಹೋದಾಗ ಆಗ ಕುಲಪತಿಗಳಾಗಿದ್ದ ಪ್ರೊ. ಆರ್.ಆರ್. ಹಂಚಿನಾಳರ ಸಂಗಡ ಉಭಯ ಕುಶಲೋಪರಿಯಲ್ಲಿದ್ದೆ. ಸಹಜವಾಗಿ ಕೃಷಿಯ ಮಾತು ಬಂತು. ಅವರು ತಮ್ಮ ಜಾರಖಂಡದ ಭೇಟಿಯ ಕುರಿತು ಹೇಳುತ್ತ ಅರಗನ್ನು ಪಶ್ಚಿಮ ಘಟ್ಟದ ವಾತಾವರಣದಲ್ಲಿ ಬೆಳೆಯಬಹುದು ಎಂದರು. ಅರಗು ಎಂಬ ಶಬ್ದ ನನಗೆ ಗುಂಗಾಯಿತು. ಅರಗು ಶಬ್ದವನ್ನು ಅದೆಷ್ಟು ಬಾರಿ ಮಾತಿನಲ್ಲಿ ಬಳಸಿದ್ದರೂ ಅದನ್ನು ನಾವು ಬೆಳೆಯಬಹುದು ಎನ್ನುವ ಕಲ್ಪನೆಯೇ ದೊಡ್ಡ ಬೆರಗಾಗಿತ್ತು. ಜಾರಖಂಡಕ್ಕೆ ಹೋಗಿ ನೋಡಿ ಬಂದೆ. ಅದನ್ನು ನನ್ನ ಕ್ಷೇತ್ರದಲ್ಲಿ ಬೆಳೆಯುವ ಸಾಧ್ಯತೆ, ವಿಧಾನಗಳ ಬಗ್ಗೆ ಚಿಂತಿಸಿದೆ. ಉತ್ಸಾಹಿ ಯುವ ಕೃಷಿಕರಲ್ಲಿ ಚರ್ಚಿಸಿದೆ. ಅರಗನ್ನು ರಾಜ್ಯದಲ್ಲಿ ಬೆಳೆಸಬೇಕು ಎಂಬ ತೀರ್ಮಾನಕ್ಕೆ ಬಂದೆ. ಅದಕ್ಕೆ ಬೇಕಾದ ಸೆಮಿ ಅಲಾಟಾ ಗಿಡಗಳನ್ನು ತಂದು ನನ್ನ ಜಮೀನಿನಲ್ಲಿ ಬೆಳೆಸಿದೆ. ಜಾರಖಂಡದಿಂದ ಬ್ರೂಡ್‌ಲ್ಯಾಕ್‌ಗಳನ್ನು ತಂದು ಗಿಡಗಳಿಗೆ ಕಟ್ಟಿದೆ. ಆರಂಭಿಕ ಖರ್ಚು ಸ್ವಲ್ಪ ಹೆಚ್ಚು. ಮುಂದೆ ಸರಿಯಾದ ಕಾಳಜಿ ಮಾಡಿದಲ್ಲಿ ಲಾಭದಾಯಕ ಕೃಷಿ.



ಜಾರಖಂಡದಲ್ಲಿರುವ ಭಾರತೀಯ ಪ್ರಾಕೃತಿಕ ರಾಳ ಹಾಗೂ ಅಂಟು ಸಂಸ್ಥೆ (**Indian Institute Of Natural Resins and Gums, Jarkhand**) ನನ್ನ ಉತ್ಸಾಹಕ್ಕೆ ನೀರೆರೆಯಿತು. ಕದಂಬದ ಮೂಲಕ ಅರಗು ಕಡ್ಡಿಗಳನ್ನು ಪೂರೈಕೆ ಮಾಡಿತು. ಕದಂಬದ ಮೂಲಕ ಹೋದ ಕೃಷಿಕರಿಗೆ ತರಬೇತಿ ನೀಡಿತು. ಅಗತ್ಯ ಬಿದ್ದಲ್ಲಿ ಹೆಚ್ಚಿನ ಮಾರ್ಗದರ್ಶನ ನೀಡಲು ಮುಂದೆ ಬಂತು. ಉತ್ತರ ಕನ್ನಡ ಜಿಲ್ಲೆಯಿಂದ ಹದಿಮೂರು ರೈತರು ಪ್ರಾರಂಭದಲ್ಲಿ ತರಬೇತಿ ಪಡೆದು ಬಂದರು. ಶಿರಸಿ, ಮುಂಡಗೋಡು, ಸಿದ್ದಾಪುರ ತಾಲೂಕುಗಳ ಬೇರೆ ಬೇರೆ ಊರುಗಳಲ್ಲಿ ಮಾಹಿತಿ ಕಾರ್ಯಾಗಾರ ಏರ್ಪಡಿಸಿದೆವು. ಅಲ್ಲದೆ, ಆತ್ಮ ಯೋಜನೆಯಲ್ಲಿ ಅರಗು ಕೃಷಿಕರಿಗೆ ಸಹಾಯಧನವೂ ಸಿಕ್ಕಿತು. ಮೊದಲಿಗೆ 590 ರೈತರು ಅರಗು ಬೆಳೆಯಲು ಮುಂದಾದರು.

ಕದಂಬದಿಂದ 4500 ಕೇಜಿ ಅರಗು ಕಡ್ಡಿ (**Brood Lac**)ಗಳನ್ನು ಪೂರೈಕೆ ಮಾಡಲಾಯಿತು. ಸೆಮಿ ಅಲಾಟಾ ಗಿಡಗಳನ್ನು ಬೆಳೆಯಲು 130 ಕೇಜಿ ಬೀಜಗಳನ್ನು ಆ ದಿನಗಳಲ್ಲಿ ಹಂಚಲಾಗಿದೆ. ಅರಗು ಬೆಳೆಯ ಆರಂಭದಿಂದ ಕೊಯ್ಲಿನ ವರೆಗಿನ ಮಾರ್ಗದರ್ಶನ ನೀಡಲಾಗುತ್ತಿದೆ. ಕಾಲ ಕಾಲಕ್ಕೆ ಅಗತ್ಯವಾದ ಸಿಂಪರಣಾ ಔಷಧ ಒದಗಿಸಲಾಗಿದೆ. ಬಹಳ ಮುಖ್ಯವಾಗಿ ಕದಂಬದಿಂದ ಅರಗನ್ನು ಸಂಪೂರ್ಣ ಖರೀದಿಸಿ ನಿಶ್ಚಿತ ಬೆಲೆ ನೀಡಲಾಗುತ್ತಿದೆ. ದಕ್ಷಿಣಭಾರತದಲ್ಲಿ ಅರಗು ಬೆಳೆ ಅಭಿವೃದ್ಧಿಗಾಗಿ ಶ್ರಮಿಸಿದ ಕದಂಬದ ಪ್ರಯತ್ನ ಈ ಕ್ಷೇತ್ರದಲ್ಲಿ ಗಮನ ಸೆಳೆದಿದ್ದು, ಕದಂಬ ಪುರಸ್ಕಾರ ಪಡೆದಿದೆ.

# ಕುಂಚೋಕ್ ಸೆತೆನ್
# (Kunchok Tseten)



ಮುಂಡಗೋಡು ತಾಲೂಕಿನಲ್ಲಿರುವ ಟಿಬೆಟನ್ ಕಾಲನಿಯ ಕೃಷಿಕ. ಈ ಉತ್ಸಾಹಿಗೆ ಯೋಜಿತ ಕೃಷಿಯಲ್ಲಿ ಅಪಾರ ಪ್ರೀತಿ. ದಣಿವರಿಯದ ಶ್ರಮಿಕ. ತನ್ನ ಹೊಲದಲ್ಲಿ ಅರಗು, ಗೇರು, ಹೆಬ್ಬೇವು, ರಬ್ಬರ್ ಎಲ್ಲ ರೀತಿಯ ತೋಟಗಾರಿಕೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಟಿಬೆಟ್‌ನಿಂದ ಬಂದ ಆಶ್ರಿತರಿಗೆ ಸ್ಥಳೀಯ ರೈತರಿಗೆ ಸಿಕ್ಕ ಅನುಕೂಲಗಳೆಲ್ಲ ಸಿಗುತ್ತಿಲ್ಲವಾದರೂ ಸೆತೆನ್ ಅವರ ಉತ್ಸಾಹ ಕುಗ್ಗಿಲ್ಲ. ಪರಂಪರೆಯಿಂದ ಈ ಎಲ್ಲ ಕೃಷಿ ಮಾಡಿಲ್ಲವಾದರೂ ಹೊಸದನ್ನು ಮಾಡುವ ಸಾಹಸದ ಮನಸು. ಅರೆಮಲೆನಾಡಿನ ಮರಳು ಮಿಶ್ರಿತ ಅಂಟುಮಣ್ಣಿನಲ್ಲಿ ಬೆವರು ಚೆಲ್ಲಿ ಸಮೃದ್ಧಿಯ ಕನಸು ಕಾಣುತ್ತಿದ್ದಾರೆ. ಕದಂಬದ ಸಂಪರ್ಕದಲ್ಲಿ ಬಂದ ಮೇಲೆ ಎಲ್ಲ ಸೂಚನೆಗಳನ್ನೂ ತಪ್ಪದೇ ಪಾಲಿಸುತ್ತ ಕೃಷಿ ಮಾಡುತ್ತಿದ್ದಾರೆ. ಪ್ರತಿ ಬೆಳೆಯ ಆರಂಭದಿಂದ ಕೊಯ್ಲಿನವರೆಗೆ ಸರಿಯಾದ ಲೆಕ್ಕವಿಟ್ಟು ಲಾಭ ನಷ್ಟದ ಪಟ್ಟಿ ನೀಡುತ್ತಾರೆ. ಅರಗನ್ನು ವ್ಯವಸ್ಥಿತವಾಗಿ ಬೆಳೆದು ನಮಗೇ ಬೆರಗು ಹುಟ್ಟಿಸಿದ್ದಾರೆ. ಈಗ ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿಯೂ ಅರಗನ್ನು ಬೆಳೆಯುತ್ತಿದ್ದಾರೆ.

# ಆಹಾರಕ್ಕೆ ಅಲಂಕಾರಕ್ಕೆ ಮತ್ಸ್ಯೋದ್ಯಮ

ನಮ್ಮ ಕಡಲತೀರ ಮತ್ಸ್ಯಾಗಾರವೆಂದೇ ಪ್ರಸಿದ್ಧ. ಹಾಗೆಂದು ಒಳನಾಡು ಮೀನು ಕೃಷಿ ಸಣ್ಣದೇನಲ್ಲ. ನದಿಗಳು ಸಮುದ್ರವನ್ನು ಸೇರುವ ಮುಖಜ ಭೂಮಿ ಮತ್ಸ್ಯ ವೈವಿಧ್ಯದ ತವರು. ಮಾನವ ಹಸ್ತಕ್ಷೇಪಕ್ಕೆ ಒಳಗಾಗದ ಅಘನಾಶಿನಿಯ ಮುಖಜ ಭೂಮಿ ಮತ್ಸ್ಯ ವೈವಿಧ್ಯಕ್ಕೆ ಮಾದರಿಯಾಗಿದೆ. ಪ್ರತಿದಿನವೂ ಮೂರು ಕೋಟಿ ರೂಪಾಯಿಗೂ ಮಿಕ್ಕಿದ ಮೀನಿನ ವ್ಯವಹಾರ ಉತ್ತರಕನ್ನಡದಲ್ಲಿಯೇ ಇದೆ. ಇಡೀ ಜಿಲ್ಲೆಯಲ್ಲಿ ಮೀನುಗಾರಿಕೆಯನ್ನೇ ಪೂರ್ಣ ಉದ್ಯೋಗವಾಗಿ ಅವಲಂಬಿಸಿರುವ ಕುಟುಂಬಗಳ ಸಂಖ್ಯೆ 17,700ರಷ್ಟು. ಅರೆ ಕಾಲಿಕವಾಗಿ ಮತ್ಸ್ಯೋದ್ಯಮವನ್ನು ಅವಲಂಬಿಸಿದ ಕುಟುಂಬಗಳ ಸಂಖ್ಯೆ 18,500ರಷ್ಟು. ಮೀನು ಕೃಷಿಯ ವೈಜ್ಞಾನಿಕತೆ ತಾಂತ್ರಿಕತೆಗಳ ಕುರಿತು ಚಿಂತಿಸಿದಾಗ ಪಂಜರ ಕೃಷಿ (Cage Culture) ಹೆಚ್ಚು ಲಾಭದಾಯಕ ಮತ್ತು ಸುಸ್ಥಿರ ಎನಿಸುತ್ತದೆ. ಆ ವಿಷಯದಲ್ಲಿ ಸಿಎಂಎಫ್ಆರ್ಐ (CMFRI) ಸಂಸ್ಥೆಯೊಡನೆ ಕದಂಬ ಸಮಾಲೋಚನೆ ನಡೆಸಿದೆ. ನಿತ್ಯದ ಅನ್ನದ ಬಟ್ಟಲೇ ಆಗಿರುವ ಸಮುದ್ರಕ್ಕೆ ಸಮಾಜ ಕೃತಜ್ಞವಾಗಿದೆ. ಜಿಲ್ಲೆಗೆ ಸಿಕ್ಕಿರುವ ಕರಾವಳಿಯಿಂದಾಗಿ ದೊಡ್ಡ ಪ್ರಮಾಣದ ಅನ್ನದ ವ್ಯವಸ್ಥೆಯಾಗಿದೆ. ಅನ್ನದಂತೆ ಅಲಂಕಾರಕ್ಕೂ ಮೀನಿನ ಕೃಷಿ ಮಾಡುವ ಪ್ರಕ್ರಿಯೆ ತಡವಾಗಿಯೇ ಆದರೂ ನಮ್ಮಲ್ಲಿ ಆರಂಭವಾಗಿದೆ. ಮೀನನ್ನು ತಿನ್ನದವರೂ ಲಾಭದಾಯಕ ಉದ್ಯಮವಾಗಿ ಅಲಂಕಾರಿಕ ಮೀನಿನ ಕೃಷಿ ಮಾಡಬಹುದು. ಈ ವಿಷಯದಲ್ಲಿ ಕದಂಬ ಅನೇಕರಿಗೆ ಪ್ರೇರಣೆ ನೀಡಿ ಆ ಕೃಷಿಯಲ್ಲಿ ತೊಡಗಿಸಿತು. ಅದಕ್ಕೆ ಬೇಕಾದ ತರಬೇತಿ ಮೀನಿನ ಮರಿಗಳ ಪೂರೈಕೆ ಆರೈಕೆಗಳ ವಿಷಯದಲ್ಲಿ ಕದಂಬ ಮಾರ್ಗದರ್ಶನ ನೀಡಿತು. ಉತ್ಸಾಹದ ಆರಂಭವಾದರೂ ಫಲದಾಯಕ ಮುನ್ನಡೆ ಆಗಲಿಲ್ಲ. ಅಲಂಕಾರಿಕ ಮೀನನ್ನು ಬೆಳೆದರಾದರೂ ಕೈಯಳತೆಯಲ್ಲಿ ಮಾರುಕಟ್ಟೆ ದಕ್ಕಲಿಲ್ಲ ಎನ್ನುವುದು ಸಮಸ್ಯೆಯಾಯಿತು! ಎಲ್ಲ ಉದ್ದಿಮೆಗಳೂ ಒಂದಷ್ಟು ತಾಳ್ಮೆಯನ್ನೂ ಮತ್ತೊಂದಿಷ್ಟು ಹುಡುಕಾಟವನ್ನೂ ಬಯಸುತ್ತವೆ. ಸಾಹಸಿಗಳಿಗೆ ಮಾತ್ರವೇ ಯಶಸ್ಸು ದಕ್ಕುತ್ತದೆ.







# ಬೆಟ್ಟವೆಂಬ ಬಳಕೆಯ ಆಸ್ತಿ







ಅಡಿಕೆ ತೋಟದ ಕೃಷಿಗೆ ಪೂರಕವಾಗಿ ಒಂದಷ್ಟು ಕಾಡು ಬೇಕು. ಅದನ್ನು ಬ್ರಿಟಿಷ್ ಸರಕಾರವೂ ಒಪ್ಪಿ ಒಂದೆಕರೆ ಅಡಿಕೆ ತೋಟಕ್ಕೆ ಒಂಭತ್ತು ಎಕರೆ ಬೆಟ್ಟ(ದಿನ ಬಳಕೆಯ ಕಾಡು)ವನ್ನು ನಿಗದಿಪಡಿಸಿತು. ಕರಾವಳಿ ಭಾಗದಲ್ಲಿ ಬೆಟ್ಟಗಳ ಲಭ್ಯತೆ ಕಡಿಮೆಯಾದದ್ದರಿಂದ ಒಂದೆಕರೆ ತೋಟಕ್ಕೆ ನಾಲ್ಕು ಎಕರೆ ಬೆಟ್ಟವೆಂದು ನಿಗದಿಪಡಿಸಿತು. ಎಲ್ಲ ಕೃಷಿಗೂ ಹಸಿರು ಗೊಬ್ಬರ ಬೇಕಾದರೂ ಭತ್ತದ ಗದ್ದೆಗೆ ಬೆಟ್ಟದ ಸೌಲಭ್ಯವಿಲ್ಲ. ಈ ಬೆಟ್ಟದ ಮೇಲೆ ಕೃಷಿಕರಿಗೆ ಬಳಕೆಯ ಅವಕಾಶವಿದೆ ಆದರೆ ಅದು ಅವರ ಸ್ವತ್ತಲ್ಲ. ಬೆಟ್ಟ ಸಾಮೂಹಿಕ ಬಳಕೆಗೆ ಮೀಸಲು, ವೈಯಕ್ತಿಕ ಆಸ್ತಿಯಲ್ಲ. ಪರಸ್ಪರ ಸಹಕಾರದಲ್ಲಿ ಕಣ್ಣಳತೆಯ ಗಡಿ ಗುರುತಿಸಿಕೊಂಡು ಬಳಕೆ ಮಾಡುತ್ತಾರೆ. ಈ ಬೆಟ್ಟ ಪಕ್ಕದ ಕಾಡಿಗಿಂತ ಪ್ರತ್ಯೇಕವಾಗಿ ಕಾಣುವುದು ಅದರ ನಿರ್ವಹಣೆಯಿಂದಾಗಿ. ಮುಳ್ಳು ಕಂಟಿಗಳನ್ನು ಕಡಿದು, ಹೊಸ ಗಿಡಗಳಿಗೆ ಬೆಳೆಯಲು ಅವಕಾಶ ನೀಡುತ್ತಾರೆ. ತೋಟಕ್ಕೆ ಬೇಕಾಗಿ ಹಸಿರು ಟೊಂಗೆಗಳನ್ನು ಕಡಿದು ಅಡಿಕೆ ಮರದ ಸುತ್ತ ಮುಚ್ಚುತ್ತಾರೆ. ಚಳಿಗಾಲದಲ್ಲಿ ಮರಗಳು ಉದುರಿಸಿದ ಒಣ ಎಲೆಗಳನ್ನು(ದರಕು) ಬೇಸಿಗೆಯಲ್ಲಿ ಒಟ್ಟುಮಾಡಿ ತೋಟಕ್ಕೆ ಹಾಕುತ್ತಾರೆ. ಬೆಟ್ಟ ಹಸಿರಾಗಿಯೂ ಇರಬೇಕು, ಅದರಲ್ಲಿ ಜನ ಓಡಾಡಿ ಕೆಲಸ ಮಾಡುವಂತಿರಬೇಕು. ಎಮ್ಮೆ ದನಗಳನ್ನು ಮೇಯಲು ಬೀಡುವ ದಿನಗಳಲ್ಲಿ ಈ ಬೆಟ್ಟಗಳು ಮೇವಿಗೂ ನೆರಳಿಗೂ ಆಧಾರವಾಗುತ್ತವೆ.



# ಹಸಿರಿನ ಬಳಕೆಯಿಂದ ಹಣದ ಗಳಿಕೆಯತ್ತ



ಸೊಪ್ಪಿನ ಬೆಟ್ಟವೆಂದೇ ಕರೆಯಲ್ಪಡುವ ಈ ಕೃಷಿಕಾಡಿನ ಜೀವ ವೈವಿಧ್ಯ ಅಪಾರವಾದದ್ದು. ನಿರಂತರ ನಿರ್ವಹಣೆಯಿಂದಾಗಿ ನಿತ್ಯ ಬಳಕೆಗೆ ಅನುಕೂಲವಾದದ್ದು. ಕೇವಲ ಹಸಿರೆಲೆ ಒಣ ಎಲೆಗಳಿಗೆ ಮಾತ್ರ ಬೆಟ್ಟದ ಬಳಕೆ ಸೀಮಿತವಾಗಿತ್ತು. ಅದರ ಲಾಭದಾಯಕ ಬಳಕೆಯ ಬಗ್ಗೆ ಕೂಡ ಇಂದು ಅನೇಕ ರೀತಿಯ ಆಲೋಚನೆಗಳು ನಡೆಯುತ್ತಿವೆ. ಬೆಟ್ಟದಲ್ಲಿ ಬೆಳೆದ ಮರ ಮಟ್ಟುಗಳ ಮೇಲೆ ನಮಗೆ ಅಧಿಕಾರ ಕೊಡಿ ಎಂದು ವಾದಿಸಿದ್ದರು. ಅದಾಗದು ಎಂದಾಗ ಅವರ ಮನೆ ಕಟ್ಟಿಕೊಳ್ಳಲು ಬೇಕಾದಷ್ಟು ಕಟ್ಟಿಗೆ ತೆಗೆದುಕೊಳ್ಳಲು ಅವಕಾಶ ಕೊಡಿ ಎಂದರು. ಅದನ್ನು ಕೆಲವು ಶರತ್ತುಗಳೊಂದಿಗೆ ಒಂದಷ್ಟು ಕಾಲ ಒಪ್ಪಿಕೊಳ್ಳಲಾಗಿತ್ತು. ಮರವನ್ನು ಕಡಿಯದೆ, ಬೆಟ್ಟಕ್ಕೆ ಯಾವುದೇ ರೀತಿ ಹಾನಿ ಮಾಡದೆ ಹಣಗಳಿಸುವ ಹತ್ತಾರು ಸಂಗತಿಗಳಿವೆ ಎಂಬ ವಿಚಾರ ಬಂದದ್ದು ಮಾತ್ರ ಸ್ವಲ್ಪ ತಡವಾಗಿಯೇ. ಬೆಟ್ಟದಲ್ಲಿರುವ ಮರಗಳ ಹೂವು, ಕಾಯಿ, ಹಣ್ಣು, ಬೀಜಗಳೆಲ್ಲ ಬಳಸಬಹುದಾದ, ಮಾರಾಟ ಮಾಡಬಹುದಾದ ಸಂಗತಿಗಳು. ತ್ರಿಫಲಾ ಎಂದೇ ಪ್ರಸಿದ್ಧವಾದ ತಾರಿಕಾಯಿ ನೆಲ್ಲಿಕಾಯಿ ಮತ್ತು ಅಳಲೆಕಾಯಿಗಳು, ಮುರುಗಲು ಉಪ್ಪಾಗೆ ದಾಲಚಿನ್ನಿ ಮುಂತಾದ ಉತ್ಪನ್ನಗಳು, ಹಲಸು ಮಾವು ಗೇರು ಮೊದಲಾದ ಹಣ್ಣು, ತರಕಾರಿಗಳು ಒಂದೇ ಎರಡೇ ಎಲ್ಲವೂ ಆಹಾರಕ್ಕೆ ಔಷಧಕ್ಕೆ ಉಪಯೋಗವಾಗುವ ವಸ್ತುಗಳು. ಜೇನು ತುಪ್ಪವೂ ಬೆಟ್ಟದ ಬೆಳೆಯೇ. ಇವನ್ನೆಲ್ಲ ಕಿರು ಅರಣ್ಯ ಉತ್ಪನ್ನವೆಂದು ಕರೆಯುತ್ತಾರೆ. ಈ ಕಿರು ಉತ್ಪನ್ನಗಳ ಮೇಲೆ ಬಳಕೆದಾರರಿಗೆ ಸ್ವಾಮಿತ್ವವೇ ಇರಲಿಲ್ಲ. ಬೇರೆ ಬೇರೆ ಮೂಲಗಳಿಂದ ನಡೆದ ಹೋರಾಟಗಳಿಂದ ಈಗ ಪಾಲುದಾರಿಕೆಯ ಪ್ರಮಾಣ ನಿರ್ಧಾರವಾಗಿದೆ. ಹಸಿರಿನ ಬೆಟ್ಟ, ಹಣದ ಬಟ್ಟಲೂ ಆಗಬಹುದೆಂಬ ಭರವಸೆ ಬಂದಿದೆ. ಗ್ರೀನ್ ನ್ಯಾನೋ ತಂತ್ರಜ್ಞಾನದಿಂದಾಗಿ ಹಸಿರು ನಿಜಕ್ಕೂ ಹೊನ್ನಾಗಿದೆ.



# ಬೆಟ್ಟ ಬಳಕೆದಾರರ ಸಂಘ



ಸಾಮೂಹಿಕ ಬಳಕೆಯ ಬೆಟ್ಟವನ್ನು ಸಾಂಘಿಕವಾಗಿ ನಿರ್ವಹಿಸಿದರೆ ಹೆಚ್ಚಿನ ಪ್ರಯೋಜನವಿದೆ. ಕದಂಬ ಈ ದೃಷ್ಟಿಯಿಂದ ಆರಂಭಿಸಿದ ಅಭಿಯಾನವೇ ಬೆಟ್ಟ ಬಳಕೆದಾರರ ಸಂಘ. ತೋಟಕ್ಕೆ ಸಮನಾದ ಉತ್ಪನ್ನ ನೀಡುವ ಸಾಮರ್ಥ್ಯ ಬೆಟ್ಟಕ್ಕಿದೆ. ಗೇರು ಮಾವು ಹಲಸಿನ ಸಂಗಡ ಕಾಳುಮೆಣಸು ವೆನಿಲ್ಲಾ ಅರಗುಗಳನ್ನೂ ಬೆಳೆಯುವ ಅವಕಾಶ ಬೆಟ್ಟದಲ್ಲಿದೆ. ಹುಲ್ಲಿನ ಜಾತಿಯ ಸಿಟ್ರನೆಲ್ಲಾ, ಬಿದಿರುಗಳೂ ಕಾಸಿನ ಕಳೆಗಳೇ ಆಗಿವೆ. ಬೆಟ್ಟವನ್ನು ಸಮೃದ್ಧವಾಗಿಡೋಣ. ಅದರ ಹಸಿರನ್ನು ಕಾಯೋಣ. ಸಂಗಡ ಅದರ ಕಿರು ಉತ್ಪನ್ನಗಳನ್ನು ನೂರಕ್ಕೆ ನೂರು ನಮ್ಮದು ಎನ್ನುವ ಅವಕಾಶಕ್ಕಾಗಿ ಹೋರಾಡೋಣ. ಇದು ಈ ಅಭಿಯಾನದ ಉದ್ದೇಶ. ಇದಕ್ಕೆ ಸಾಮೂಹಿಕ ಬಳಕೆದಾರರ ನೋಂದಾಯಿತ ಸಂಘಗಳನ್ನು ಕಟ್ಟಿಕೊಂಡು ಹೋರಾಡುವ ಪ್ರಯತ್ನ ಮಾಡಿದೆವು. ಬೆಟ್ಟದ ಬಳಕೆ ಸಾಮೂಹಿಕವಾದದ್ದು, ಅದರ ಹೊಸ ಸಾಧ್ಯತೆಗಳನ್ನು ಸಾಮೂಹಿಕವಾಗಿ ಮಾಡೋಣ. ಬರುವ ಲಾಭ ಎಲ್ಲ ಕೃಷಿಕರಿಗೂ ತಲುಪಲಿ ಎನ್ನುವುದಕ್ಕೆ ಜಾಗೃತಿ ಮೂಡಿಸಲು ಸಂಘ ಬೇಕಾಯಿತು. ಶಿರಸಿ ಸಿದ್ದಾಪುರ ಯಲ್ಲಾಪುರ ತಾಲೂಕುಗಳಲ್ಲಿ ಸುಮಾರು 54 ಸಂಘಗಳು ಈಗಾಗಲೇ ನೋಂದಾಯಿತವಾಗಿವೆ. ಒಂದು ಸಂಘದಲ್ಲಿ ಹತ್ತರಿಂದ ಇಪ್ಪತ್ತರವರೆಗೆ ಬೆಟ್ಟ ಬಳಕೆದಾರರಿದ್ದಾರೆ. ಬೆಟ್ಟಗಳಲ್ಲಿ ಹೊಸ ಗಿಡಗಳನ್ನು ಹಚ್ಚುವುದು, ಕಿರು ಅರಣ್ಯ ಉತ್ಪನ್ನಗಳ ಸುಸ್ಥಿರ ಕೊಯ್ಲಿನ ಬಗ್ಗೆ ತಿಳಿದುಕೊಳ್ಳುವುದು, ಬೆಟ್ಟದ ಬೆಳೆಯ ರಕ್ಷಣೆಯ ಕುರಿತು ಸಾಮೂಹಿಕ ಜವಾಬ್ದಾರಿ ತೆಗೆದುಕೊಳ್ಳುವುದು ಈ ರೀತಿ ಸಾಂಘಿಕ ಪ್ರಕ್ರಿಯೆಗಳು ನಡೆದಿವೆ. ಬೆಟ್ಟದ ಬಳಕೆಯಲ್ಲಿ ನಾವು ಎಷ್ಟು ಸಬಲರಾಗುತ್ತೇವೋ ಅಷ್ಟು ಸಮೃದ್ಧಿಹೊಂದುತ್ತೇವೆ.

## ಸಂಘದ ಯತ್ನ ಹುಡುಕಿಕೊಟ್ಟ ನೂರು ಎಕರೆ ಬೆಟ್ಟ

ಮತ್ತಿಹಳ್ಳಿ ಸಿದ್ದಾಪುರ ತಾಲೂಕಿನ ಒಂದು ಹಳ್ಳಿ. ಅಲ್ಲಿನ ಕೃಷಿಕರು ಕ್ರಿಯಾಶೀಲರು. ಶ್ರೀ ಎನ್.ಬಿ.ಹೆಗಡೆಯವರ ಮುಂದಾಳತ್ವದಲ್ಲಿ ಬೆಟ್ಟ ಬಳಕೆದಾರರ ಸಂಘ ಕಟ್ಟಿದರು. ತಮ್ಮ ಊರಿನ ಬೆಟ್ಟವೆಷ್ಟು, ಅದರ ಬಳಕೆ ಹೇಗೆ ನಡೆದಿದೆ ಎನ್ನುವ ಪ್ರಾಥಮಿಕ ವಿವರಗಳನ್ನು ಪಡೆದರು. ಆಗ ಅವರಿಗೆ ತಿಳಿದದ್ದು ನೂರು ಎಕರೆಯಷ್ಟು ತಮ್ಮೂರಿನ ಬೆಟ್ಟವನ್ನು ತಾವು ಬಳಸಿಯೇ ಇಲ್ಲ ಎನ್ನುವುದು. ಅವರಲ್ಲನೇಕರು ಬೆಟ್ಟದಲ್ಲಿ ಈಗ ಸಿಲ್ವರ್ ಓಕ್ ಗಿಡ ಬೆಳೆಸಿ ಅದಕ್ಕೆ ಕಾಳು ಮೆಣಸಿನ ಬಳ್ಳಿ ಹಚ್ಚಿದ್ದಾರೆ. ಗೇರು ಗಿಡಗಳನ್ನು ನೆಟ್ಟು ಫಲಕ್ಕಾಗಿ ಕಾಯುತ್ತಿದ್ದಾರೆ. ಬಿದಿರಿನ ಕೃಷಿಗಾಗಿ ಈಗ ಹಂಬಲಿಸುತ್ತಿದ್ದಾರೆ. ಅರಗನ್ನು ಬೆಳೆಯಬಹುದೇ ಎಂದು ಅಲೋಚಿಸುತ್ತಿದ್ದಾರೆ. ಇಂತಹ ಅನೇಕ ಸಾಧ್ಯತೆಗಳ ನೆಲೆ ಬೆಟ್ಟ ಬಳಕೆದಾರರ ಸಂಘ.



# ಬೆಳಕಿಗೆ ಬಂದ ಕಪ್ಪು ಅರಿಷಿಣ

ಪ್ರಕೃತಿಯ ಪ್ರತಿ ಸಂಗತಿಯನ್ನೂ ಪರೀಕ್ಷಿಸಿ, ವಿಶ್ಲೇಷಿಸಿ, ಮನುಕುಲಕ್ಕೆ ಅದರ ಪ್ರಯೋಜನಗಳನ್ನು ತಿಳಿಸಿದ ಭೂಮಿ ಭಾರತ. ಜೊತೆಗೆ ನಿಸರ್ಗದ ಪ್ರತಿ ವೈವಿಧ್ಯವನ್ನೂ ರಕ್ಷಿಸಿದ ಪರಂಪರೆಯೂ ನಮ್ಮದೇ. ಹಳದಿ ಅರಿಷಿಣದ ವ್ಯಾಪಕ ಬಳಕೆಯನ್ನು ರೂಢಿಸಿದ ನಮ್ಮ ಔಷಧ ಪದ್ಧತಿ, ಆರಾಧನಾ ಸಂಪ್ರದಾಯಗಳಲ್ಲಿ ಕಪ್ಪು ಅರಿಷಿಣದ ಬಳಕೆಯೂ ಹೇಗೆಂಬುದನ್ನು ತಿಳಿಸಿ ಹೇಳಿತ್ತು. ಈಗಲೂ ಅದರ ಅಗತ್ಯ ಇದ್ದೇ ಇದೆ. ಆದರೆ ಬೇಕೆಂದಾಗ ಕಪ್ಪು ಅರಿಷಿಣ ಮಾತ್ರ ಸಿಗುತ್ತಿಲ್ಲ. ಸೃಷ್ಟಿಯ ವೈವಿಧ್ಯವೊಂದು ನಮ್ಮಿಂದ ಕಳೆದೇ ಹೋಗಿದೆ. ಅದನ್ನು ಹುಡಿಕಿ ತರುವ, ಮತ್ತೆ ಮರು ಬದುಕು ಕೊಡುವ ಪ್ರಯತ್ನ ನಮ್ಮದಾಗಿದೆ.



## ಕಪ್ಪು ಅರಿಷಿಣ

ಅರಿಷಿಣದ ಕುಟುಂಬಕ್ಕೇ ಸೇರಿದ ಸಸ್ಯ. ಲಕ್ಷಣದಲ್ಲಿ ಹಳದಿ ಅರಿಷಿಣದ ಗಿಡದಂತೆ ಬೆಳೆಯುತ್ತದಾದರೂ ಗಡ್ಡೆಗಳ ಗಾತ್ರ ಮಟ್ಟಸವಾದದ್ದು. ಗಡ್ಡೆಗಳ ಬೆಳೆಯೂ ದೊಡ್ಡದು. ಗಡ್ಡೆಯನ್ನು ಕತ್ತರಿಸಿದರೆ, ಒಳಭಾಗಕ್ಕೆ ನೇರಿಳೆಯ ಬಣ್ಣದ ಹೂರಣವಿರುವುದರಿಂದ ಕಪ್ಪು ಅರಿಷಿಣವೆಂದು ಅದಕ್ಕೆ ಹೆಸರು. ಅತ್ಯಂತ ಹೆಚ್ಚು ಔಷಧೀಯ ಅಂಶವಿರುವ ಕಪ್ಪು ಅರಿಷಿಣಕ್ಕೆ ಕರ್ಪೂರದಂತಹ ಕಟುವಾದ ಪರಿಮಳ. ಸಂಧಿವಾತ, ಮೂರ್ಛೆರೋಗ, ಅಸ್ತಮಾ ಮುಂತಾದ ರೋಗೋಪಚಾರಗಳಲ್ಲಿ ಕಪ್ಪು ಅರಿಷಿಣ ಅತ್ಯಂತ ಪ್ರಯೋಜನಕಾರಿ. ತೇದು ಹಚ್ಚಿದರೆ ತರೆದ ಗಾಯಗಳಿಗೂ ಉಪಶಮನ ನೀಡುತ್ತದೆ. ಅದ್ಭುತ ಔಷಧೀಯ ಗುಣಗಳನ್ನು ಹೊಂದಿದೆ.

ತಾಂತ್ರಿಕರು ಪೂಜೆಯಲ್ಲಿ ಬಹುವಾಗಿ ಬಳಸುವ ವಸ್ತು ಇದಾಗಿದ್ದು, ಬಂಗಾಳದಲ್ಲಿ ಕಾಳಿ ಪೂಜೆಗೆ ಬೇಕೇಬೇಕು ಅನ್ನುವಷ್ಟು ಮುಖ್ಯವಾದ ವಸ್ತು. ಒಡಿಶಾ, ಮಧ್ಯಪ್ರದೇಶಗಳಲ್ಲಿ ವಾಸಿಸುವ ವನವಾಸಿಗಳು; ಔಷಧದಲ್ಲಿ, ಧಾರ್ಮಿಕ ವಿಧಿಗಳಲ್ಲಿ ಕಪ್ಪು ಅರಿಷಿಣವನ್ನು ಬಳಸುತ್ತಿದ್ದರು. ಬಹೂಪಯೋಗಿ ಕಪ್ಪು ಅರಿಷಿಣಕ್ಕೆ ಮರು ಜನ್ಮ ನೀಡುವ ಸಂಕಲ್ಪ ಮಾಡಿದ ಕದಂಬ, ಅದರ ಮೊಳಕೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ವಿಶೇಷ ವಿಧಾನದಲ್ಲಿ ಅಭಿವೃದ್ಧಿಪಡಿಸಿದ ಸಸ್ಯದ ಮೊಳಕೆಗಳನ್ನು ಲಾಭದಾಯಕ ಬೆಳೆಯಾಗಿ ಪರಿವರ್ತಿಸುವ ಪ್ರಯತ್ನದಲ್ಲಿದೆ ಕದಂಬ. ಮಣ್ಣಿನ ಆರೋಗ್ಯಕ್ಕೂ ಪೂರಕವಾದ ಹಾಗೂ ಮನುಷ್ಯರಿಗೂ ಪ್ರಯೋಜನಕಾರಿಯಾದ ಕಪ್ಪು ಅರಿಷಿಣವನ್ನು ರೈತರಿಗೆ ಪರಿಚಯಿಸುವ, ಬೆಳೆದ ಬೆಳೆಗೆ ಮಾರುಕಟ್ಟೆ ಒದಗಿಸುವ ಹೊಣೆಯೂ ಕದಂಬದ್ದು.

# ಅಂಗೈಯಲ್ಲಿ ಹಿಡಿದ ಆಕಾಶ–ಮೊಬಿಟೆಕ್

ಶಿರಸಿ ತಾಲೂಕು ಮುಂಡ್ಗೇರಿಯ ಶ್ರೀ ಜಿ.ವಿ.ಹೆಗಡೆಯವರು ಕೃಷಿಯಲ್ಲಿ ಗಂಭೀರವಾಗಿ ತೊಡಗಿಕೊಂಡವರು. ಅಂಗಳದ ಅಡಿಯಿಂದ ಬೆಟ್ಟದ ತುದಿಯವರೆಗೆ ಹಸಿರನ್ನು ನೆಟ್ಟವರು. ಬಾಳೆ, ಕಾಳುಮೆಣಸು, ರಬ್ಬರ್, ವೆನಿಲ್ಲಾ, ಅಡಕೆ, ಕೋಕೊ, ಗೇರು ಹೀಗೆ ಹತ್ತಾರು ಬೆಳೆಗಳ ಬೇಸಾಯ. ಅವಕ್ಕೆಲ್ಲ ಹನಿ ನೀರಾವರಿಯ ಸೌಲಭ್ಯ. ಒಂದೊಂದು ದಿನ ಒಂದೊಂದು ಕಡೆ ನೀರು ಬಿಡಬೇಕು. ಈ ಮಧ್ಯೆ ನೆಂಟರ ಮನೆಗೋ ಬೆಂಗಳೂರಿಗೋ ಮತ್ತಾವ ಪ್ರವಾಸಕ್ಕೋ ಹೋಗಬೇಕಾದ ಸಂದರ್ಭಗಳು ಆಗಾಗ ಬರುತ್ತವೆ. ಕೆಲಸಕ್ಕೆ ಕಾರ್ಮಿಕರನ್ನು ಅವಲಂಬಿಸುವುದು ಕಷ್ಟ. ಬಂದ ಕೆಲಸಗಾರನಿಗೆ ನೀರಾವರಿಯ ತಾಂತ್ರಿಕತೆಯ ತರಬೇತಿ ನೀಡಬೇಕಾಗುತ್ತದೆ. ಅದಕ್ಕವರು ಅವಲಂಬಿಸಿದ್ದು ಮೊಬಿಟೆಕ್ (mobitech wireless solution) ಎನ್ನುವ ತಂತ್ರಜ್ಞಾನವನ್ನು. ಅದನ್ನು ಅವರಿಗೆ ಪರಿಚಯಿಸಿದ್ದು ಕದಂಬ. ತಮಿಳು ನಾಡಿನ ವೆಂಗಮೇಡು ನಗರದಲ್ಲಿ ಸಿದ್ಧವಾದ ಈ ಮೊಬಿಟೆಕ್ ತಂತ್ರಜ್ಞಾನ ಬಹು ಉಪಯೋಗಿಯಾದದ್ದು. ಪಂಪ್ ಆನ್ ಮಾಡುವುದು, ಬಂದ್ ಮಾಡುವುದು, ನಿರ್ದಿಷ್ಟ ಪೈಪ್‌ನಲ್ಲಿ ನೀರು ಬಿಡುವುದು, ಅವಧಿಯನ್ನು ನಿರ್ಣಯಿಸಿ ನೀರು ಸಿಂಪಡಿಸುವುದು ಎಲ್ಲವನ್ನೂ ಮೊಬೈಲ್ ಮೂಲಕ ಮಾಡಬಹುದು. ಕರಾರುವಾಕ್ಕಾಗಿ ಕೆಲಸ ಮಾಡುವ ಈ ತಂತ್ರಜ್ಞಾನದಿಂದ ಕೆಲಸ ವ್ಯವಸ್ಥಿತವಾಗಿ ಮುಗಿಯುತ್ತದೆ. ಸಮಯ ಹಣ ಉಳಿತಾಯವಾಗುತ್ತದೆ. ನಾವೆಲ್ಲೇ ಇದ್ದರೂ ಮನೆಯಲ್ಲಿದ್ದಂತೆ ಭಾಸವಾಗುತ್ತದೆ. ವಿವಿಧ ಯಂತ್ರಗಳನ್ನು, ವಾಹನಗಳನ್ನು, ಯಂತ್ರಾಧಾರಿತ ಕೃಷಿ ಚಟುವಟಿಕೆಗಳನ್ನು, ಗಾಳಿಯಂತ್ರದಂತಹ ವ್ಯವಸ್ಥೆಯನ್ನು ಮೊಬೈಲ್ ಮೂಲಕ ನಿಯಂತ್ರಿಸುವ ಅಪೂರ್ವ ಅನುಕೂಲ ಇಲ್ಲಿದೆ. ಜಿ.ವಿ.ಹೆಗಡೆಯವರ ಮಾತಲ್ಲೇ ಹೇಳುವುದಾದರೆ "ಮೊಬೈಲ್ ಎನ್ನುವ ಯಂತ್ರ ನಮಗೆ ಸಿಕ್ಕ ವರವಾಗಿದೆ. ಅದನ್ನು ಬಳಸುವ ವಿಧಾನದಲ್ಲಿ ನೂರು ಅನುಕೂಲಗಳನ್ನು ಸೃಷ್ಟಿಸಬಹುದು. ಮೊಬಿಟೆಕ್ ತಂತ್ರಜ್ಞಾನ ರೈತರಿಗೆ ವರದಾನ. ನಿಸ್ತಂತು ನಿಯಂತ್ರಣಕ್ಕೆ ಬೇಕಾದ ಸಂವೇದವಶೀಲ ವಾಲ್ವ್‌ಗಳನ್ನು ಕಂಪನಿಯೇ ಪೂರೈಸುತ್ತದೆ. ಬಳಸುವ ವಿಧಾನವನ್ನು ಕದಂಬದ ಮೂಲಕ ಪಡೆದುಕೊಂಡೆ. ಗಿಡಗಳಿಗೆ ನಿಯಮಿತವಾಗಿ ನೀರುಣಿಸುವ ವಿಷಯದಲ್ಲಿ ಈಗ ನಾನು ನಿಶ್ಚಿಂತ. ಟ್ಯಾಂಕಿನಲ್ಲಿ ಎಷ್ಟು ನೀರಿದೆ, ಎಷ್ಟು ಕ್ಷೇತ್ರಕ್ಕೆ ನೀರುಣಿಸಬಹುದು ಎನ್ನುವುದನ್ನೂ ಮೊಬೈಲ್ ಮೂಲಕ ತಿಳಿಯಬಹುದು. ನನ್ನ ಪಾಲಿಗೆ ಇದು ಆಪದ್ಬಾಂಧವ. ನನಗೆ ಇದನ್ನು ಪರಿಚಯಿಸಿದ ಕದಂಬಕ್ಕೆ ನಾನು ಕೃತಜ್ಞ".



ಹೀಗೆ ಹೊಸ ತಂತ್ರಜ್ಞಾನವೊಂದನ್ನು ಹುಡುಕುವ, ಅದನ್ನು ಕೃಷಿಕರಿಗೆ ಪರಿಚಯಿಸುವ ಉತ್ಸಾಹ ನನಗೆ ಇದ್ದೇ ಇದೆ. ಸಿಕ್ಕ ಯಾವುದೇ ಹೊಸ ಜ್ಞಾನ, ತಂತ್ರಜ್ಞಾನದ ವಿಷಯದಲ್ಲಿ ಸಿನಿಕತೆಯನ್ನು ತೋರದೆ ಅದರ ಸಮರ್ಥ ಉಪಯೋಗದತ್ತ ಗಮನಿಸಬೇಕು ಎಂಬುದು ನನ್ನ ನಿಲುವು. ಅವುಗಳಲ್ಲಿ ಕೊರತೆ, ನ್ಯೂನತೆ ಕಾಣಿಸಿದರೆ ಸಂಬಂಧಪಟ್ಟವರ ಗಮನಕ್ಕೆ ತಂದು ಸುಧಾರಿತ ಆವೃತ್ತಿಯನ್ನು ಪಡೆಯುವವರೆಗೆ ನಿದ್ದೆ ಬಾರದು. ಇಂತಹ ವಿಷಯದಲ್ಲಿ ಗಂಭೀರವಾಗಿ, ಪ್ರಯೋಗಾತ್ಮಕವಾಗಿ ತೊಡಗಿಕೊಂಡಿರುವ ಅನೇಕ ಕೃಷಿಕ ಮಿತ್ರರೂ ನನಗೆ ದೊರೆತಿದ್ದಾರೆ. ಅವರ ತಾಳ್ಮೆ ಪರಿಶ್ರಮಗಳೂ ಗಮನಾರ್ಹವಾದವು. ಅವರೆಲ್ಲರನ್ನೂ ನಾನು ಕದಂಬದ ಈ ಅಭಿಯಾನದಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

# ಕದಂಬ ವನ



ಕದಂಬ ಕರ್ನಾಟಕದ ಮೊದಲ ರಾಜವಂಶ. ಕನ್ನಡದಲ್ಲಿ ಆಳಿದ ಅರಸೊತ್ತಿಗೆ. ಕದಂಬ ವೃಕ್ಷಕ್ಕೆ ಪೂಜೆ ಸಲ್ಲಿಸುತ್ತಿದ್ದ ರಾಜವಂಶ ಇಂದಿಲ್ಲವಾದರೂ ಕದಂಬ ವೃಕ್ಷದ ಮಹಾತ್ಮೆ, ಪ್ರಯೋಜನಗಳು ನಮಗೆ ಗೊತ್ತಿದೆ. ಕದಂಬರ ರಾಜಧಾನಿ ಬನವಾಸಿಯ ಪಂಪ ವನದಲ್ಲಿ ತಲೆಯೆತ್ತಿ ನಿಂತಿರುವ ಕದಂಬ ವೃಕ್ಷದ ಸಂತತಿ ಕ್ಷೀಣಿಸುತ್ತಿದೆ. ಇದನ್ನು ಗಮನಿಸಿದ ಕದಂಬ ಫೌಂಡೇಶನ್. ಕದಂಬವನ ನಿರ್ಮಾಣಕ್ಕೆ ಸಂಕಲ್ಪ ಮಾಡಿತು. ಅರಣ್ಯ ಇಲಾಖೆಯ ಜೊತೆಗೂಡಿ ಕದಂಬದ ಸಸಿಗಳನ್ನು ಬೆಳೆಸಿ ರೈತರಿಗೆ ನೀಡುವ ಯೋಜನೆಗೆ ಚಾಲನೆ ಸಿಕ್ಕಿದೆ. ಈಗಾಗಲೇ ಸಾವಿರಾರು ಸಸಿಗಳು ಸೂರ್ಯನಿಗೆ ಮುಖಮಾಡಿ ಹಸಿರು ನಗೆ ಬೀರುತ್ತಿವೆ.

ಕದಂಬ ವೃಕ್ಷವೆಂದರೆ ಹಸಿರಿನ ತೇರು. ದೊಡ್ಡ ದೊಡ್ಡ ಹಸಿರು ಎಲೆಗಳು (ಅರ್ಧ ಅಡಿಯಿಂದ ಒಂದು ಅಡಿಯಷ್ಟು ಉದ್ದ), ಬ್ಯಾಡ್ಮಿಂಟನ್ ಚೆಂಡನ್ನು ಹೋಲುವ ಬಂಗಾರದ ಬಣ್ಣದ ಹೂವುಗಳನ್ನು ಹೊಂದಿರುವ ಕದಂಬವು ಮುಗಿಲಿನತ್ತ ಮುಖಮಾಡಿ ನೇರವಾಗಿ 45 ಮೀಟರ್ ಎತ್ತರದವರೆಗೂ ಬೆಳೆಯುತ್ತದೆ. ನೇರ ಸಿಲಿಂಡರ್ ಆಕಾರದ ಕಾಂಡ, ವಿಶಾಲವಾದ ಕೊಂಬೆಗಳನ್ನು ಹೊಂದಿ ಬೆಳೆಯುವ ಕದಂಬ ಮೊದಲ 6–8 ವರ್ಷಗಳಲ್ಲಿ ವೇಗವಾಗಿ ಬೆಳೆಯುತ್ತದೆ. ಗೊಂಚಲು ಗೊಂಚಲಾಗಿ ಅರಳುವ ಬಂಗಾರ ಬಣ್ಣದ ಹೂವಿಗೆ ಮತ್ತು ಬರಿಸುವಂತಹ ಪರಿಮಳ.

# ಕದಂಬ ವೃಕ್ಷದಿಂದಾಗುವ ಪ್ರಯೋಜನಗಳು ಅನೇಕ

ಅದರ ಹಣ್ಣು ಆಹಾರವಾಗಿ, ಔಷಧವಾಗಿ ಒದಗುತ್ತದೆ. ಮರದ ಎಲ್ಲ ಭಾಗಗಳೂ ಔಷಧೀಯವಾದುದರಿಂದ ಬಹೂಪಯೋಗಿ ವೃಕ್ಷ. ಅಗ್ನಿದೀಪಕವಾಗಿ ಅಜೀರ್ಣವನ್ನು ದೂರಮಾಡುತ್ತದೆ, ಪ್ರತಿರಕ್ಷೆಯ ಸಾಮರ್ಥ್ಯ ಹೆಚ್ಚಿಸಿ ಪರಾವಲಂಬಿ ಸೋಂಕನ್ನು ಕಳೆಯುತ್ತದೆ. ಶಿಲೀಂಧ್ರದ ಸೋಂಕನ್ನೂ ಬ್ಯಾಕ್ಟೀರಿಯಾ ಸೋಂಕನ್ನೂ ತಡೆಗಟ್ಟುತ್ತದೆ, ಸಕ್ಕರೆ ರೋಗವನ್ನು ನಿಯಂತ್ರಿಸುತ್ತದೆ, ಕೊಬ್ಬನ್ನು ಕರಗಿಸುತ್ತದೆ, ಸಂಧಿವಾತಕ್ಕೂ ಔಷಧವಾಗುತ್ತದೆ, ಕ್ಯಾನ್ಸರ್ ಕಾಯಿಲೆಗ ಪರಿಹಾರ ನೀಡುತ್ತದೆ ಎನ್ನಲಾಗಿದೆ.

ಮರವನ್ನು ಪೆನ್ಸಿಲ್ ತಯಾರಿಕೆ, ಮ್ಯಾಚ್ ಸ್ಟಿಕ್, ಪ್ಲೈವುಡ್ ಮತ್ತು ಕಾಗದ ಕಾರ್ಖಾನೆಗಳಲ್ಲಿ ಬಳಸುತ್ತಾರೆ. ಪೆಟ್ಟಿಗೆ ಮತ್ತು ಪೀಠೋಪಕರಣ ತಯಾರಿಕೆಯಲ್ಲಿ ಬಳಕೆಯಾಗುತ್ತದೆ. ಅಲಂಕಾರಿಕ ಸಸ್ಯವಾಗಿಯೂ ಮರವನ್ನು ಬೆಳೆಸುತ್ತಾರೆ

ಮರದ ಎಲೆ ಉತ್ತಮ ಮೇವು. ಗಂಟಲು ಸೋಂಕಿನ ನಿವಾರಣೆಗೆ ಮತ್ತು ಮಧುಮೇಹಕ್ಕೆ ಎಲೆ ಔಷಧವಾಗುತ್ತದೆ. ಉತ್ತಮ ಗೊಬ್ಬರಕ್ಕೆ, ಮಣ್ಣಿನ ಫಲವತ್ತತೆಗೆ ಎಲೆಗಳು ಬಳಕೆಯಾಗುತ್ತವೆ.

ಹಣ್ಣುಗಳು ಔಷಧೀಯ ಗುಣ ಹೊಂದಿವೆ. ಬೀಜಗಳೂ ವೈದ್ಯಕೀಯದಲ್ಲಿ ಉಪಯೋಗಿಸಲ್ಪಡುತ್ತವೆ. ಬೀಜಗಳನ್ನು ಅರೆದು ನೀರಿನಲ್ಲಿ ಸೇರಿಸಿ ಸೇವಿಸಿದರೆ ವಿರೋಧಿ ವಿಷವಾಗಿ ಕೆಲಸ ಮಾಡುತ್ತದೆ.

ಅಲ್ಕಲಾಯ್ಡ್ ಕ್ಯಾಡ್‌ಮೈನ್ ಮತ್ತು ಐಸೊ ಕ್ಯಾಡ್‌ಮೈನ್‌ಗಳನ್ನು ಕದಂಬದಿಂದ ಪ್ರತ್ಯೇಕಿಸಿ ಉಪಯೋಗಿಸುತ್ತಾರೆ.

ಹೂವುಗಳನ್ನು ಸುಗಂಧ ದ್ರವ್ಯ ತಯಾರಿಕೆಯಲ್ಲಿ ಬಳಸುತ್ತಾರೆ.

ಬೇರಿನ ತೊಗಟೆಯಿಂದ ನೈಸರ್ಗಿಕ ಹಳದಿ ಬಣ್ಣವನ್ನು ಬೇರ್ಪಡಿಸಬಹುದು.

ಕೋಟ್ಯಂತರ ರೂಪಾಯಿಗಳ ಮೊತ್ತದಲ್ಲಿ ಆದಾಯ ತರುವ ಕಾಡುಕೃಷಿಯಾಗಿ ಗುರುತಿಸಲ್ಪಟ್ಟಿದೆ.

ಇಂತಹ ಅಪರೂಪದ ಸಸ್ಯ ಪ್ರಭೇದವೊಂದು ಕಣ್ಮರೆಯಾಗುವ ಮೊದಲು, ಅದರ ಸಂತಾನವನ್ನು ಬೆಳೆಸುವ ಉದ್ದೇಶದಿಂದ ಆರಂಭವಾದ ಕದಂಬವನ ಕಾರ್ಯಕ್ರಮ ಯಶಸ್ವಿಯಾಗಿ ಮುನ್ನಡೆದಿದೆ.

# ಭವಿಷ್ಯದ ಅನ್ನ ಸೂಪರ್ ಫುಡ್

ಅದೊಂದು ಕಾಲವಿತ್ತು ಭಾರತದ ಹಸಿವೆಗೆ ಅನ್ನ ಹುಡುಕಲು ಅಮೇರಿಕದತ್ತ ನೋಡಿದ ದಿನಗಳವು. ನಂತರ ರಾಸಾಯನಿಕ ಮತ್ತು ತಾಂತ್ರಿಕ ಕೃಷಿಯಿಂದ ಹಸಿರು ಕ್ರಾಂತಿಯನ್ನು ಮಾಡಿದೆವು. ಅದರಿಂದ ಅನ್ನ ಹೆಚ್ಚಾಯಿತು ಜೊತೆಗೆ ರೋಗವೂ ಹೆಚ್ಚಾಯಿತು. ಗೋಧಿಯ ಕಣಜ ಪಂಜಾಬಿನಲ್ಲಿ ಸಂಚರಿಸುವ ರೈಲೊಂದಕ್ಕೆ ಕ್ಯಾನ್ಸರ್ ರೈಲು ಎಂದು ಕರೆಯಲಾಗುತ್ತಿದೆ. ಅನ್ನದೊಡನೆ ಅನಾರೋಗ್ಯವನ್ನೂ ಅಷ್ಟೇ ಪ್ರಮಾಣದಲ್ಲಿ ಪಡೆದೆವು. ಅನ್ನಂ ಬಹು ಕುರ್ವೀತ ತದ್ವ್ರತಂ (ಅನ್ನವನ್ನು ಹೆಚ್ಚು ಮಾಡುವುದೇ ವ್ರತ) ಎಂಬುದು ಉಪನಿಷತ್ತಿನ ಮಾತು. ಅನ್ನವನ್ನು ಹೆಚ್ಚು ಮಾಡುವ ಅದೆಷ್ಟು ಪ್ರಯೋಗಗಳು ಪ್ರಪಂಚದಾದ್ಯಂತ ನಡೆದವು. ಆದರೆ ಅದು ವಿಷಮಯವಾದದ್ದು ಮಾತ್ರ ನಮ್ಮ ದುರಂತವೇ ಸರಿ. ಈಗ ವಿಷ ಕೃಷಿಗೆ ಪರ್ಯಾಯವನ್ನು ಹುಡುಕುತ್ತಿದ್ದೇವೆ. ಈ ಹುಡುಕಾಟದಲ್ಲಿ ಅಮೃತವನ್ನು ಕಂಡವರೂ ಇದ್ದಾರೆ. ಅವರ ಸಂಶೋಧನೆಯೇ ಭವಿಷ್ಯದ ಅನ್ನವಾಗಿದೆ. ಅದನ್ನು ಸೂಪರ್ ಫುಡ್ ಎಂದು ಕರೆದಿದ್ದಾರೆ. ನಾವು ಅದನ್ನು ಅಮೃತಾನ್ನ ಎಂದೂ ಕರೆಯಬಹುದು. ಈ ವಿಷಯದಲ್ಲಿ ನನ್ನ ಗಮನ ಸೆಳೆದವರು ಆಹಾರ ವಿಜ್ಞಾನಿ ಮೈಸೂರಿನ ಡಾ. ದೀಪಾ ಪ್ರಕಾಶ ಅವರು. ವೈವಿಧ್ಯಮಯ ಆಹಾರದ ಕುರಿತ ಅವರ ನಿರಂತರ ಶೋಧ, ನಿತ್ಯದ ಪ್ರಯೋಗ ಎಲ್ಲರಿಗೂ ಮಾದರಿಯಾಗಿದೆ, ಅಷ್ಟೇ ಅಲ್ಲ ವ್ಯಾವಹಾರಿಕವೂ ಜನಮುಖಿಯೂ ಆಗಿದೆ. ಸುರಕ್ಷಿತ ಆಹಾರಕ್ಕೆ ಒತ್ತು ನೀಡಿದೆ.



## ಚಿರ ನೂತನ ಅಮೃತಾನ್ನ

ದಿನವೂ ಹೊಸದಾಗಿ ಹಸಿವೆಯಾಗುವಂತೆ ಅನ್ನವೂ ಹೊಸದಾಗಬೇಕು. ಸೂಪರ್ ಫುಡ್ ಎಂದಾಗ ಪ್ರಯೋಗಾಲಯದಲ್ಲಿ ಸಿದ್ಧವಾದ ಯಾವುದೋ ಹೊಸ ಆಹಾರದ ಅವತಾರ, ಅದರ ಜಾಹೀರಾತು ಎಂದು ಶುರುವಾದೀತೆಂದು ಕಾಯುವ ಸರದಿ ನಮ್ಮದಾಗುತ್ತದೆ! ಅನ್ನ ಎಂದಿದ್ದರೂ ಮಣ್ಣಿನಿಂದಲೇ ಬರಬೇಕು. ಈ ಮಣ್ಣಿನಲ್ಲಿ ಬಹಳ ಕಾಲ ಬದುಕಿ ಬಂದ ಧಾನ್ಯದ ಬೀಜಗಳೇ ನಮಗೆ ಭವಿಷ್ಯವನ್ನು ನೀಡಬೇಕಲ್ಲದೆ ಬಣ್ಣ ಬಣ್ಣದ ಪೊಟ್ಟಣಗಳಲ್ಲಿ ಬರುವ ಸಿದ್ಧ ಆಹಾರಗಳಿಂದ ಅದು ಸಾಧ್ಯವೇ ಇಲ್ಲ. ಅಮೃತಾನ್ನದ ವಿಶೇಷತೆ ಎಂದರೆ ಅದು ಎಲ್ಲ ಮಣ್ಣಿನಲ್ಲೂ ಬೆಳೆಯುತ್ತದೆ. ನೀರಾವರಿಯ ಅಗತ್ಯವಿಲ್ಲ. ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿಯೂ ಹುಲುಸಾಗಿ ಬೆಳೆಯುತ್ತದೆ. ರಾಸಾಯನಿಕ ಗೊಬ್ಬರ ಔಷಧಗಳ ಅಗತ್ಯವಿಲ್ಲ. ಸಹಜವಾಗಿಯೇ ಇದು ಸಾವಯವ ಆಹಾರ. ಅನಗತ್ಯ ವೆಚ್ಚವಿಲ್ಲದ ಕಾರಣ ಈ ಜೀವದಾಯಕ ಕೃಷಿ ಲಾಭದಾಯಕವೂ ಹೌದು. ಹುಲ್ಲಿನಂತೆಸಹಜವಾಗಿ ಬೆಳೆಯುವ ಈ ಬೆಳೆಗೆ ಕಳೆಗಳನ್ನೆದುರಿಸಿ ಬೆಳೆಯುವ ಕ್ಷಮತೆಯಿರುವುದರಿಂದ ಕೃಷಿಯ ಶ್ರಮವೂ ಕಡಿಮೆಯಾಗುತ್ತದೆ. ಮುಖ್ಯವಾಗಿ ಈ ಧಾನ್ಯಗಳ ಸತ್ವ ಹೆಚ್ಚಿನದು. ದೇಹಕ್ಕೆ ಬೇಕಾದ ಎಲ್ಲ ಪೋಷಕಾಂಶಗಳನ್ನು ಹೊಂದಿರುವ ಈ ಎಲ್ಲ ಧಾನ್ಯಗಳೂ ಪುರಾತನ ಕೃಷಿಯ ಫಲಗಳೇ. ಆದರೆ, ಪ್ರಸ್ತಾವನೆ ಮಾತ್ರ ಹೊಸದು ಅಷ್ಟೇ.



## ಶಕ್ತಿ ಧಾನ್ಯ– TEFF Seeds

ಈ ಧಾನ್ಯಗಳು ಐದು ಸಾವಿರ ವರುಷಗಳಿಗಿಂತ ಹಿಂದಿನಿಂದಲೂ ಈ ಭೂಮಿಯಲ್ಲಿ ಬದುಕಿ ಬಂದವುಗಳು. ಇಥಿಯೋಪಿಯಾದ ಒಣ ಭೂಮಿಯಲ್ಲಿ ಬೆಳೆದು ಬಂದ ಧಾನ್ಯ ಇದು. ನಾರಿನಂಶ, ಸಸಾರಜನಕ, ಖನಿಜಾಂಶಗಳು, ಜೀವ ಸತ್ವಗಳೆಲ್ಲ ತುಂಬಿರುವ, ಹೊಳೆಯುವ ಬಣ್ಣದ ಈ ಧಾನ್ಯವನ್ನು ನೋಡಿದರೆ ಕಣ್ಣು ತುಂಬುತ್ತದೆ. ಎಲುಬುಗಳನ್ನು ಗಟ್ಟಿಗೊಳಿಸುವ ಕ್ಯಾಲ್ಸಿಯಂ ಶಕ್ತಿ ಇದರಲ್ಲಿದೆ. ಅಕ್ಕಿಯನ್ನು ಪೋಲಿಶ್ ಮಾಡಿ ಬೆಳ್ಳಗೆ ಮಾಡಿದಂತೆ ಈ ಧಾನ್ಯಗಳನ್ನು ಸಿಪ್ಪೆ ಸುಲಿದು ದುರ್ಬಲಗೊಳಿಸಲಾಗದು. ಈ ಧಾನ್ಯವನ್ನು ಬಳಸಿ ವಿವಿಧ ರೀತಿಯ ತಿಂಡಿಗಳನ್ನು ರೂಪಿಸಲಾಗಿದೆ.

## ಅರಳನ್ನ – CHIA Seeds

ನಮಗೆ ಪರಿಚಿತವಿರುವ ಅಳವಿ ಬೀಜ, ಕಾಮಕಸ್ತೂರಿಯಂತಹ ಧಾನ್ಯ ಇದು. ನೀರಿನಲ್ಲಿ ನೆನೆಸಿದರೆ ತಕ್ಷಣ ಅರಳಿ ಅನ್ನವಾಗುವ ಗುಣ ಇದರದ್ದು. ದಕ್ಷಿಣ ಅಮೇರಿಕಾ ಮೂಲದ್ದು ಎಂದು ವಿಜ್ಞಾನಿಗಳ ಅಭಿಮತ. ಮನುಷ್ಯನ ದೇಹಕ್ಕೆ ಬೇಕಾದ ಎಲ್ಲ ಪೋಷಕಾಂಶಗಳನ್ನೂ ಹೊಂದಿರುವ ಈ ಅರಳನ್ನ ಆಧುನಿಕ ಜೀವನ ಶೈಲಿಯಿಂದ ಬರುವ ರೋಗಗಳಿಗೆ ವರೌಷಧವಾಗಿದೆ. ಸತ್ವ ನೀಡುವುದರೊಂದಿಗೆ ಬೊಜ್ಜು ಕರಗಿಸುವ, ನಿರೋಗಿಯಾಗಿಸುವ ಗುಣವನ್ನೂ ಇದು ಹೊಂದಿದೆ.





## ಸತ್ವಾನ್ನ – BUCK Seeds

ಸಸಾರಜನಕ ಮತ್ತು ಪೋಷಕಾಂಶಗಳ ಗಣಿ ಈ ಧಾನ್ಯ. ಬೊಜ್ಜು ಕರಗಿಸುವುದಕ್ಕೆ ಔಷಧವಾಗಬಲ್ಲ ಆಹಾರ. ಕ್ಯಾನ್ಸರ್ಗೂ ಔಷಧವಾಗುವ ಗುಣವಿದೆ. ಯಕೃತ್ತಿಗೆ ಉಪಕಾರಿಯಾದ ಧಾನ್ಯ.

# ನೀರನ್ನ-ಅಗೋದಿ ಧಾನ್

ವೈರಿಗಳ ನೆಲೆಯನ್ನು ಹೊಕ್ಕು ಹೋರಾಡುವ ಸೈನಿಕರಿಗೆ ಆಹಾರವಾಗುವ ಧಾನ್ಯ ಇದು. ಬೆಂಕಿ ಹಚ್ಚಿದರೆ ಹೊಗೆಯಾಗಿ, ಬೆಳಕಾಗಿ ಕಾಡುತ್ತದೆ ಎನ್ನುವ ಸಂದರ್ಭದಲ್ಲಿ ನೀರಲ್ಲಿ ನೆನೆಸಿದರೆ ಸಾಕು ಅನ್ನವಾಗಿ ಒದಗುವ ಧಾನ್ಯ ಇದು. ಬೆಂಕಿಯಿಲ್ಲದೆ ನೀರಿಲ್ಲದೆ ಅಡುಗೆ ಮಾಡಬಲ್ಲ ನಳ ಮಹಾರಾಜನ ಕಥೆ ನಮಗೆ ಗೊತ್ತು. ನಾವೂ ನಳಪಾಕ ಮಾಡಬಹುದಾದ ಅವಕಾಶವನ್ನು ನೀಡುತ್ತಿದೆ ಅಗೋದಿ ಧಾನ್. ಈ ದಾನ್ಯದ ಬೀಜಗಳು ಇನ್ನೂ ನಮಗೆ ಸಿಕ್ಕಿಲ್ಲ. ಜಿಯೋ ಟ್ಯಾಗ್ ಆಗಿರುವುದರಿಂದ ಅದನ್ನು ದೊರಕಿಸಿಕೊಳ್ಳಲು ಹೆಚ್ಚಿನ ಶ್ರಮ ಬೇಕಾಗಿದೆ. ಮನುಕುಲಕ್ಕೇ ಉಪಕಾರಿಯಾಗುವ ವಿಶಿಷ್ಟ ಧಾನ್ಯವಾದ್ದರಿಂದ ಈ ವಿಷಯದಲ್ಲಿ ಕದಂಬದ ನಿರೀಕ್ಷೆ ಇದ್ದೇ ಇದೆ.



ಈ ಎಲ್ಲ ಧಾನ್ಯಗಳು ಸಾವಯವ ಕೃಷಿಗೆ ಹೊಂದಿಕೊಳ್ಳುವ ಅತ್ಯಂತ ಸರಳ ಬೆಳೆಗಳು. ಮಣ್ಣಿನ ಸತ್ವವನ್ನು ಕೆಡಿಸದೆ ಶಕ್ತಿಯುತ ಆಹಾರ ನೀಡುವ ಅನ್ನದ ಮೂಲಗಳು. ವರ್ಷದ ಎಲ್ಲ ಕಾಲಗಳಲ್ಲೂ ಬಿತ್ತಿ ಬೆಳೆಯಬಹುದಾದ ಈ ಧಾನ್ಯಗಳಿಂದ ನಿರೋಗಿ ಸಮಾಜವನ್ನು ಕಟ್ಟಬೇಕಿದೆ, ಸತ್ವಯುತ ಸಂತಾನವನ್ನು ಬೆಳೆಸಬೇಕಿದೆ.


ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅಂಗ ಸಂಸ್ಥೆಗಳಾದ ಮೈಸೂರಿನಲ್ಲಿರುವ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ (CFTRI), ಕಾಸರಗೋಡಿನ ತೋಟಗಾರಿಕಾ ಉತ್ಪನ್ನಗಳ ಸಂಶೋಧನಾ ಸಂಸ್ಥೆ (CPCRI), ಲಕ್ನೋದಲ್ಲಿರುವ ಔಷಧ ಹಾಗೂ ಸುಗಂಧ ಸಸ್ಯಗಳ ಕೇಂದ್ರೀಯ ಸಂಸ್ಥೆ (CIMAP), ಹಾಗೂ ರಾಂಚಿಯಲ್ಲಿರುವ ಭಾರತೀಯ ಪ್ರಾಕೃತಿಕ ಅಂಟು ಮತ್ತು ರಾಳ ಸಂಸ್ಥೆ (IINRG) ಈ ಎಲ್ಲ ಸಂಸ್ಥೆಗಳ ಸಂಶೋಧನೆಗಳು ಜನಸಾಮಾನ್ಯರನ್ನು ತಲುಪಬೇಕು ಎನ್ನುವ ಹಂಬಲ ಕದಂಬಕ್ಕೆ. ಅದಕ್ಕೆಂದೇ ಈ ಎಲ್ಲ ಅಭಿಯಾನಗಳು.

# ಚೈತನ್ಯಾಹಾರ (Functional Food)

ಆರೋಗ್ಯವೇ ಭಾಗ್ಯ, ಆಹಾರದಿಂದಲೇ ಅದು ಸಾಧ್ಯ. ಆಹಾರದ ಮೌಲ್ಯವರ್ಧನೆಗೆ ಕದಂಬ ಕಂಡುಕೊಂಡ ಹೊಸ ಆವಿಷ್ಕಾರ ಗ್ರೀನ್ ನ್ಯಾನೋ ತಂತ್ರಜ್ಞಾನದ ಸಿದ್ಧವಾದ ಚೈತನ್ಯಾಹಾರ ಅರ್ಥಾತ್ "Functional food"· ಸಾಮಾನ್ಯ ಪೌಷ್ಟಿಕತೆಗಿಂತ ಅಧಿಕವಾದ ಪ್ರಯೋಜನ ನೀಡುವ ಶ್ರೇಷ್ಠ ಆಹಾರಗಳ (Super Food) ಶೋಧದಿಂದಾಗಿ ತಿನ್ನುವ ತಿಂಡಿ, ಉಣ್ಣುವ ಅನ್ನ ಇನ್ನಷ್ಟು ಶಕ್ತಿಶಾಲಿಯಾಗಿವೆ, ಮತ್ತಷ್ಟು ಶುದ್ಧ ವೈವಿಧ್ಯಗಳನ್ನು ಸಿದ್ಧವಾಗಿವೆ. ಸಕ್ಕರೆ ಕಾಯಿಲೆ, ರಕ್ತದೊತ್ತಡಗಳ ಆತಂಕವಿಲ್ಲದೆ ಬಳಸಬಹುದಾದ ರುಚಿಕರ ಸಂಯೋಜನೆಗಳನ್ನು ಕದಂಬ ಆವಿಷ್ಕಾರ ಮಾಡಿದೆ. ಅಧಿಕ ಸತ್ವಯುತ ಟೆಫ್ ಹಾಗೂ ಚಿಯಾ ಧಾನ್ಯಗಳಿಂದಾರಂಭಿಸಿ ಎಲ್ಲ ಸಿರಿಧಾನ್ಯಗಳಿಂದಲೂ ಅತ್ಯಂತ ರುಚಿಕರವಾದ ಮತ್ತು ಪೌಷ್ಟಿಕವಾದ ಹೊಸ ಉತ್ಪನ್ನಗಳನ್ನು ಪರಿಚಯಿಸುತ್ತಿದ್ದೇವೆ.

ಆಹಾರ ಧಾನ್ಯಗಳ ಶತಕೋಟ್ಯಂಶದ (Nanoparticles) ಸತ್ವಾಂಶವನ್ನು ಬಳಸಿ ದೇಹ ಮನಸುಗಳಿಗೆ ಕ್ಷೇಮಕರವಾದ ಆಹಾರವನ್ನು ಸಿದ್ಧಪಡಿಸಿದ್ದು ಕದಂಬದ ಹೆಚ್ಚುಗಾರಿಕೆ, ಮನುಕುಲಕ್ಕೆ ಮಹತ್ವದ ಕೊಡುಗೆ. ಜೈವಿಕ ಲಭ್ಯತೆ, ಜೈವಿಕ ಹೊಂದಾಣಿಕೆ ಹಾಗೂ ಸ್ಥಿರತೆಗಳ ಅಪೂರ್ವ ಸಂಯೋಜನೆಯೊಂದಿಗೆ ಸಿದ್ಧವಾದ ಈ ಹೊಸ ಆವಿಷ್ಕಾರಗಳು ಆಹಾರಜನ್ಯ ರೋಗಗಳಿಗೆ ಆಸ್ಪದ ನೀಡುವುದಿಲ್ಲ, ಔಷಧೀಯವಾಗಿಯೂ ವರ್ತಿಸುತ್ತವೆ. ಸಾಂಪ್ರದಾಯಿಕ ಸಾಧ್ಯತೆಗಳನ್ನು ಮೀರಿದ ಸನಾತನ ಸತ್ವದ ಆಹಾರ ಪದ್ಧತಿಯನ್ನು ಪರಿಚಯಿಸುತ್ತಿದೆ ಕದಂಬ. ಮನುಷ್ಯನ ದೇಹ, ಬುದ್ಧಿ, ಮನಸು ಹಾಗೂ ಚಿತ್ತಗಳು ಪುಷ್ಟಿಗೊಳ್ಳುವುದು ಆಹಾರದಿಂದ. ಶುದ್ಧ, ಸಾವಯವ ಆಹಾರವನ್ನು ನ್ಯಾನೋ ತಂತ್ರಜ್ಞಾನದ ಮೂಲಕ ಪರಿಶೋಧಿಸಿ ನೀಡುವುದರಿಂದ ಮಾನವ ಕ್ಷೇಮ ಸಾಧಿತವಾಗುತ್ತದೆ ಮತ್ತು ಈ ಚೈತನ್ಯಾಹಾರಗಳು ಆಧುನಿಕ ಬದುಕಿನ ಪಕ್ವಾನ್ನಗಳಾಗುತ್ತವೆ ಎನ್ನುವ ಭರವಸೆ ಕದಂಬದ್ದು.





# ವಿಶ್ವದ ಭರವಸೆ "ಗ್ರೀನ್ ನ್ಯಾನೋ ತಂತ್ರಜ್ಞಾನ"

ವಿಶ್ವ ಇಂದು ಎದುರಿಸುತ್ತಿರುವ ಎಲ್ಲ ಸಮಸ್ಯೆಗಳಿಗೂ ಒಂದು ಸಮಗ್ರ ಪರಿಹಾರವನ್ನು ಬಯಸುತ್ತಿದೆ. ವಿಷಪೂರಿತ ಆಹಾರ, ಏರುತ್ತಿರುವ ಸಕ್ಕರೆ ರೋಗದ ಪ್ರಮಾಣ, ಅಡ್ಡಪರಿಣಾಮದ ಔಷಧಗಳು, ನಿಯಂತ್ರಣಕ್ಕೆ ನಿಲುಕದ ಪರಿಸರ ಮಾಲಿನ್ಯ, ದುಬಾರಿಯಾದ ಕೃಷಿ ಉತ್ಪಾದನಾ ವೆಚ್ಚ ಇವು ಪ್ರಮುಖವಾದವು. ಪ್ರಕೃತಿಯ ಸಹಜ ವ್ಯವಹಾರದಲ್ಲಿ ಆದ ಮನುಷ್ಯನ ಹಸ್ತಕ್ಷೇಪವೇ ಇದಕ್ಕೆಲ್ಲ ಕಾರಣ. ನಮ್ಮೆಲ್ಲರ ಬದುಕಿನ ಶೈಲಿಯೇ ಇದರ ಮೂಲದಲ್ಲಿದೆ. ಈಗ ಅದರ ಚಿತ್ರಣ ಬದಲಾಗಬೇಕೆಂದರೆ ನ್ಮಮ ಜೀವನ ಶೈಲಿಯನ್ನು ಪುನರ್ರೂಪಿಸುವ ಸಾವಯವ ಮಾರ್ಗದರ್ಶನ ಬೇಕಾಗಿದೆ. ಆಹಾರ, ಔಷಧ, ಇಂಧನ, ಗೊಬ್ಬರ ಎಲ್ಲವಕ್ಕೂ ಪರ್ಯಾಯ ಬೇಕಾಗಿದೆ ಮತ್ತು ಅದಕ್ಕೊಂದು ತಾತ್ವಿಕ ನೆಲೆಗಟ್ಟೂ ಬೇಕಾಗಿದೆ. ನಮ್ಮ ಕಲ್ಪನೆಗೂ ಮೀರಿದ ಪರಿಮಾಣದಲ್ಲಿ, ಪರಿಣಾಮದಲ್ಲಿ ಅದನ್ನು ನೀಡಬಲ್ಲ ಸಾಧ್ಯತೆ ಗ್ರೀನ್ ನ್ಯಾನೋ ತಂತ್ರಜ್ಞಾನಕ್ಕಿದೆ.

ಹಸಿರಿನ ಸೂಕ್ಷ್ಮಾತಿಸೂಕ್ಷ್ಮ ಕಣಗಳ ಸಂಯೋಜನೆಯಿಂದಾದ ಪ್ರಕೃತಿ ರಹಸ್ಯದ ಅನಾವರಣವೇ ಗ್ರೀನ್ ನ್ಯಾನೋ ತಂತ್ರಜ್ಞಾನ. ಹಸಿರಿನ ಎಲೆಯೊಂದರ ಶತಕೋಟ್ಯಂಶದ (Nanoparticles) ಸತ್ವಾಂಶವನ್ನು ಬಳಸಿಕೊಂಡು ಅಪೇಕ್ಷಿತ ಉತ್ಪನ್ನಗಳನ್ನು ಸಿದ್ಧಪಡಿಸುವ ಅತ್ಯಾಧುನಿಕ ವಿಜ್ಞಾನ. ಪ್ರಕೃತಿಯಿಂದ ಅತ್ಯಂತ ಕಡಿಮೆ ಸಂಪನ್ಮೂಲಗಳನ್ನು ಬಳಸಿ ಚೈತನ್ಯಪೂರ್ಣ ಆಹಾರ, ಶ್ರೇಷ್ಠವಾದ ಔಷಧ, ಹೊಗೆಯಿಲ್ಲದ ಇಂಧನ, ವಿಷವಲ್ಲದ ಗೊಬ್ಬರ, ಸುರಕ್ಷಿತ ಶೃಂಗಾರ ಸಾಧನಗಳು, ಹಿತವಾದ ವಸ್ತ್ರಗಳು, ಅಪಾಯರಹಿತ ಶುಭ್ರಕಗಳು ಹೀಗೆ ಇಂತಹ ನೂರಾರು ಉತ್ಪನ್ನಗಳನ್ನು ತಯಾರಿಸಬಲ್ಲ ಪವಾಡಸದೃಶ ವಿಜ್ಞಾನವಿದ್ಯೆ. ಈ ವಿದ್ಯೆ ಮತ್ತು ಇದರ ಉಪಯೋಗಗಳು ವಿಶ್ವದ ಆಲೋಚನೆಯನ್ನೇ ಬದಲಿಸಬಲ್ಲ ಕ್ಷಮತೆ ಉಳ್ಳವು. ಈ ವರೆಗಿನ ಸಂಶೋಧನೆಗಳಲ್ಲಿ ನ್ಯೂನತೆಯಿಲ್ಲದ ಸತ್ವಸಂಪನ್ನ ಶೋಧವಾಗಿದೆ. ವಿಶ್ವಕ್ಕೆ ಭವ್ಯ ಭವಿಷ್ಯದ ಭರವಸೆಯನ್ನು ನೀಡುವ ಈ ತಂತ್ರಜ್ಞಾನವನ್ನು ಜಗತ್ತಿಗೆ ಪರಿಚಯಿಸುತ್ತಿರುವುದು ಕದಂಬ.

# ನಾಲ್ಕು ವರ್ಷಗಳ ಮೌನಕ್ಕೆ ನೂರು ಕೈಗಳ ಬಲ



ಒಂದು ಕ್ಷೇತ್ರದ ಸಂಸತ್ ಸದಸ್ಯನಾಗಿದ್ದೂ ರಾಜಕಾರಣದಿಂದ, ಸಾರ್ವಜನಿಕ ಸಮಾರಂಭಗಳಿಂದ ದೂರ ಇದ್ದು ಅನಂತಕುಮಾರ ಹೆಗಡೆ ಏನು ಮಾಡಿರಬಹುದೆಂಬ ಕುತೂಹಲ ಜನರಿಗೆ ಸಹಜವಾದದ್ದು. ಅಭಿಮಾನಿಗಳಿಗೆ ಆತಂಕವಾದದ್ದೂ ನಿಜ. ಟೀಕಿಸುವವರಿಗೆ ಅವಕಾಶವೂ ಆಯಿತು! ನನಗೆ ಈ ಯಾವುದರ ಪರಿವೆಯೂ ಇರಲಿಲ್ಲ. ರಾಜಕಾರಣಿಯೊಬ್ಬ ಮುಂದಿನ ಚುನಾವಣೆಯನ್ನಷ್ಟೇ ನೋಡುತ್ತಾನೆ. ನನಗೆ ನನ್ನ ಸಮಾಜದ ಮುಂದಿನ ಮೂರು ಪೀಳಿಗೆಯ ಭವಿಷ್ಯ ಮುಖ್ಯವಾದದ್ದು. ಕೇವಲ ನನ್ನ ಜಿಲ್ಲೆ, ನನ್ನ ಕ್ಷೇತ್ರ ಮಾತ್ರವಲ್ಲ, ಭಾರತಕ್ಕೇ ಮಾದರಿಯಾಗಬಲ್ಲ ಶೋಧವೊಂದರ ಬೆನ್ನು ಹತ್ತಿದ ನಮ್ಮ ಪ್ರಯತ್ನ ಇಂದು ಫಲನೀಡುತ್ತಿದೆ. ಡಾ. ಕಟ್ಟೇಶ ಕಟ್ಟಿಯವರೊಂದಿಗಿನ ಸ್ನೇಹ, ಒಡನಾಟ ನನಗೂ ವಿಜ್ಞಾನವನ್ನು ಕಲಿಸಿದೆ. ಇಂದು ನಮ್ಮೆದಿರಿಗಿರುವ ಎಲ್ಲ ಸಮಸ್ಯೆಗಳಿಗೂ ಪರಿಹಾರದ ಭರವಸೆ ನೀಡುತ್ತಿದೆ ಕದಂಬದ, ಗ್ರೀನ್ ನ್ಯಾನೋ ತಂತ್ರಜ್ಞಾನದ ಪ್ರಯೋಗಾಲಯ. ವೈಜ್ಞಾನಿಕವಾಗಿ ಸಿದ್ಧವಾದ ಸೂತ್ರ, ಸಾಮಾನ್ಯರ ಕೈಗೆಟಕುವ ಉತ್ಪನ್ನವಾಗಿ, ಸಾರ್ವಜನಿಕ ಬಳಕೆಯ ಅತ್ಯುಪಯುಕ್ತ ವಸ್ತುಗಳಾಗಿ ಪ್ರಕಟವಾಗುವ ಸಂದರ್ಭ ಒದಗಿಬಂದಿದೆ. ಜನರ ಜೀವನಮಟ್ಟವನ್ನು ಎತ್ತರಿಸುವ, ಅವರ ನೆಮ್ಮದಿಯನ್ನು ವಿಸ್ತರಿಸುವ ಶೋಧಗಳ ಸಂಗಡ ಕಳೆದ ನಾಲ್ಕುವರ್ಷಗಳು ತಪಸ್ಸಿನಂತಿದ್ದವು. ಅದರ ಫಲವನ್ನು ಕಂಡಾಗ; ಸಮಾಜದ ಋಣ ತೀರಿಸಲು ಬೇಕಾದ ವಿದ್ಯೆ ಕರಗತವಾದ ಸಂತೃಪ್ತಿಯಿದೆ, ದಿನನಿತ್ಯದ ರಾಜಕಾರಣವೇ ಬೇಕಿಲ್ಲ ಎಂಬ ಭರವಸೆಯೂ ಮೂಡುತ್ತಿದೆ. ನಾಲ್ಕು ವರ್ಷಗಳ ಮೌನದಿಂದ ನನಗೆ ನೂರು ಕೈಗಳ ಬಲ ಬಂದಿದೆ. ಜನಸಾಮಾನ್ಯರು ಅಪೇಕ್ಷೆಯೇ ಯುಗದ ಸಿದ್ಧಾಂತವಾಗಿ, ಬದುಕಿನ ಸಾಧನವಾಗಿ ರೂಪುಗೊಳ್ಳುತ್ತದೆ ಎಂಬ ಸನಾತನ ಸತ್ಯಕ್ಕೆ ಸಾಕ್ಷಿಯಾದ ಅನನ್ಯ ಅನುಭವ ನನ್ನದು. ಇನ್ನು ಮುಂದೆ ನಮ್ಮೆಲ್ಲರ ಬಾಳನ್ನು ಬೆಳಗಲಿದೆ ಗ್ರೀನ್ ನ್ಯಾನೋ ತಂತ್ರಜ್ಞಾನ.

# ಸದ್ದಿಲ್ಲದ ಸಾಧನೆಗೆ ಶೋಧ ಕದಂಬ

ಕರೋನಾದಿಂದ ಬೆಚ್ಚಿದ ಜಗತ್ತು ಸಾವು-ಬದುಕಿನ ನಡುವೆ ಹೊಯ್ದಾಡುತ್ತಿತ್ತು. ತತ್ಕಾಲದ ಭರವಸೆಯಾಗಿ ಮೂಡಿಬಂದಿದ್ದು ಕೋವಿಡ್ ವ್ಯಾಕ್ಸಿನ್. ಜಗತ್ತು ಮುಂದಿನ ದಿನಗಳಲ್ಲಿ ಎದುರಿಸಬೇಕಾಗಿರುವ ಆರೋಗ್ಯದ ಸಮಸ್ಯೆಗಳಿಗೆ ಮತ್ತು ಈಗಾಗಲೇ ಎದುರಿಸುತ್ತಿರುವ ಸಮಸ್ಯೆಗಳಿಗೆ ವಿಸ್ಮಯಕಾರಿ ಪರಿಹಾರ ಕಂಡುಕೊಳ್ಳುವಲ್ಲಿ ಕದಂಬ ನಿರತವಾಗಿದೆ. ಕಳೆದ ನಾಲ್ಕು ವರ್ಷಗಳ ನಿರಂತರ ಶೋಧದ ಫಲವಾಗಿ ಜಗತ್ತೇ ಬೆರಗಾಗುವಂತಹ ಔಷಧಗಳೂ, ಆಹಾರ ವೈವಿಧ್ಯಗಳೂ ಸಿದ್ಧವಾಗಿವೆ. ಭಾರತೀಯ ಆಯುರ್ವೇದ ಮತ್ತು ಆದುನಿಕ ಔಷಧ ವಿಜ್ಞಾನಗಳ ಸಂಯೋಜನೆಯಿಂದ ಸಿದ್ಧವಾಗಿರುವ ಗ್ರೀನ್‌ನ್ಯಾನೋ ತಂತ್ರಜ್ಞಾನದ ಫಲಗಳು ಜಗತ್ತಿನ ಭವಿಷ್ಯದ ಭರವಸೆಗಳಾಗಿವೆ. ಈ ತಂತ್ರಜ್ಞಾನದ ಸಂಶೋದಕರು ಜಗತ್ತಿನ ಶ್ರೇಷ್ಠ ವಿಜ್ಞಾನಿಗಳಲ್ಲೊಬ್ಬರಾದ ಡಾ. ಕಟ್ಟೇಶ ವಿ. ಕಟ್ಟಿಯವರು.




## ಡಾ. ಕಟ್ಟೇಶ ವಿ. ಕಟ್ಟಿ M.Sc.Ed, PhD, DSC, FRSC, FNAI

ಜಾಗತಿಕವಾಗಿ ಗುರುತಿಸಲ್ಪಟ್ಟ ಶ್ರೇಷ್ಠ ವಿಜ್ಞಾನಿ, ಗ್ರೀನ್ ನ್ಯಾನೊ ತಂತ್ರಜ್ಞಾನದ ಜನಕ ಎನ್ನಿಸಿಕೊಂಡಿರುವ ಅಪ್ರತಿಮ ಸಂಶೋಧಕ, ನೋಬಲ್ ಪ್ರಶಸ್ತಿಗೆ ಸಮನಾದ ಹೆವೆಸಿ ಮೆಡಲ್ ಪ್ರಶಸ್ತಿ (Havesy Medal Award 2015)ಗೆ ಭಾಜನರಾದ ಡಾ. ಕಟ್ಟೇಶ ವಿ. ಕಟ್ಟಿ, ಕರ್ನಾಟಕದ ಹೆಮ್ಮೆಯ ಪುತ್ರರು. ಧಾರವಾಡದಲ್ಲಿ ಹುಟ್ಟಿ ಬೆಳೆದವರು. ಧಾರವಾಡದಲ್ಲಿ ವಿಜ್ಞಾನ ವಿಷಯದಲ್ಲಿ ಪದವಿ ಶಿಕ್ಷಣ, ಮೈಸೂರಿನಲ್ಲಿ ವಿಜ್ಞಾನದ ಸ್ನಾತಕೋತ್ತರ ಅಧ್ಯಯನ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪಿ.ಎಚ್‌ಡಿ ಪದವಿ.

ಪ್ರಸ್ತುತ; ಅಮೆರಿಕಾ, ಕೊಲಂಬಿಯಾದ ಮಿಸೌರಿ ವಿಶ್ವವಿದ್ಯಾಲಯದಲ್ಲಿ, ವೈದ್ಯಕೀಯ ಶಿಕ್ಷಣ ವಿಭಾಗದಲ್ಲಿ ವಿಕಿರಣ ಶಾಸ್ತ್ರದ ಪ್ರಾಧ್ಯಾಪಕರಾಗಿ, ಗ್ರೀನ್ ನ್ಯಾನೋ ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಡಾ. ಕಟ್ಟಿಯವರ ಸರ್ವೋತ್ಕೃಷ್ಟ ಶೈಕ್ಷಣಿಕ ಸಾಧನೆ, ಅತ್ಯಪೂರ್ವವಾದ ಸಂಶೋಧನೆಗಳು ಜಗತ್ತಿನಾದ್ಯಂತ ಗುರುತಿಸಲ್ಪಟ್ಟಿವೆ, ಗೌರವಿಸಲ್ಪಟ್ಟಿವೆ. ಭಾರತೀಯ ಆಯುರ್ವೇದವನ್ನು ಗ್ರೀನ್ ನ್ಯಾನೋ ತಂತ್ರಜ್ಞಾನದ ದೃಷ್ಟಿಯಿಂದ ಕಂಡು ಆವಿಷ್ಕರಿಸಿದ ಅಮೂಲ್ಯ ಔಷಧಗಳು ಸಮಗ್ರ ಮನುಕುಲಕ್ಕೆ ವರದಾನವಾಗಿವೆ. ಮನುಷ್ಯರ ಆರೋಗ್ಯಕ್ಕೆ ದೊಡ್ಡ ಸವಾಲಾಗಿರುವ ಕ್ಯಾನ್ಸರ್, ಕೋವಿಡ್‌ನಂತಹ ಕಾಯಿಲೆಗಳಿಗೆ ನೋವುನೀಡದ ಔಷಧಗಳನ್ನು ಆವಿಷ್ಕರಿಸಿದ್ದು ಅವು ಜಾಗತಿಕ ಮನ್ನಣೆಗೆ ಪಾತ್ರವಾಗಿವೆ. ಅಪ್ಪಟ ಭಾರತೀಯ ಪ್ರಜ್ಞೆ, ಸೀಮೆಯರಿಯದ ಸಂಶೋಧನಾ ಶ್ರದ್ಧೆಯಿಂದ ಅವರು ಪರ್ವತಪ್ರಾಯವಾದುದನ್ನು ಸಾಧಿಸಿದ್ದಾರೆ. ನೂರೈವತ್ತಕ್ಕೂ ಹೆಚ್ಚು ಆವಿಷ್ಕಾರಗಳಲ್ಲಿ ಅವರದು ಸಿಂಹಪಾಲು. ಐವತ್ತಕ್ಕೂ ಹೆಚ್ಚು ಪೇಟೆಂಟ್‌ಗಳನ್ನು ಪಡೆದಿದ್ದಾರೆ. ಆರೂವರೆ ದಶಕಗಳಲ್ಲಿ ಅವರು ಮಾಡಿದ ಸಾಧನೆ ಅನೂಹ್ಯವಾದದ್ದು. ಡಾ. ಕಟ್ಟೇಶ ಕಟ್ಟಿಯವರು ತಮ್ಮ ಸಂಶೋಧನೆಯ ಫಲಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಕದಂಬ ಸಂಸ್ಥೆಯೊಂದಿಗೆ ದುಡಿಯುತ್ತಿದ್ದಾರೆ. ಡಾ. ಕಟ್ಟಿಯರೊಂದಿಗಿನ ನನ್ನ ಒಡನಾಟ ದಶಕಗಳದ್ದು. ಕದಂಬ ಸಂಸ್ಥೆಗೆ ಸಂಶೋಧನೆಯ ಬಲ ನೀಡಿದ ಅವರಿಗೆ ಸಂಸ್ಥೆ ಸದಾ ಕೃತಜ್ಞವಾಗಿದೆ.


# ತಾಯ್ನೆಲದ ಪೂಜೆಯಲ್ಲಿ ಮುಗಿಯದ ಸೇವೆ

ಈ ಭೂಮಿಯಲ್ಲಿ ನನ್ನ ಲೌಕಿಕ ಬದುಕಿನಿಂದಾಚೆಗೂ ಒಂದು ಭವ್ಯವಾದ ಬದುಕಿದೆ ಎಂದೆನಿಸಿತ್ತು. ಅಂತಹ ಬದುಕನ್ನು ನೋಡುವ ತಹತಹ ಇತ್ತು, ತಳಮಳವೂ ಇತ್ತು. ಸೋಲು ಗೆಲುವಿನ ಆತಂಕದಿಂದಾಚೆ ಜೀವನವನ್ನು ನಿತ್ಯ ಸತ್ಯವಾಗಿಸುವ ಹಾಗೂ ಎಂದೂ ನಿಲ್ಲದ ಪ್ರವಾಹವಾಗಿಸುವ, ಚೈತನ್ಯದ ಪೂಜೆಯನ್ನಾಗಿಸುವ ಹಂಬಲ ಕಾಡುತ್ತಿತ್ತು. ಆದರೆ, ಆರಂಭ ಎಲ್ಲಿಂದ ತಿಳಿದಿರಲಿಲ್ಲ. ಜ್ಞಾನಿಗಳು, ಹಣವಂತರು, ಅಧಿಕಾರ ಇದ್ದವರು ಅವರದೇ ಆದ ರೀತಿಯಲ್ಲಿ ಪೂಜೆ ಮಾಡುತ್ತಾರೆ. ಅದನ್ನೆಲ್ಲ ಗಮನಿಸುತ್ತಾ ಇದ್ದೆ. ಆದರೆ, ಅಂತಹ ಯಾವುದೇ ಉಪಾಧಿಗಳಿಲ್ಲದ ನಾನು ಈ ಪೂಜೆಯನ್ನು ಎಲ್ಲಿಂದ, ಹೇಗೆ ಆರಂಭಿಸಲಿ ಎಂದು ಗೊತ್ತಿರಲಿಲ್ಲ. ಆಕಸ್ಮಿಕವಾಗಿ ಆರಂಭವಾದದ್ದು ಈ ಉಪಕ್ರಮ. ಇಂದು ನನ್ನ ಬದುಕಿನ ಪಯಣವಾಗಿದೆ. ಬೀಜರೂಪಿ ಸಂಕಲ್ಪ, ಕದಂಬವಾಗಿ ಪರಿವರ್ತನೆಗೊಂಡಿದೆ.

ನೊಂದು ಬಂದವರ ಬದುಕಿಗೆ ಸಾಂತ್ವನದ ನುಡಿ ಹೇಳಹೊರಟಾಗ ರೂಪಗೊಂಡಿದ್ದು ಕದಂಬ ಫೌಂಡೇಶನ್. ಉಳುವ ರೈತನ ನೇಗಿಲಿಗೆ ಸಿಕ್ಕ ಸೀತೆಯಂತೆ. ಇದು, ಬದುಕಿನ ಆರಾಧನೆಯ ಕೇಂದ್ರವಾದದ್ದು ನನ್ನ ಜನ್ಮದ ಸಾರ್ಥಕತೆ ಎಂದು ಭಾವಿಸಿದ್ದೇನೆ. ಹೋರಾಟದಲ್ಲಿ ಸ್ಫೂರ್ತಿಯನ್ನು ಕಂಡ ನನ್ನ ಬದುಕಿಗೆ ಸೇವೆಯಲ್ಲಿ ನೆಮ್ಮದಿ, ಸಂತೃಪ್ತಿ ಸಿಕ್ಕರೆ; ದಾರಿಹೋಕನಿಗೆ ಸಿಕ್ಕ ಮಾಣಿಕ್ಯದಂತಲ್ಲದೆ ಮತ್ತೇನು?

ಯಾವುದೇ ಪೂಜೆ, ಆರಾಧನೆ ಅದೊಂದು ಮುಗಿಯದ ಅನಂತ ಕಾಯಕ. ತಾಯ್ನೆಲದ ಪೂಜೆಯಲ್ಲಿ, ಸೇವೆಯಲ್ಲಿ ನನ್ನನ್ನು ನಾನು ಅರ್ಪಿಸಿಕೊಳ್ಳುವ ಸೌಭಾಗ್ಯ ಈ ಜನ್ಮದಲ್ಲಿ ಭಗವಂತ ಕರುಣಿಸಿದ್ದಕ್ಕೆ, ಈ ಕಣ್ಣಿಗೆ ಕಾಣದ ಆ ಪಾದಪದ್ಮಗಳಿಗೆ ನನ್ನ ಅನಂತ ನಮನಗಳನ್ನು ಸಲ್ಲಿಸುತ್ತೇನೆ. ದುರ್ಬಲರಿಗೆ ಸೇವೆ ಸಲ್ಲಿಸುವ ಈ ಕರ್ಮಯೋಗ ನನಗೊಂದು ಸಾಮಾಜಿಕ ಗುರುತು ನೀಡಿದೆ. ಇಷ್ಟೇ ಸಾಕು.... ಈ ಸಮಾಜದೇವತೆಯ ಪದತಲದಲ್ಲಿ ಹೂವಾಗುವ ಸೌಭಾಗ್ಯ ಅದೆಷ್ಟು ಜನರಿಗೆ ತಾನೇ ಸಿಕ್ಕೀತು!

ಹೆತ್ತ ತಾಯೊಡಲಿಗೆ,
ಬದುಕು ಕೊಟ್ಟ ಈ ಮಣ್ಣಿಗೆ,
ಗುರುತು ಕೊಟ್ಟ ನನ್ನ ಜನಕ್ಕೆ,
ಸೇವೆಯ ಸೌಭಾಗ್ಯವನ್ನು ಒದಗಿಸಿಕೊಟ್ಟ
ಜನಮನಕ್ಕೆ, ಮತ್ತೊಮ್ಮೆ, ಮತ್ತೊಮ್ಮೆ,
ಮತ್ತೊಮ್ಮೆ ಸಾಷ್ಟಾಂಗವೆರಗುತ್ತೇನೆ.





ಮನುಷ್ಯ ಸಮಾಜವೇ ಒಂದು ಸಹಕಾರ. ಕೂಡಿ ಬದುಕುವ ಹಂಬಲ ಮತ್ತು ಪರಸ್ಪರ ನೆರವುಗಳೇ ಮನುಷ್ಯತ್ವಕ್ಕೆ ಪ್ರಮಾಣ. ಕುಟುಂಬ, ಸಮಾಜ ಎಲ್ಲವೂ ಸಹಕಾರದಿಂದಲೇ ಸಾಧ್ಯವಾಗಿವೆ.

ಕೃಷಿ ಎಂದರೆ ಬೀಜದೊಳಗಿನ ಮರವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಆಧ್ಯಾತ್ಮದ ಬೆರಗು. ಮತ್ತದೇ ಮರದ ಮಾಗಿದ ಫಲದ ತಿರುಳಿಗಂಟಿದ ಬೀಜಗಳಲ್ಲಿ ನೂರು ಮರಗಳ ಕನಸು.

ನೈತಿಕತೆ ಮರೆಯಾದಲ್ಲಿ, ಕಾನೂನು ಸೋತಲ್ಲಿ, ಜೀವಕಾರುಣ್ಯ ಗೆಲ್ಲಿಸುತ್ತದೆ.



Kadamba Foundation

Kadamba Society

Kadamba Nano

ತಾಲೂಕ ಪಂಚಾಯತ್ ಕಚೇರಿ ಎದರು, ಶಿರಸಿ,
ಉತ್ತರ ಕನ್ನಡ –581 401,ಕರ್ನಾಟಕ